ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೪ ಮಾರ್ಚಿ ಸಂಚಿಕೆ ೮



ವಿಷಯ ಸೂಚಿ

ಮುಖಚಿತ್ರ : ೫೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ
ಅಧ್ಯಕ್ಷ ಪ್ರೊ|| ಎ. ಎನ್. ಮೂರ್ತಿರಾವ್

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಮಾರ್ಚಿ ೧೯೮೪ ಸಂಚಿಕೆ ೮

ಐವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪ್ರೊ|| ಎ. ಎನ್. ಮೂರ್ತಿರಾವ್

ಪ್ರಬಂಧಕಾರರೆಂದು, ವಿಮರ್ಶಕರೆಂದು ಪ್ರಸಿದ್ಧರಾಗಿರುವ ಅಕ್ಕಿಹೆಬ್ಬಾಳು ಮೂರ್ತಿರಾಯರು ನಮ್ಮ ನಾಡಿನ ಹಿರಿಯ ಲೇಖಕರಲ್ಲೊಬ್ಬರು. 'ಸೌಜನ್ಯಶೀಲ'ರಾದ ಮೂರ್ತಿರಾಯರು 'ಶುಚಿ-ರುಚಿ'ಯಾದ ಬರವಣಿಗೆಗೆ ಹೆಸರಾಗಿದ್ದಾರೆ.

ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬ ಗ್ರಾಮದಲ್ಲಿ ತಾ|| ೧೬-೬-೧೯೦೦ರಲ್ಲಿ ಹುಟ್ಟಿದ ಮೂರ್ತಿರಾಯರು, ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಆರಂಭದ ಶಿಕ್ಷಣ ಪಡೆದರು. ಅನಂತರ ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾದ ಅವರು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯವನ್ನೂ ವಿಶೇಷವಾಗಿ ವ್ಯಾಸಂಗ ಮಾಡಿದರು. ಜೊತೆಗೆ ತತ್ತ್ವಶಾಸ್ತ್ರ, ಅರ್ಥಶಾಸ್ತ್ರಗಳನ್ನೂ ಓದಿದರಲ್ಲದೆ ಫ್ರೆಂಚನ್ನೂ ಕಲಿತರು. ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕಗೊಂಡು ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಅನಂತರ ಉಪಪ್ರಾಧ್ಯಾಪಕರೂ ಪ್ರಾಧ್ಯಾಪಕರೂ ಆಗಿ ಸೇವೆ ಸಲ್ಲಿಸಿದರು. ಮೂರ್ತಿರಾಯರು ಬೋಧನಾ ಕ್ಷೇತ್ರದಲ್ಲಿ ಅಲ್ಲದೆ ಆಡಳಿತ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಚಿತ್ರದುರ್ಗ ಇಂಟರ್‌ಮೀಡಿಯೇಟ್ ಕಾಲೇಜಿನ ಸೂಪರಿಂಟೆಂಡೆಂಟರಾಗಿ ಕೆಲಸ ಮಾಡಿದ ಅವರು ಮುಂದೆ ಮೈಸೂರು 'ಆಕಾಶವಾಣಿ'ಯ ಉಪನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ಆಗಿನ ಮೈಸೂರು ಸರ್ಕಾರದ 'ಸಾಹಿತ್ಯ ಮತ್ತು ಸಂಸ್ಕೃತಿ

ಅಭಿವೃದ್ಧಿ ಇಲಾಖೆ'ಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿ ಈಗ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಆಚಾರ್ಯ ಬಿಎಂಶ್ರೀ, ಎಸ್. ಎಸ್. ಸುಬ್ಬರಾವ್ ಮುಂತಾದ ಗುರುಗಳ; ಟಿ. ಎಸ್. ವೆಂಕಣ್ಣಯ್ಯ, ತೀ. ನಂ. ಶ್ರೀಕಂಠಯ್ಯ ಮುಂತಾದ ಹಿರಿಯ ಗೆಳೆಯರ ಪ್ರೇರಣೆ–ಪ್ರೋತ್ಸಾಹಗಳಿಂದ ಬರೆವಣಿಗೆ ಆರಂಭಿಸಿದ ಮೂರ್ತಿ ರಾಯರು, ಪ್ರಬಂಧ, ವಿಮರ್ಶೆ ಮತ್ತು ಭಾಷಾಂತರ ಕ್ಷೇತ್ರದಲ್ಲಿ ಗಣ್ಯವಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಕಟವಾದ ಅವರ ಮೊದಲ ಪುಸ್ತಕ 'ಆಶಾಢ ಭೂತಿ' ಮೋಲಿಯೇರ್‌ನ 'ತಾರ್ತುಫ್' ಎಂಬ ನಾಟಕದ ರೂಪಾಂತರ. ಅವರ ಈಚಿನ ಪುಸ್ತಕ 'ಪೂರ್ವಸೂರಿಗಳೊಡನೆ' (೧೯೮೨) ಒಂದು ವಿಮರ್ಶಾ ಗ್ರಂಥ.

ಕನ್ನಡದ ಆದ್ಯ ಪ್ರಬಂಧಕಾರರಲ್ಲಿ ಒಬ್ಬರಾಗಿರುವ ಮೂರ್ತಿರಾಯರು 'ಹಗಲುಗನಸುಗಳು' (೧೯೩೭); 'ಅಲೆಯುವ ಮನ' (೧೯೫೭) ಮತ್ತು 'ಮಿನುಗು–ಮಿಂಚು' (೧೯೬೨) ಎಂಬ ಮೂರು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಒಟ್ಟು ಮುವತ್ತೆರಡು ಪ್ರಬಂಧಗಳಿವೆ. 'ಗೌರಜ್ಜಿ' ಪ್ರಬಂಧ ಸಾಹಿತ್ಯ ಪ್ರಕಾರದಲ್ಲಿ ಇವರಿಗೆ ಮಸುಳದ ಕೀರ್ತಿ ತಂದುಕೊಟ್ಟ ಪ್ರಬಂಧ. 'ದಿವಾನಖಾನೆಯ ಅಂದ–ಚೆಂದ'; ಹೂಗಳು' 'ಹೋಟಿಲುಗಳು.' 'ಲಲಿತೆಯ ವಿದ್ಯಾಭ್ಯಾಸ'; 'ಪ್ರಣಯ ಯಾತ್ರೆ'—ಇವರ ಇತರ ಪ್ರಸಿದ್ಧ ಪ್ರಬಂಧಗಳು. ನವದಂಪತಿಗಳ ಮನೋವ್ಯಾಪಾರದ ಸೂಕ್ಷ್ಮ ವಿಶ್ಲೇಷಣೆ, ಜನಪ್ರಿಯ ವಸ್ತುಸಂಗತಿಗಳನ್ನು ಕುರಿತ ಪರಿವೀಕ್ಷಣೆ. ಆರೋಗ್ಯಕರವಾದ ದೃಷ್ಟಿ ಮತ್ತು ತಿಳಿಯಾದ ಹಾಸ್ಯ—ಇವರ ಪ್ರಬಂಧಗಳ ಮುಖ್ಯ ಗುಣಗಳು. ಜೊತೆಗೆ ಆಪ್ತತೆ. ಆತ್ಮೀಯತೆ, ಆತ್ಮನಿಷ್ಠೆ ಮತ್ತು ಮಾನವತೆಗಳನ್ನೂ ಇವರ ಪ್ರಬಂಧ ಗಳಲ್ಲಿ ಧಾರಾಳವಾಗಿ ಕಾಣಬಹುದು. ಒಟ್ಟಿನಲ್ಲಿ 'ತುಂಬುಚಟುವಟಿಕೆಯ ವೈವಿಧ್ಯಮಯ ಜೀವನದ ಹಂಬಲ' ಮೂರ್ತಿರಾಯರ ಪ್ರಬಂಧಗಳ ಜೀವ-ಜೀವಾಳವಾಗಿದೆ.

ಮೂರ್ತಿರಾಯರು ಬರೆದಿರುವ 'ಚಿತ್ರಗಳು–ಪತ್ರಗಳು' (೧೯೭೮) ಒಂದು ವಿಶಿಷ್ಟ ಕೃತಿ. 'ಚಿತ್ರಗಳು' ವಿಭಾಗದಲ್ಲಿ ತಮ್ಮ ವಿದ್ಯಾಗುರುಗಳಾಗಿದ್ದ ರೆವರೆಂಡರ ಆರ್. ಡಬ್ಲ್ಯೂ. ಬೂಟ್; ಎನ್. ದೇಶಿಕಾಚಾರ್ಯ; ಡಿ ಎನ್. ಮೂರ್ತಿ; ಎಸ್. ರಾಧಾಕೃಷ್ಣನ್; ಎನ್. ಎಸ್. ಸುಬ್ಬರಾವ್; ಎ. ಬಿ. ಮ್ಯಾಕಿಂಟಾಷ್; ಜೆ. ಸಿ. ರಾಲೋ; ಬಿ. ಎಂ. ಶ್ರೀಕಂಠಯ್ಯ ಇವರನ್ನು

ಕುರಿತ ಮತ್ತು ಹಿರಿಯ ಗೆಳೆಯರಾಗಿದ್ದ ಟಿ. ಎಸ್. ವೆಂಕಣ್ಣಯ್ಯ ಮತ್ತು ತೀ. ನಂ. ಶ್ರೀಕಂಠಯ್ಯ ಇವರನ್ನು ಕುರಿತ ವ್ಯಕ್ತಿ ಚಿತ್ರಗಳಿವೆ. ಈ ವಿಭಾಗ ದಲ್ಲಿರುವ ಇನ್ನೆರಡು ಲೇಖನಗಳು: ಡಾ|| ಎಂ. ವಿ. ಗೋಪಾಲಸ್ವಾಮಿ ಮತ್ತು ಆಕಾಶವಾಣಿ ಕೆ. ಹನುಮಂತಯ್ಯನವರು ಮತ್ತು ಸಂಸ್ಕೃತಿ ಪ್ರಸಾರ. 'ಆಕಾಶವಾಣಿ' ಮತ್ತು 'ಸಂಸ್ಕೃತಿ ಪ್ರಸಾರ ಇಲಾಖೆ'ಗಳಲ್ಲಿ ಕೆಲಸ ಮಾಡಿದ್ದ ಮೂರ್ತಿರಾಯರು, ಅಲ್ಲಿಯ ತಮ್ಮ ಅನುಭವಗಳನ್ನು ಈ ಲೇಖನಗಳಲ್ಲಿ ಸ್ವಾರಸ್ಯವಾಗಿ ಬಣ್ಣಿಸಿದ್ದಾರೆ. 'ಪತ್ರಗಳು' ವಿಭಾಗದಲ್ಲಿ ಮೂರ್ತಿರಾಯರು ತಮ್ಮ ಆತ್ಮೀಯ ಗೆಳೆಯರಾಗಿದ್ದ ತೀನಂಶ್ರೀ ಅವರಿಗೆ ಬರೆದ ಪತ್ರಗಳು ಮತ್ತು ದೂರದ ದೇಶದಲ್ಲಿದ್ದ ಮಗ ಮತ್ತು ಸೊಸೆಗೆ ಬರೆದ ಪತ್ರಗಳೂ ಸೇರಿವೆ. ಮೂರ್ತಿರಾಯರು ತಮ್ಮ ಜೀವನದ ಕೆಲವು ಮುಖ್ಯ ಘಟ್ಟಗಳ ನೆನಪುಗಳನ್ನು 'ಚಿತ್ರಗಳು–ಪತ್ರಗಳು' ರೂಪದಲ್ಲಿ ನೆನೆದಿದ್ದಾರೆ. ಕುತೂಹಲ ಪ್ರವೃತ್ತಿ, ಜಿಕಿತ್ಸಿಕ ದೃಷ್ಟಿ ಮತ್ತು ಲಘುಹಾಸ್ಯದಿಂದ ಕೂಡಿರುವ ಈ ಪುಸ್ತಕ ಆಪ್ತ ಬರೆವಣಿಗೆಗೂ ಮಾದರಿಯಾಗಿದೆ.

ಆಚಾರ್ಯ 'ಶ್ರೀ' ಅವರನ್ನು ಕುರಿತು ಮೂರ್ತಿರಾಯರು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ 'ಬಿ. ಎಂ. ಶ್ರೀಕಂಠಯ್ಯ' ಎಂಬ ಜೀವನ ಚರಿತ್ರೆ ಬರೆದಿ ದ್ದಾರೆ. 'ಶ್ರೀ' ಅವರ ದೊಡ್ಡ ವ್ಯಕ್ತಿತ್ವ ಮತ್ತು ಅವರ ಸಾಹಿತ್ಯ ಸಂಪತ್ತನ್ನು ಈ ಎರಡೂ ಪುಸ್ತಕಗಳಲ್ಲಿ ವಿವರವಾಗಿ ಪರಿಚಯಿಸಿದ್ದಾರೆ.

ವಿಮರ್ಶಾ ರಂಗದಲ್ಲೂ ಮೂರ್ತಿರಾಯರು ಮಾಡಿರುವ ಕೆಲಸ ದೊಡ್ಡ ದಾಗಿಯೇ ಇದೆ. 'ಮಾಸ್ತಿಯವರ ಕಥೆಗಳು' (೧೨೭೧). 'ವಿಮರ್ಶಾತ್ಮಕ ಪ್ರಬಂಧಗಳು' (೧೯೮೨). 'ಸಾಹಿತ್ಯ ಮತ್ತು ಸತ್ಯ' (೧೯೮೨) ಮತ್ತು 'ಪೂರ್ವಸೂರಿಗಳೊಡನೆ?' (೧೯೮೨)—ಇವು ಮೂರ್ತಿರಾಯರು ಪ್ರಕಟಿಸಿರುವ ವಿಮರ್ಶಾ ಲೇಖನಗಳ ಸಂಕಲನಗಳು. ಮಾಸ್ತಿಯವರ ಕಥೆಗಳನ್ನು ಕುರಿತ ವ್ಯಾಪಕವಾದ ವಿಮರ್ಶೆಯನ್ನು 'ಮಾಸ್ತಿಯವರ ಕಥೆಗಳು' ಪುಸ್ತಕದಲ್ಲಿ ಮಾಡಿದ್ದಾರೆ. ವಿದ್ವತ್ತು, ಚಿಂತನೆ, ಸಹೃದಯತೆ ಮೂರ್ತಿರಾಯರ ವಿಮರ್ಶೆಯ ಲಕ್ಷಣಗಳು.

ಭಾಷಾಂತರ ಕ್ಷೇತ್ರದಲ್ಲಿ ಮೂರ್ತಿರಾಯರು ಮಾಡಿರುವ ಕೆಲಸ ಅನನ್ಯ ವಾದುದು. ಇಂಗ್ಲಿಷಿನಿಂದ ಅನೇಕ ಕೃತಿಗಳನ್ನು ಕನ್ನಡಕ್ಕೆ ತಂದಿರುವುದರ ಜತೆಗೆ ಕನ್ನಡದ ಕೃತಿಗಳನ್ನೂ ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಜವಾಹರಲಾಲ್ ನೆಹರು ಅವರ ಇಂಡಿಯ: ಟುಡೇ ಅಂಡ್ ಟುಮಾರೋ' ಪುಸ್ತಕವನ್ನು

'ಇಂಡಿಯ: ಇಂದು ಮತ್ತು ನಾಳೆ' (೧೯೬೦) ಎಂಬ ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. 'ಹವಳದ ದ್ವೀಪ'; 'ಮೋಲಿಯೇರನ ಎರಡು ನಾಟಕಗಳು' 'ಸಾಕ್ರಟಿಸನ ಕೊನೆಯ ದಿನಗಳು'; 'ಪಾಶ್ಚಾತ್ಯ ಸಣ್ಣ ಕಥೆಗಳು'; 'ಷೇಕ್ಸ್‌ಪಿಯರ್' (ಪೂರ್ವಭಾಗ); 'ಚಂಡಮಾರುತ' ಮತ್ತು 'ಸಂಯುಕ್ತ ಸಂಸ್ಥಾನಗಳ ಸಾಹಿತ್ಯ'—ಇವು ಮೂರ್ತಿರಾಯರು ಇಂಗ್ಲಿಷಿನಿಂದ ಕನ್ನಡಕ್ಕೆ ತಂದಿರುವ ಇತರ ಪುಸ್ತಕಗಳು. ಶಿವರಾಮಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು 'ದಿ ರಿಟರ್ನ್ ಟು ದಿ ಸಾಯಿಲ್' ಎಂಬ ಹೆಸರಿನಿಂದ ಇಂಗ್ಲಿಷಿಗೆ ಅನುವಾದಿಸಿದ್ದಾರೆ.


'ಪ್ರವಾಸ ಪ್ರಿಯ'ರಾದ ಮೂರ್ತಿರಾಯರು ದೇಶದ ಹೊರಗೂ ಸುತ್ತಾಡಿದ್ದಾರೆ. ಫಿಲಿಪ್ಪೀನ್ಸ್, ಇಂಗ್ಲೆಂಡ್, ಕೆನಡ, ಆಫ್ರಿಕ ದೇಶಗಳಿಗೆ ಹೋಗಿ ಬಂದಿರುವ ಮೂರ್ತಿರಾಯರು ೧೯೭೩ ಮತ್ತು ೧೯೭೬ರಲ್ಲಿ ಅಮೇರಿಕ ದೇಶದಲ್ಲಿ ಪ್ರವಾಸ ಮಾಡಿದ್ದರು. ತಮ್ಮ ಈ ಪ್ರವಾಸದ ಅನುಭವಗಳನ್ನು 'ಅಪರ ವಯಸ್ಕನ ಅಮೆರಿಕಾ ಯಾತ್ರೆ' (೧೯೭೯). ಪುಸ್ತಕದಲ್ಲಿ ಆತ್ಮೀಯವಾಗಿ ಮತ್ತು ಸ್ವಾರಸ್ಯವಾಗಿ ಹೇಳಿಕೊಂಡಿದ್ದಾರೆ. ಅನುಭವ, ವ್ಯಾಸಂಗ, ಲೋಕಜ್ಞಾನ ಮತ್ತು ಕಲಾ ನೈಪುಣ್ಯಗಳ ಸಂಗಮದಂತಿರುವ ಈ ಪುಸ್ತಕ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಒಂದು ಗಣ್ಯವಾದ ಕೊಡುಗೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಿದ್ದ ಮೂರ್ತಿರಾಯರು, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ (೧೯೫೩-೫೪) ಮತ್ತು ಪರಿಷತ್ತಿನ ಅಧ್ಯಕ್ಷರಾಗಿಯೂ (೧೯೫೪-೫೬) ಕಾರ್ಯನಿರ್ವಹಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮೂರ್ತಿರಾಯರು ನಡೆಸಿರುವ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಗೆಬಗೆಯ ಗೌರವಗಳು ಲಭಿಸಿವೆ. ಅವರ 'ಹಗಲು ಗನಸುಗಳು' ಪ್ರಬಂಧ ಸಂಕಲನಕ್ಕೆ ೧೯೩೬ರಲ್ಲಿ ದೇವರಾಜ ಬಹುದ್ದೂರ್ ದತ್ತಿ ಬಹುಮಾನ ಬಂತು. ಅವರ 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಪ್ರವಾಸ ಗ್ರಂಥಕ್ಕೆ, ೧೯೭೯ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆಯಿತು. ಅದೇ ವರ್ಷ ಅವರ 'ಪತ್ರಗಳು-ಪತ್ರಗಳು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಅವರ 'ಚಂಡಮಾರುತ' ನಾಟಕಕ್ಕೆ ೧೯೮೧ ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿತು. ಕರ್ನಾಟಕ ರಾಜ್ಯ ಸಾಹಿತ್ಯ

ಅಕಾಡೆಮಿ ಮೂರ್ತಿರಾಯರಿಗೆ ೧೯೭೪ ರಲ್ಲಿ 'ಪ್ರಶಸ್ತಿ' ನೀಡಿ ಗೌರವಿಸಿತು. ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ-ಲಿಟ್ ಪದವಿ ನೀಡಿದೆ. ಇದೀಗ 'ಪುಣ್ಯಕ್ಷೇತ್ರ' ಕೋಲಾರ ಜಿಲ್ಲೆಯ ಕೈವಾರದಲ್ಲಿ ನಡೆಯಲಿರುವ ೫೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷತೆ; 'ಹಿರಿಯ ಸಾಹಿತ್ಯ ಜೀವಿಗೆ' ಸಂದಿರುವ 'ಹಿರಿಯಮನ್ನಣೆ.'

ಎಸ್. ಚನ್ನಪ್ಪ



ಅದೃಷ್ಟ ಹೀನನು ಹೋದಲ್ಲಿಗೆಲ್ಲ ವಿಪತ್ತುಗಳೂ ಅವನನ್ನು ಹಿಂಬಾಲಿಸಿ ಹೋಗುತ್ತವೆ.

—ಭರ್ತೃಹರಿ

ಪ್ರೇಮವೇ ದೇವರು; ಶಕ್ತಿ ಅವನ ಲಾಂಛನ. ಆದ್ದರಿಂದ ದೇವರ ಶಕ್ತಿಗಿಂತ ಪ್ರೇಮವೇ ಹಿರಿದು.

—ರಿಚರ್ಡ್ ಗಾರ್ನೆಟ್

ಸೋಲು ಗೆಲುವಿನ ಕಡೆ ಎಸೆಯುವ ಮಣ್ಣೇ ಅಸೂಯೆ.

—ಎನ್. ವಾಯ್, ಗ್ಲೋಬ

ಆತ್ಮವನ್ನು ಕಳೆದುಕೊಂಡು ಇಡೀ ಜಗತ್ತನ್ನೇ ಪಡೆದರೆ ತಾನೇ ಏನು ಪ್ರಯೋಜನ?

—ಬೈಬಲ್

ಅಮೆರಿಕಾದ ಜನಜೀವನ

ಅಮೆರಿಕಾ ಬಹು ವಿಸ್ತಾರವಾದ ದೇಶ. ಭಾರತದ ಮೂರರಷ್ಟು ವಿಶಾಲ. ನಾವಿದ್ದುದು ಅಮೆರಿಕಾದ ಪೂರ್ವಭಾಗದಲ್ಲಿ. ಅದೂ ಒಂದೆರಡು ತಿಂಗಳ ಮಟ್ಟಿಗೆ. ನಮ್ಮ ನಿಕಟಸಂಬಂಧ ಅಲ್ಲಿಯ ಜನಸಾಮಾನ್ಯರೊಡನೆ ಅಷ್ಟೊಂದು ಬೆಳೆದಿದ್ದಿಲ್ಲ. ಹಾಗಾಗಿ ನಮ್ಮ ಅಭಿಪ್ರಾಯ ಸಮಗ್ರವಾಗದಿರಲಿಕ್ಕೂ ಸಾಕು. ಆನೆಯ ಕಾಲು ಹಿಡಿದ ಕುರುಡ-ಆನೆ ಕಂಬದಂತಿದೆ-ಎಂದು ಹೇಳಿದಂತಾಗ ಬಹುದು ಎಂಬೀ ಶಂಕೆಯೂ ನಮಗಿದೆ.

ಆದರೆ ಹತ್ತಾರು ವರ್ಷಗಳಿಂದ ಅಲ್ಲೇ ವಾಸಿಸಿಕೊಂಡು ಮುಂದೆ ಬಂದ ಹಲವರನ್ನು ಕಂಡು ಮಾತಾಡಿದೆವು. ಅವರೊಡನೆ ಧಾರಾಳವಾಗಿ ವಿಚಾರ ವಿನಿಮಯ ಮಾಡಿದೆವು. ಅಲ್ಲಿನ ಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದೆವು. ಇಲ್ಲಿಯಂತೆ ಅಲ್ಲಿಯೂ ಪತ್ರಿಕೆಗಳಲ್ಲಿ ರಾಜಕೀಯಕ್ಕೆ ಪ್ರಾಶಸ್ತ್ಯವಿದ್ದರೂ ಇತರ ವಿಷಯಗಳ ಮೇಲೂ ಧಾರಾಳವಾದ ವಾರ್ತೆ, ವಿಮರ್ಶೆ ಬರುತ್ತದೆ.

ಅವನ್ನೆಲ್ಲ ಓದಿ, ನೋಡಿ, ಸಂಚರಿಸಿ ಬಂದ ಮೇಲೆ ಕೆಲವೆಲ್ಲ ವಿಚಾರಗಳು ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುತ್ತವೆ. ಅಮೆರಿಕನ್ನರ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ಮುಂದು ಬರಬೇಕೆಂಬ ಹಿರಿಯಾಸೆ-ಇವೆಲ್ಲ ಆಕರ್ಷಕ ಆದರ್ಶಗುಣಗಳು. ಸೋಮಾರಿತನವನ್ನು ಅವರು ಪರಮಶತ್ರುವೆಂದು ಭಾವಿಸಿದಂತಿದೆ.

ವಾರಕ್ಕೈದು ದಿನ ಹೆಚ್ಚಿನವರು ಅಲ್ಲಿ ದುಡಿಯುವುದಾದರೂ, ಮನಃಪೂರ್ವಕವಾಗಿ ದುಡಿಯುತ್ತಾರೆ. ವಾರಾಂತ್ಯದ ಶನಿ-ಭಾನುವಾರಗಳಲ್ಲಿ ಆರಾಮವಾಗಿ ಕಾಲ ಕಳೆಯುತ್ತಾರೆ. ಅಲ್ಲಿನ ಸರ್ಕಾರಿ ಕಛೇರಿಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ, ಹೆಚ್ಚಿನ ಕಾರ್ಖಾನೆಗಳಲ್ಲಿ-ವಾರಕ್ಕೈದು ದಿನದ ಕೆಲಸ. ಮಾತ್ರವಲ್ಲದೆ ಕೆಲಸದಲ್ಲಿ ಮೈಗಳ್ಳತನ, ಭ್ರಷ್ಟಾಚಾರ-ಇತ್ಯಾದಿಗಳು ಬಹಳ ಅಪರೂಪ.

ಲಂಚಾಭಾವ : ಮತ್ತೊಂದು ಮಹತ್ವದ ವಿಚಾರವೆಂದರೆ-ಅಲ್ಲಿ ಸೇವಾರಕ್ಷಣೆ (Security of Service), ಖಾಯಂ ಕೆಲಸ-ಮುಂತಾದ ಅಂಶಗಳು ಕಡಿಮೆ ಅಥವಾ ಇಲ್ಲ. ಇಂದು ಕೆಲಸದಲ್ಲಿದ್ದವನಿಗೆ ನಾಳೆ ಮನೆಗೆ ಹೋಗಲು ಹೇಳಿದರೂ ಆಶ್ಚರ್ಯವಿಲ್ಲ. ಸರ್ಕಾರಿ ಕಛೇರಿಗಳಲ್ಲಿ ಸಹ ಒಪ್ಪಂದದ ನೇಮಕ (Contract Appointment) ಮೂರು ಅಥವಾ ಐದು ವರ್ಷಗಳ ಅವಧಿಯ ನೇಮಕ. ಆ ಒಪ್ಪಂದವನ್ನು ಪುನರ್ನವೀಕರಿಸಲೂ ಬಹುದು. ಈ ಒಂದು ಸಂಪ್ರದಾಯ ಅಲ್ಲಿರುವುದರಿಂದ, ಎಲ್ಲರೂ ಎಲ್ಲ ಕಾಲ

ದಲ್ಲೂ ಬಹು ಎಚ್ಚರಿಕೆಯಿಂದ ತಮ್ಮ ತಮ್ಮ ಕೆಲಸ ಮಾಡಿಕೊಂಡು ಹೋಗು ತ್ತಾರೆ. ಲಂಚ, ಭ್ರಷ್ಟಾಚಾರ, ಪಕ್ಷಪಾತ-ಮುಂತಾದುವು ಬರಲಿಕ್ಕೆ ಸಾಧ್ಯವೇ ಇಲ್ಲ. ಸೇವಾಶಿಬಿರದಲ್ಲಿ ಪಕ್ಷಪಾತ, ಅನಾಸಕ್ತಿಗಳು ತೋರಲವಕಾಶ ವಿದ್ದರೂ ಕೆಳಮಟ್ಟಕ್ಕೆ ಅದು ಇಳಿದು ಬರಲಿಕ್ಕೆ ಸಾಧ್ಯವೇ ಇಲ್ಲ.

ರಸ್ತೆ ನಿಯಮ ಉಲ್ಲಂಘಿಸಿದಾಗ ಪೋಲಿಸರವನು ಚಾರ್ಜ್‌ಮಾಡಿ ಕಾರ್ಡು ಕೊಡುತ್ತಾನೆ. ಆತನ ಕೈ ಬಿಸಿಮಾಡ ಹೊರಟರೆ ಮತ್ತೊಂದು ಚಾರ್ಜ್ ಕಾರ್ಡು ಅಪರಾಧಿಯ ಕೈಗೆ ದೊರಕಿ, ಜೈಲುವಾಸ ಅನುಭವಿಸಬೇಕಾಗಲೂ ಬಹುದು. ಇದು ಅಲ್ಲಿಯ ವ್ಯವಹಾರ. ಇದೊಂದು ನಿದರ್ಶನ ಮಾತ್ರ.

ಇದನ್ನು ನಮ್ಮ ಭಾರತದ ವ್ಯವಹಾರದೊಡನೆ ಹೋಲಿಸಿದಾಗ 'ಅಯ್ಯೋ' ಎನಿಸುತ್ತದೆ.

ಪ್ರಾಯಶಃ, ಅಮೆರಿಕಾದ ಚರಿತ್ರೆಯೇ ಅಲ್ಲಿಯ ಜನರನ್ನು ಕಾರ್ಯ ದಕ್ಷರನ್ನಾಗಿ ಮಾಡಿರಬೇಕು. ಯುರೋಪುಖಂಡದ ವಿವಿಧ ರಾಷ್ಟ್ರಗಳಿಂದ, ಸಂಪ್ರದಾಯಶೀಲ ಜನರಿಂದ ಸಿಡಿದೆದ್ದು ಹೊಸ ಖಂಡಕ್ಕೆ ಬಂದ ಜನರೇ-ಆ ದೇಶವನ್ನು ಕಟ್ಟಿ ಬೆಳೆಸಿದವರು. ಮೂಲ ಯುರೋಪಿಯನರಿಗಿಂತ ತಾವು ಮುಂದುಬಂದವರೆಂದು ತೋರಿಸುವ ಛಲ ಅವರ ರಕ್ತಗತ ಗುಣವಾಗಿರಬೇಕು. ಅದಕ್ಕನುಗುಣವಾಗಿ, ಅವರು ದೊರಕಿದ ಅಪಾರ ನೈಸರ್ಗಿಕ ಸಂಪತ್ತನ್ನು ತಮ್ಮ ಸುಖ ಸಮೃದ್ಧಿಗಾಗಿ ಚೆನ್ನಾಗಿ ದುಡಿದು, ಧಾರಾಳವಾಗಿ ಬಳಸಿಕೊಳ್ಳ ಲಾರಂಭಿಸಿದರು. ಹಾಗಾಗಿ ಇಂದವರು ಪ್ರಗತಿಯ ತುತ್ತ ತುದಿಗೇರಿ ಮೆರೆಯು ವಂತಾಗಿದೆ.

ಅರ್ಹತೆ ಮುಖ್ಯ; ಬಣ್ಣವಲ್ಲ: ಹಾಗೆ ದುಡಿಮೆಗೆ ಬೆಲೆ ಕೊಡುವಾಗ ಅಲ್ಲಿ, ಜನರ ಬಣ್ಣ, ಜಾತಿ, ಭಾಷೆ-ಇತ್ಯಾದಿಗಳನ್ನೆಲ್ಲ ವಿಶೇಷವಾಗಿ ಪರಿಗಣಿಸು ವುದಿಲ್ಲ. ಅಲ್ಲಿಯ ರಾಜಕೀಯ, ವಿಜ್ಞಾನ, ರಕ್ಷಣೆ-ಮುಂತಾದ ಮಹತ್ವದ ಖಾತೆಗಳಲ್ಲಿ ಯಹೂದಿಯರ ಪ್ರಧಾನ ಪಾತ್ರವಿದೆಯಂತೆ. ತಂತ್ರಜ್ಞಾನದಲ್ಲಿ ಯುರೋಪ್, ಜಪಾನ್, ಕೊರಿಯಾ, ಚೈನಾ-ಮುಂತಾದ ದೇಶಗಳಿಂದ ಬಂದವರು ಪ್ರಮುಖಸ್ಥಾನಗಳಲ್ಲಿದ್ದಾರಂತೆ. ಇತ್ತೀಚಿನ ವರ್ಷಗಳಲ್ಲಿ ಏಷ್ಯಾ ಖಂಡದವರು, ಅದರಲ್ಲೂ ಮುಖ್ಯವಾಗಿ ಭಾರತೀಯರು ಈ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಪ್ರತಿಭೆ, ಕಾರ್ಯನಿಷ್ಠೆ ತೋರಿಸುತ್ತ ಮುಂದೆ ಬರುತ್ತಿದ್ದಾರೆ. ೧೯೮೦ರ ಜನಗಣತಿಯಂತೆ ಮೂರುವರೆ ಲಕ್ಷ ಭಾರತೀಯರು ಅಲ್ಲಿನ ಬೇರೆ ಬೇರೆ ಹಿರಿಯ ಉದ್ಯೋಗಗಳಲ್ಲಿದ್ದು ಪ್ರಗತಿ ಸಾಧಿಸುತ್ತಿದ್ದಾರೆ. ವ್ಯಾಪಾರವ್ಯವಹಾರಗಳಲ್ಲೂ

ನಮ್ಮವರು ಹಿಂದೆ ಬಿದ್ದಿಲ್ಲ. ವೈದ್ಯವಿಜ್ಞಾನದಲ್ಲೂ ಸಾಕಷ್ಟು ಕೀರ್ತಿಶಾಲಿಗಳು ಭಾರತೀಯರಾಗುತ್ತಿದ್ದಾರೆ. ಪ್ರತಿವರ್ಷ ಸುಮಾರು ೨೦,೦೦೦ ಭಾರತೀಯರು ಉಚ್ಚಶಿಕ್ಷಣಕ್ಕಾಗಿ ಅಥವಾ ಉದ್ಯೋಗಕ್ಕಾಗಿ ಅಮೆರಿಕಾಕ್ಕೆ ಹೋಗುತ್ತಾರೆ. ಹೋದವರಲ್ಲಿ ಬಹುಮಂದಿ ಅಲ್ಲೇ ಉಳಿಯುತ್ತಾರೆ. ಅದಕ್ಕೆ ಕಾರಣ-ಎಲ್ಲ ರೀತಿಯಲ್ಲೂ ಅಲ್ಲಿ ಅನುಕೂಲ ವಾತಾವರಣವಿದೆ.

ಹೀಗೆ, ಗುಣ, ಯೋಗ್ಯತೆ (Merrit) ಗಳಿಗೆ ಪ್ರೋತ್ಸಾಹ ಕೊಡುವ ಆ ಒಂದು ಪ್ರಧಾನ ತತ್ವ, ಆ ದೇಶದ ಪ್ರಗತಿಗೆ ಬಹು ಮುಖ್ಯ ಸಾಧಕವಾಗಿರಬೇಕು. ಅಮೆರಿಕಾದ ಬಿಳಿಯನಾಗಲಿ, ಕರಿಯನಾಗಲಿ, ಕಂದುಬಣ್ಣದ ಭಾರತೀಯನಾಗಲಿ-ಯೋಗ್ಯತೆ ಇದ್ದರೆ ಸ್ಥಾನ! ಮಾನ!

ಆ ದೇಶದಲ್ಲೂ ನಮ್ಮಲ್ಲಿ ಪರಿಶಿಷ್ಟ ಜಾತಿಯವರಿರುವಂತೆ ಕರಿಬಣ್ಣದ (ನೀಗ್ರೊ) ಜನರಿದ್ದಾರೆ. ಅವರು ಅಲ್ಲಿಯ ಜನಸಂಖ್ಯೆಯ ಶೇಕಡಾ ಹತ್ತರಷ್ಟು, (೨೨ ದಶಲಕ್ಷ) ಇದ್ದಾರೆ. ಅವರಿಗೆ ಶಿಕ್ಷಣ, ಉದ್ಯೋಗ ಇತ್ಯಾದಿಗಳ ವಿಚಾರದಲ್ಲಿ ಸಾಕಷ್ಟು ಪ್ರೋತ್ಸಾಹ ಕೊಡುತ್ತಾರೆ, ನಿಜ. ಆದರೆ ಅವರಿಗೆ ಯೋಗ್ಯತೆ ಇಲ್ಲದಿದ್ದರೂ ಮೆಡಿಕಲ್ ಕಾಲೇಜು ಪ್ರವೇಶ, ತಕ್ಕ ಪದವಿ ಇಲ್ಲದಿದ್ದರೂ ಉದ್ಯೋಗ, ಸಾಮರ್ಥ್ಯವಿಲ್ಲದಿದ್ದರೂ-ಜಿಲ್ಲಾಧಿಕಾರ-ಇತ್ಯಾದಿಗಳೆಲ್ಲ ಇಲ್ಲವೇ ಇಲ್ಲ. ಅವರ ಯೋಗ್ಯತೆಗೊಪ್ಪುವ ಬೇರೆ ಉದ್ಯೋಗಗಳು ದೊರಕುತ್ತವೆ.

ಹಾಗೆ, ಅವರು ಬಣ್ಣ ನೋಡಿ ಉದ್ಯೋಗಾವಕಾಶ ಕಲ್ಪಿಸುವ ತತ್ವ ಇಟ್ಟುಕೊಳ್ಳುತ್ತಿದ್ದರೆ ಇಂದು ಲಕ್ಷಾವಧಿ ಭಾರತೀಯರು ಅಲ್ಲಿ ಬಹು ಮೇಲ್ಮಟ್ಟದ ಸ್ಥಾನಮಾನಗಳನ್ನು ಪಡೆದಿರಲು ಸಾಧ್ಯವೇ ಆಗುತ್ತಿರಲಿಲ್ಲ. ಮಾತ್ರವಲ್ಲದೆ ನಮ್ಮ ದೇಶದ ಪ್ರಗತಿ ಕುಂಠಿತವಾಗುವುದಕ್ಕೆ ಮಿತಿಮೀರಿದ ಕಾದಿರುಸುವಿಕೆ (Reservation), ತಲೆಬುಡವಿಲ್ಲದ ಸೇವಾಸಂರಕ್ಷಣೆ (Security of Service) ಇವು ಪ್ರಮುಖ ಕಾರಣಗಳೆಂದು ಈ ಸಂದರ್ಭದಲ್ಲಿ ಧಾರಾಳವಾಗಿ ಹೇಳಬಹುದಾಗಿದೆ.

ದುಡಿಮೆಯ ಗೌರವ: ನಾವು ಕಲಿಯಬೇಕಾದ ಅಲ್ಲಿ ತೋರುವ, ಇನ್ನೊಂದು ದೊಡ್ಡ ಗುಣವೆಂದರೆ-ದುಡಿಮೆಯ ಗೌರವ. ದುಡಿಮೆಯಲ್ಲಿ ಮೇಲು ಕೀಳು ಭಾವನೆಯನ್ನು ಅವರು ತೋರುವುದಿಲ್ಲ.

ಸಾಮಾನ್ಯವಾಗಿ ಅಲ್ಲಿಯ ಯುವಕಯುವತಿಯರು ಹೈಸ್ಕೂಲು ಶಿಕ್ಷಣ ಮುಗಿದೊಡನೆ ತಂದೆತಾಯಿಯರನ್ನು ಹೊಂದಿಕೊಂಡಿರುವುದಿಲ್ಲ. ಹಾಗಾಗಿ

ಯುವಕಯುವತಿಯರು ಗಳಿಕೆ–ಕಲಿಕೆ (Earn & Learn) ಕ್ರಮದಿಂದಲೇ ಮುಂದುಬರುವವರು ಹೆಚ್ಚು. ಬಹುಮಂದಿ, ಬೇಸಗೆಯ ರಜಾಕಾಲದಲ್ಲಿ ಹೊಟೆಲುಗಳಲ್ಲಿ, ಅಂಗಡಿಗಳಲ್ಲಿ, ವರ್ಕ್‌ಶಾಪುಗಳಲ್ಲಿ, ಪೆಟ್ರೋಲ್ ಬಂಕ್‌ಗಳಲ್ಲಿ ಕೆಲಸಮಾಡಿ ಹಣ ಗಳಿಸುತ್ತಾರೆ. ನಂತರ ಮುಂದಿನ ವರ್ಷದ ಕಾಲೇಜು ವಿದ್ಯಾಭ್ಯಾಸ ಮುಂದುವರಿಸುತ್ತಾರೆ. ಅಥವಾ ಬೆಳಗ್ಗೆ, ಸಾಯಂಕಾಲ ಕೆಲಸ ಮಾಡಿ ಹಗಲು ಹೊತ್ತು ಕಾಲೇಜಿಗೆ ಹೋಗಿ ಕಲಿಯುತ್ತಾರೆ. ಸರ್ಕಾರದಿಂದ ಅಥವಾ ಬ್ಯಾಂಕ್‌ಗಳಿಂದ ಸಾಲಪಡೆದು ಓದುವವರೂ ಇದ್ದಾರೆ. ಮತ್ತೆ ಸಂಪಾದಿಸಿಕೊಟ್ಟರೆ ಸಾಕಾಗುತ್ತದೆ. ಎಷ್ಟೋ ಮನೆಗಳಲ್ಲಿ ತಾಯಿತಂದೆ ಕೆಲಸಕ್ಕೆ ಹೋಗುವಾಗ ಅಥವಾ ಸಿನಿಮಾ ನೋಡಹೋಗುವಾಗ ಮನೆಯಲ್ಲಿ ಮಗುವನ್ನು ನೋಡಿಕೊಳ್ಳುವ ಸಹಾಯಕರು (Baby Sitter) ಬೇಕಾಗುತ್ತಾರೆ. ಆ ಕೆಲಸ ಮಾಡಿ ಹಣ ಗಳಿಸಿಕೊಂಡು, ನಂತರ ಓದುವವರೂ ಇದ್ದಾರೆ. ದೊಡ್ಡ ಉದ್ಯೋಗಸ್ಥರ ಪತ್ನಿ ಅಥವಾ ಮಕ್ಕಳು ಇಂತಹ ಕೆಲಸ ಮಾಡುವುದು ಗೌರವಕ್ಕೆ ಹಾನಿ ಎಂದು ಭಾವಿಸುವುದಿಲ್ಲ. ಒಂದೆರಡು ದಿನಕ್ಕೆ ಕಾರ್ ಡ್ರೈವರ್ ಬೇಕಿದ್ದರೆ ಇಂಜಿನಿಯರಿಂಗ್ ಕಾಲೇಜಿಗೆ ಫೋನು ಮಾಡಿದರೆ ಸಾಕು. ಅಲ್ಲಿಯ ವಿದ್ಯಾರ್ಥಿಗಳು ಆ ತಾತ್ಕಾಲಿಕ ಸೇವೆಗೆ ಸಿದ್ಧರಾಗಿ ಬರುತ್ತಾರೆ. ದಿನಕ್ಕೆ ೫೦ ಡಾಲರ್ ಪಡೆದು ತಮ್ಮ ಕೆಲಸವನ್ನು ತೃಪ್ತಿಕರವಾಗಿ ಮಾಡಿ ಮುಗಿಸುತ್ತಾರೆ. ಆ ವಿದ್ಯಾರ್ಥಿ ಬರುವಾಗ ತನ್ನ ಕಾರಲ್ಲೇ ಬಂದು ಅದನ್ನು ನಮ್ಮ ಮನೆಯಲ್ಲಿಟ್ಟು, ನಮ್ಮ ಕಾರಲ್ಲಿ ಬೇಕಾದಲ್ಲಿಗೆ ಕರೆದೊಯ್ಯುತ್ತಾನೆ. ಪ್ರವಾಸಿಗಳನ್ನು ಕರೆದೊಯ್ಯುವ ಬಸ್ಸುಗಳಲ್ಲಿ 'ಸ್ಥಳಮಾಹಾತ್ಮ್ಯ'ಗಳನ್ನು ಸಾರಿಹೇಳುವ 'ಗೈಡ್'ಗಳು ಬಹುಮಂದಿ ಕಾಲೇಜು ವಿದ್ಯಾರ್ಥಿಗಳಾಗಿರುತ್ತಾರೆ. ಏಕೆ? ನಮ್ಮವರೇ ಆದ ನ್ಯೂಯಾರ್ಕ್ ಉಡ್‌ಲ್ಯಾಂಡ್ಸ್ ಹೊಟೆಲಿನ ಸಹಾಯಕರು (ಮಾಣಿಗಳು) ಉಚ್ಚಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಅಥವಾ ಉದ್ಯೋಗಸ್ಥರು.

ಇಂತಹ ಕೆಲಸಗಳಿಗೆ ತುಂಬ ಬೇಡಿಕೆಯೂ ಇದೆ. ಅವಕಾಶವೂ ಇದೆ. ಭಾರತದ ಮೂರು ಪಾಲಷ್ಟು ವಿಸ್ತಾರವಾಗಿರುವ ಅಮೇರಿಕಾದಲ್ಲಿ ಜನಸಂಖ್ಯೆ ಕೇವಲ ೨೨ ಕೋಟಿ. ನಮ್ಮ ಸಂಖ್ಯೆಯ $\frac{1}{3}$ಕ್ಕೂ ಕಡಿಮೆ. ಈ ಸಂಖ್ಯೆ ಸಹ ವರ್ಷದಿಂದ ವರ್ಷಕ್ಕೆ ಕುಂದುವುದಲ್ಲದೆ ಏರುವುದಿಲ್ಲ. ಜನಸಂಖ್ಯೆ ಏರದಿದ್ದರೂ ಅವರ ಚಟುವಟಿಕೆಗಳು ಮಾತ್ರ ಶರವೇಗದಲ್ಲಿ ಹೆಚ್ಚುತ್ತಲೇ ಇರುತ್ತವೆ. ಆದ್ದರಿಂದ ಉದ್ಯೋಗಾವಕಾಶವೂ ಹೆಚ್ಚುತ್ತಲೇ ಇದೆ.

ಶಿಕ್ಷಣಕ್ಷೇತ್ರ : ಅಮೆರಿಕಾದಲ್ಲಿ ಭಾರತದಂತೆ ಜನಸಂಖ್ಯೆ ಏರುತ್ತಿಲ್ಲ. ಹಾಗಾಗಿ, ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಂದುತ್ತಿದೆ. ತರಗತಿಗಳಲ್ಲಿ ಸಾಮಾನ್ಯ ಇಪ್ಪತ್ತು ವಿದ್ಯಾರ್ಥಿಗಳಿರುತ್ತಾರೆ. ಶಾಲೆಗಳ ವಾತಾವರಣ, ಕಟ್ಟಡ, ಉಪಕರಣ, ಪುಸ್ತಕ, ಪಠ್ಯೇತರ ಚಟುವಟಿಕೆ–ಎಲ್ಲವೂ ಅತ್ಯಂತ ಮೇಲ್ಮಟ್ಟದವು. ನಮ್ಮಲ್ಲಿಯ ಉತ್ತಮ ಕಾಲೇಜುಗಳಲ್ಲಿ ದೊರಕುವ ಸೌಲಭ್ಯಗಳು ಅಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ದೊರಕುತ್ತವೆ. ಬೆಳಗ್ಗೆ ಮನೆ ಬಾಗಿಲಿಗೆ ಸುಂದರ ಹಳದಿ ಬಣ್ಣದ ಶಾಲಾಬಸ್ಸು ಬಂದು ಮಕ್ಕಳನ್ನು ಕರೆದೊಯ್ಯುತ್ತದೆ. ಶಾಲಾಪುಸ್ತಕ, ಸಲಕರಣೆ, ಮಧ್ಯಾಹ್ನದ ಉಪಾಹಾರ–ಇವೇ ಮುಂತಾದ ಸಕಲ ಯೋಗಕ್ಷೇಮವನ್ನೂ ಶಾಲೆಯವರೇ ನೋಡಿಕೊಳ್ಳುತ್ತಾರೆ. ಇವೆಲ್ಲ ಸರ್ಕಾರೀ ಸ್ವಾಮ್ಯದ ಶಾಲೆಗಳೇ. ಖಾಸಗೀ ಶಾಲೆಗಳ ಸಂಖ್ಯೆ ಬಹು ಕಡಿಮೆ. ಅಲ್ಲಿಗೆ ಮಕ್ಕಳನ್ನು ಕಳಿಸಬೇಕಾದ ಅಗತ್ಯವೂ ಇಲ್ಲ. ಆ ತರದ ಸುವ್ಯವಸ್ಥೆ ಸರ್ಕಾರೀ ಸ್ವಾಮ್ಯದ ಶಾಲೆಗಳಲ್ಲಿವೆ. ಸರ್ಕಾರೀ ಸ್ವಾಮ್ಯವಾದರೂ ಶಾಲೆಯ ವಿಚಾರದಲ್ಲಿ ಊರ ಜನರ ಕಮಿಟಿಗೆ ಆಡಳಿತಾಧಿಕಾರವಿದೆ. ಊರ ಜನರ ಶಿಕ್ಷಣಕಂದಾಯ (Education Tax) ದಿಂದಲೇ ಶಾಲೆ ನಡೆಯುವುದು ಸಹ.

ಮಕ್ಕಳಿಗೆ ಪುಸ್ತಕದ ಹೊರೆ, ಮನೆ ಕೆಲಸದ (Home-Work) ಮೂಟೆ, ಜೀವನಕ್ಕೆ ಸಂಬಂಧಿಸಿದ ವಿಚಾರ ತುಂಬಿದ ಪಾಠಪಟ್ಟಿ–ಈ ಹಾವಳಿಗಳೆಲ್ಲ ಇಲ್ಲ. ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯನ್ನು ಕುಗ್ಗಿಸುವ ವಾತಾವರಣವಿಲ್ಲ. ಶಾಲೆಗೆ ಹೋದ ಮಗುವನ್ನು ಸುರಕ್ಷಿತವಾಗಿ ಮನೆಗೆ ಬಿಡದಿದ್ದರೆ ಮುಖ್ಯೋಪಾಧ್ಯಾಯರ ಮೇಲೆ ದಾವಾ ಹಾಕುವ ಅಧಿಕಾರವೂ ಹೆತ್ತವರಿಗಿದೆ. ಅಧ್ಯಾಪಕರು ಮಕ್ಕಳ ಮೇಲೆ ಬೆತ್ತದ ಉಪಯೋಗ ಗೈದರೆ ಅದು ಶಿಕ್ಷಾರ್ಹ ಅಪರಾಧ. ಶಾಲಾಸಮಯದಲ್ಲಿ ಶಾಲಾವಯಸ್ಸಿನ ಮಕ್ಕಳು ಸಿಕ್ಕಿದರೆ, ಸಮಾಜ ಸೇವಾಖಾತೆಯವರು, ಬೆನ್ನಟ್ಟಿ ಅದಕ್ಯಾರು ಕಾರಣರೆಂದು ಕಂಡುಹಿಡಿಯುತ್ತಾರೆ. ಸಂಬಂಧಪಟ್ಟವರನ್ನು ಶಿಕ್ಷಿಸಲೂ ಹಿಂಜರಿಯುವುದಿಲ್ಲ.

ಇತ್ತೀಚೆಗೆ, ಅಲ್ಲಿಯ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದ ಮಟ್ಟ ಕುಗ್ಗುತ್ತಿದೆ ಎಂಬ ದೂರುಗಳೂ ಕೇಳಿಬರುತ್ತಿವೆ. ಅದಕ್ಕಾಗಿ ಸರ್ಕಾರದಿಂದ ನೇಮಕಗೊಂಡ ತಜ್ಞರ ಸಮಿತಿಯವರು ಕೆಲ ಪರಿಹಾರ ಮಾರ್ಗಗಳನ್ನೂ ಸೂಚಿಸಿದ್ದಾರೆ. ಅಧ್ಯಾಪಕರ ಅನಾಸಕ್ತಿಯೇ ಇದಕ್ಕೆ ಮೂಲ ಕಾರಣವೆಂದು ಹೇಳುವ ಅಧ್ಯಕ್ಷ ರೇಗನ್ ಅವರು, ಅಧ್ಯಾಪಕರ ಯೋಗ್ಯತೆ ನೋಡಿ ಭಡ್ತಿ ಕೊಡ

ಬೇಕಲ್ಲದೆ (Merrit Promotion) ಸೇವಾಹಿರಿಮೆ (Seniority) ಆಧಾರದಿಂದಲ್ಲ–ಎನ್ನುತ್ತಾರೆ. ಇದನ್ನು ಅಖಿಲ ಅಮೆರಿಕಾ ಅಧ್ಯಾಪಕ ಸಂಘದವರು ವಿರೋಧಿಸುತ್ತಾರೆ. ಈ ಸಂಘದ ಕಾರ್ಯದರ್ಶಿ ಆಲ್ಬರ್ಟ್‌ಶಂಕರ್– ಎಂಬ ಭಾರತ ಸಂಜಾತರು. ಅಂತು ಶಿಕ್ಷಣ ಸುಧಾರಣೆಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಅಲ್ಲಿಯೂ ಇದೆ–ಎಂಬುದನ್ನು ಗುರುತಿಸಿಕೊಳ್ಳಬಹುದು. ಇದು ಪ್ರಜಾಪ್ರಭುತ್ವದಲ್ಲಿ ಸಹಜವೂ ಹೌದು.

ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಅಲ್ಲಿಯ ಮಕ್ಕಳು ಹೈಸ್ಕೂಲು ಶಿಕ್ಷಣ ಪಡೆಯುತ್ತಾರೆ. ವಿವಿಧ ವಿಭಾಗಗಳಲ್ಲಿ ದೊರಕುವ ವೃತ್ತಿಶಿಕ್ಷಣ, ಕೈಗಾರಿಕಾ ಶಿಕ್ಷಣದತ್ತ–ಬಹುಮಂದಿ ಕಣ್ಣಿಡುತ್ತಾರೆ. ಅಂಥವರಿಗೆ ಸರ್ಕಾರದ ಬೆಂಬಲ ಧಾರಾಳ ದೊರಕುತ್ತದೆ. ಕೆಲವು ಪ್ರತಿಭಾವಂತರು ಮಾತ್ರ ಉಚ್ಚ ವಿಶ್ವವಿದ್ಯಾಲಯ ಶಿಕ್ಷಣದತ್ತ ಹೋಗುತ್ತಾರೆ. ಶಿಕ್ಷಿತರಿಗೆ ಉದ್ಯೋಗಾವಕಾಶ ಇದ್ದೇ ಇರುತ್ತದೆ.

ಇತ್ತೀಚೆಗೆ, ಶೇಕಡಾ ಹತ್ತರವರೆಗೆ ಬಂದ ನಿರುದ್ಯೋಗಿಗಳ ಸಂಖ್ಯೆ, ಅಧ್ಯಕ್ಷ ರೇಗನ್‌ರವರ ತಲೆ ತಿನ್ನುವ ಸಮಸ್ಯೆಯಾಗಿದೆ. ಅಂಥವರಿಗೆ ನಿರುದ್ಯೋಗ ಭತ್ಯೆ ಸರ್ಕಾರದಿಂದ ದೊರಕುತ್ತದೆ. ಆದರೆ ಆ ಭತ್ಯೆ ಪಡೆಯುವುದು ಅವಮಾನಕರ– ಎಂಬ ಮನೋಭಾವ ಅಲ್ಲಿಯವರಿಗಿದೆ. ಆದರಿಂದಾಗಿ ಹೆಚ್ಚಿನವರು, ಏನಾದರೊಂದು ಉದ್ಯೋಗ ನಡೆಸಲು ಪ್ರಯತ್ನಿಸುವರು. ಹೀಗೆ ಆ ನಿರುದ್ಯೋಗ ಭತ್ಯೆಗೆ ಕೈಚಾಚುವವರು ಕಡಿಮೆ.

ಇದನ್ನು ನಮ್ಮ ಜನರೊಡನೆ ಹೋಲಿಸಿ ನೋಡಿದರೆ?

ಉಚ್ಚಶಿಕ್ಷಣ ವಿಚಾರದಲ್ಲಿಯೂ ಇಡೀ ಪ್ರಪಂಚದಲ್ಲೇ ತಮ್ಮ ಶಿಕ್ಷಣ ಸಂಸ್ಥೆಯ ಗುಣಮಟ್ಟ ಅತಿ ಶ್ರೇಷ್ಠವಾದುದೆಂಬುದನ್ನು ತೋರಬಯಸುವ ಮಹತ್ತ್ವಾಕಾಂಕ್ಷೆ ಅವರದು. ಹಾಗಾಗಿ ಯಾವೊಂದು ದೊಡ್ಡ ಶಿಕ್ಷಣ ಸಂಸ್ಥೆಯಲ್ಲೂ ಪ್ರಪಂಚದ ಮೇಧಾವಿಗಳು ಸೇರಿರುತ್ತಾರೆ. ಹಲವಾರು ಪ್ರಸಿದ್ಧ ವಿದ್ಯಾಲಯಗಳಲ್ಲಿ ಭಾರತೀಯ ಪ್ರಾಧ್ಯಾಪಕರು ಪ್ರಮುಖಸ್ಥಾನಗಳಲ್ಲಿದ್ದಾರೆ. ವಿದ್ಯಾರ್ಥಿಗಳ ಆಯ್ಕೆಯಲ್ಲಿಯೂ ಇಡೀ ಪ್ರಪಂಚದ ಶ್ರೇಷ್ಠ ಪ್ರತಿಭಾವಂತರನ್ನು, ವಿಜ್ಞಾನಿಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಆಕರ್ಷಿಸುವ ವಿಧಾನಗಳನ್ನು ಬಳಸುತ್ತಾರೆ.

ಇತ್ತೀಚೆಗೆ ಪ್ರಕಟಗೊಂಡ ಅಮೇರಿಕಾದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದವರ ಅಂಕೆ ಸಂಖ್ಯೆಗಳಂತೆ ೧೯೬೦–೮೧ರ ಅವಧಿಯಲ್ಲಿ ೯೮೮೯ ಭಾರತೀಯ

ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳು ಅಮೆರಿಕಾದ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಡಾಕ್ಟರೇಟ್ ಡಿಗ್ರಿ ಪಡೆದಿದ್ದಾರೆ. ಇದು ಇತರ ಎಲ್ಲ ರಾಷ್ಟ್ರಗಳ ಪಾಲಿಗಿಂತ ಅತಿ ಹೆಚ್ಚಿನದು; ಹಾಗೆ ಉಚ್ಚ ಶಿಕ್ಷಣದ ಲಾಭ ಪಡೆದವರಲ್ಲಿ ಭಾರತಕ್ಕೆ ಹಿಂದಿರುಗಿದವರ ಸಂಖ್ಯೆ ಅತ್ಯಲ್ಪ;-ಎಂದು ಮೊದಲಾಗಿ ವಿವರಿಸಿದ್ದಾರೆ.

ಅವರದೇ ಇನ್ನೊಂದು ಪ್ರಕಟಣೆಯಲ್ಲಿ-ಅಮೆರಿಕಾದ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಶ್ರದ್ಧೆಯಿಂದ ಪ್ರಾವೀಣ್ಯ ಸಾಧಿಸುವವರು ಜಪಾನೀಯರು ಮತ್ತು ಭಾರತೀಯರು. ಅವರಲ್ಲಿ ಸ್ವದೇಶಕ್ಕೆ ಹೆಚ್ಚಾಗಿ ಹಿಂದಿರುಗುವವರು ಜಪಾನಿಗಳಾದರೆ, ಹಿಂದಿರುಗದವರು ಭಾರತೀಯರು—ಎಂಬುದನ್ನೂ ಪ್ರಕಟಿಸಿದ್ದಾರೆ.

ಈ ಎರಡು ಪ್ರಕಟಣೆಗಳಿಂದ ತಿಳಿದುಬರುವ ಅತಿ ಪ್ರಮುಖ ವಿಚಾರವೆಂದರೆ ಭಾರತಕ್ಕೆ ಉಚ್ಚ ಶಿಕ್ಷಣ ಪಡೆದ ಪ್ರತಿಭಾಶಾಲಿಗಳು ಬೇಡವಾಗಿದ್ದಾರೆ. ಜಪಾನಿಗೆ ಅವರ ಪ್ರತಿಭಾವಂತರು ಅಗತ್ಯ ಬೇಕಾದವರಾಗಿದ್ದಾರೆ.

ಇದೀಗ—ಜಪಾನಿನ ಮುಂದುವರಿಕೆಗೂ, ಭಾರತದ ಹಿಂದುಳಿದಿರುವಿಕೆಗೂ ಮೂಲ ಕಾರಣ—ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ ತಾನೆ?

ಇತ್ತೀಚೆಗೆ ಪ್ರಕಟವಾದ ಇನ್ನೊಂದು ಅಂಕೆ ಸಂಖ್ಯೆಗಳ ಪ್ರಕಟಣೆಯಂತೆ ಭಾರತದ ಅತ್ಯಂತ ಶ್ರೇಷ್ಠ ತಂತ್ರಜ್ಞಾನ ತರಬೇತಿ ಕೇಂದ್ರಗಳಾದ ಐದು ಐ. ಐ. ಟಿ. ಸಂಸ್ಥೆಗಳಲ್ಲಿ (Indian Institute of Technology) ಉತ್ತೀರ್ಣರಾದ ಪ್ರತಿಭಾವಂತರಲ್ಲಿ ಶೇಕಡಾ ೭೫ ಅಮೆರಿಕಾಕ್ಕೆ ಉಚ್ಚ ಶಿಕ್ಷಣಕ್ಕಾಗಿ ಹೋಗುತ್ತಾರೆ. ಹಾಗೆ ಹೋದವರು ಹಿಂದೆ ಬರುವುದು ಕಡಮೆ.

೨-೩ ದಶಕಗಳ ಹಿಂದೆ ತಂತ್ರಜ್ಞಾನದಲ್ಲಿ ಬಹಳ ಮುಂದುವರಿದ ಅಮೆರಿಕಾ, ರಶ್ಯಾ, ಜರ್ಮನಿ ಸರ್ಕಾರಗಳ ದೊಡ್ಡ ಪ್ರಮಾಣದ ನೆರವು ಪಡೆದು, ಡೆಲ್ಲಿ, ಮದ್ರಾಸ್, ಮುಂಬಾಯಿ, ಖರಗ್ಪುರ, ಕಾನ್ಪುರಗಳಲ್ಲಿ ಆರಂಭಿಸಲಾದ ಉಚ್ಚ ಮಟ್ಟದ ಐ. ಐ. ಟಿ. ಗಳ ಪದವೀಧರರು ಸಹ, ಅಮೆರಿಕಾಕ್ಕೆ ವಲಸೆ ಹೋಗುವರೆಂದರೆ-ಅದು ನಮ್ಮ ದೇಶದ ದೌರ್ಭಾಗ್ಯವೆಂದೇ ಹೇಳಬೇಕು. ಆದರೆ, ಅವರೆಲ್ಲ ಹೋದರೆ ಹೋಗಲಿ; ನಮಗೊಳ್ಳೇದು—ಎಂದು ಹೇಳುವ 'ಜಾಣ'ರಿಗೂ ನಮ್ಮ ದೇಶದಲ್ಲಿ ಬರಗಾಲವಿಲ್ಲ.

ಕೃಷಿ, ಪಶುಪಾಲನೆ: ಕೃಷಿ, ಪಶುಪಾಲನೆಗಳು ಸಹ ಅಲ್ಲಿ ಹೆಚ್ಚಿನಂಶ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕಂಪೆನಿಗಳ ಮೂಲಕ ನಡೆಯುವವು. ಮಧ್ಯಮ ಅಥವಾ ಸಣ್ಣಪ್ರಮಾಣದ ಏಕಸ್ವಾಮ್ಯ ಘಟಕಗಳ ಮೂಲಕವೂ

ನಾಗುವುದಿದೆ. ಆದರೆ ಹೆಚ್ಚಿನ ಎಲ್ಲ ಕೆಲಸಗಳೂ ಯಂತ್ರಗಳ ಮೂಲಕ ನಾಗುತ್ತವೆ. ಯಾಂತ್ರೀಕೃತ ಬೇಸಾಯ, ಯಾಂತ್ರೀಕೃತ ಪಶುಪಾಲನೆ, ಸಂರಕ್ಷಣೆ—ಇತ್ಯಾದಿಗಳು ಸರ್ವಸಾಮಾನ್ಯ. ಒಂದೆರಡು ಹಸುಗಳನ್ನು ಮನೆ ಮನೆ ಸಾಕುವ ಸಂಪ್ರದಾಯ ಕಡಿಮೆ. ಆದರೆ ಉತ್ಪಾದನಾ ವೆಚ್ಚ ದಿನ ದಿನ ಏರುತ್ತಿದೆ. ಆದರೆ ಅದೇ ಪ್ರಮಾಣದಲ್ಲಿ ಧಾನ್ಯ, ಹಣ್ಣು, ತರಕಾರಿ, ಹಾಲು, ಬೆಣ್ಣೆ, ಮಾಂಸ ಮುಂತಾದುವುಗಳ ಬೆಲೆ ಏರಿಬಂದಿಲ್ಲ. ಎಷ್ಟೋ ವೇಳೆ ಬೇಡಿಕೆಗಿಂತ ಹೆಚ್ಚಿನ ಉತ್ಪಾದನೆ ನಡೆದಿರುತ್ತದೆ. ವಿದೇಶಗಳಿಗೆ ರಫ್ತಾಗದಿದ್ದರೆ 'ಬೇಸಾಯಗಾರ—ಬೇಗ ತಾ ಸಾಯ'—ಅಲ್ಲ; ಬೇಗ ಸಾಯುತ್ತಾನೆ.

ಹಾಗಾಗಿ, ಕೃಷಿ, ಹೈನುಗಾರಿಕೆಗಳು ಅಷ್ಟು ಲಾಭದಾಯಕ ಉದ್ಯಮಗಳಲ್ಲವೆಂದು ಹೇಳಲ್ಪಡುತ್ತಿವೆ. ಕೆಲವೆಲ್ಲ ಕಂಪೆನಿಗಳು ಬೇರೆ ದಾರಿ ಹಿಡಿಯುತ್ತಲೂ ಇವೆಯಂತೆ.

ಆದರೆ ವಿಶಾಲವಾದ ಹೊಲಗಳು, ಫಲವತ್ತಾದ ಮಣ್ಣು, ಸಾಕಷ್ಟು ಮಳೆ ಅಥವಾ ನೀರಾವರಿ, ಇವೆಲ್ಲ ಇರುವ ಕಾರಣ ಜಗತ್ತಿನಲ್ಲೇ ಅತಿ ದೊಡ್ಡ ಧಾನ್ಯೋತ್ಪಾದಕ ರಾಷ್ಟ್ರ—ಅಮೆರಿಕಾ ಆಗಿದೆ. ಅವರು ತಾವು ಸಾಕಷ್ಟು ತಿಂದು ವಿದೇಶಗಳಿಗೂ ಧಾರಾಳ ರಫ್ತು ಮಾಡುತ್ತಾರೆ.

ಭಾರತ ಇತ್ತೀಚೆ—ಆಹಾರೋತ್ಪಾದನೆಯಲ್ಲಿ ಸ್ವಯಂ ಸಮರ್ಥವಾಗಿದೆ. ಅದಕ್ಕೆ ಮೊದಲು ನಾವೂ ಅಮೆರಿಕಾದಿಂದ ಮಿಲಿಯಗಟ್ಲೆ ಟನ್ನುಗಳಷ್ಟು ದವಸಧಾನ್ಯಗಳನ್ನು ಆಮದುಮಾಡಿಕೊಳ್ಳುತ್ತಿದ್ದೆವು; ಅಥವಾ ದಾನವಾಗಿ ಪಡೆಯುತ್ತಿದ್ದೆವು—ಎಂಬುದನ್ನು ಮರೆಯುವಂತಿಲ್ಲ.

ಅಂತು ಜನಸಾಮಾನ್ಯರು ದುಡಿಮೆಶೀಲರಾದ್ದರಿಂದ ವೈಯಕ್ತಿಕ ವಾರ್ಷಿಕ ವರಮಾನ ಹತ್ತುಸಾವಿರ ಡಾಲರುಗಳಷ್ಟಿದೆಯಂತೆ. ಸ್ವಂತ ಕಾರಿಲ್ಲದ ಮನೆಯಿಲ್ಲ. ಸಾಧಾರಣ ವರಮಾನವಿರುವವನು ಸಹ ಕಾರುವ್ಯಾಪಾರಿಯ ಹತ್ತಿರ ಹೋಗಿ, ಕಂತಿನ ಪಾವತಿಯ ರೂಪದಲ್ಲಿ ಕಾರನ್ನು ಪಡೆಯಬಹುದು. ಶಕ್ತಿ ಇದ್ದರೆ ೭–೮ ಸಾವಿರ ಡಾಲರುಗಳಿಗೆ ಹೊಸ ಕಾರು. ಶಕ್ತಿ ಕಡಿಮೆಯಾದರೆ ೨-೩ ಸಾವಿರ ಡಾಲರುಗಳಿಗೆ ಸಿಗುವ ಸ್ವಲ್ಪ ಹಳೆಯ ಕಾರು. ೫೦೦ ಡಾಲರಿಗೂ ಸಿಗುವ ಕಾರುಗಳಿವೆ. ಮೂರುವರ್ಷವಾದ ಮೇಲೆ ಅದನ್ನು ಕೊಟ್ಟವನಿಗೆ ಹಿಂದೆ ಬಿಡಲೂಬಹುದು; ಮುಂದುವರಿಸಲೂ ಬಹುದು. ೬-೭ ವರ್ಷವಾದ ಮೇಲೆ ಹೆಚ್ಚಾಗಿ ಆ ಕಾರಿಗೆ ದೀರ್ಘ ವಿಶ್ರಾಂತಿ ಕೊಡುತ್ತಾರೆ. ಪದೇ ಪದೇ ದುರಸ್ತಿಪಡಿಸಿ ಉಪಯೋಗಿಸುವ ಶ್ರಮವೇ ಇಲ್ಲ. ಪ್ರತಿ ಊರ

ಹೊರಭಾಗದಲ್ಲೂ ವಿಶಾಲವಾದ ಹಳೆಯ ಕಾರುಗಳ ರಾಶಿ ಇರುವ 'ಕಾರುಗಳ ಸ್ಮಶಾನ' ಗಳನ್ನು ಕಾಣಬಹುದು. ನಮ್ಮ ದೇಶದ ಮೋಟಾರ್ ಮೆಕೆನಿಕ್‌ಗಳು ಹೋದರೆ ಲಕ್ಷಗಟ್ಲೆ ಕಾರುಗಳನ್ನು ರಿಪೇರಿ ಮಾಡಿ ಇಲ್ಲಿ ತರಬಹುದು.

ಅಲ್ಲಿ, ಮನೆಮನೆಗೆ ಅಂಚೆ ಹಂಚುವ ಅಂಚೆ ಮಾನವ (Post–Man) ಸಹ ತನ್ನ ಜೀಪ್ ಅಥವಾ ಕಾರಲ್ಲೇ ಬರುತ್ತಾನೆ. ಪ್ರತಿ ಮನೆಯ ಮುಂಭಾಗದಲ್ಲಿ ಸ್ಥಾಪಿತವಾಗಿರುವ ಅಂಚೆಪೆಟ್ಟಿಗೆಯಲ್ಲಿ ನಮಗೆ ಬಂದಿರುವ ಪತ್ರಗಳನ್ನು ಹಾಕಿ, ನಾವು ಬರೆದುಹಾಕಿರುವ ಪತ್ರಗಳನ್ನು ಎತ್ತಿಕೊಂಡು ಹೋಗುತ್ತಾನೆ. ತನ್ನ ವಾಹನದಿಂದ ಆತ ಕೆಳಗಿಳಿಯುವುದೇ ಇಲ್ಲ. ನಾವು ಬರೆದ ಪತ್ರಗಳನ್ನು ಅಂಚೆ ಕಛೇರಿಗೆ ಕೊಂಡೊಯ್ಯಬೇಕಾದ್ದೇ ಇಲ್ಲ. ಪತ್ರಿಕೆಗಳನ್ನು ಹಂಚುವವನು ಸಹ ಕಾರಲ್ಲಿ ಬಂದು ಮನೆಯ ಮುಂದಿರುವ 'ಪೇಪರ್ ಪೆಟ್ಟಿಗೆ'ಯಲ್ಲಿ ಹಾಕಿಹೋಗುತ್ತಾನೆ.

(ಸಶೇಷ)

ಕೆ. ಆರ್. ಉಡುಪ



ಆಶಾವಾದಿಗೆ ಸಂಕಟದಲ್ಲೂ ಆಶೆಯ ಬೆಳಕು ಕಾಣುತ್ತದೆ. ನಿರಾಶಾವಾದಿಗೆ ಆಶೆಯಲ್ಲೂ ದುಃಖವೇ ಕಾಣುತ್ತದೆ.

—ಹೆಮೂರ್ ಎಲ್ಲಿಸ್

ಕೆಟ್ಟದನ್ನು ಮಾಡುವುದಕ್ಕೆ ಹೃದಯದ ದೋಷ, ಬುದ್ಧಿಯ ದೋಷ ಎರಡೂ ಕಾರಣ.

—ಥಾಮಸ್ ಹುಡ್

ಹಾವು ಕಚ್ಚಿ ಸತ್ತ ಮನುಷ್ಯ ಮತ್ತೆ ಬದುಕಿ ಮೇಲೆದ್ದ

ಈ ಘಟನೆಯ ಶೀರ್ಷಿಕೆಯನ್ನು ಓದಿದರೆ ಸಾಕು, ಯಾರಿಗೇ ಆಗಲಿ ಆಶ್ಚರ್ಯವೆನಿಸಬಹುದು. ಇದಕ್ಕೆ ಒತ್ತಾಸೆಯಾಗಿ ಭಾರತೀಯರಲ್ಲಿ ಒಂದು ನಂಬಿಕೆಯುಂಟು. ಯಾವ ವ್ಯಕ್ತಿಯೆ ಆಗಲಿ ಹಾವು ಕಡಿದು ಸತ್ತರೆ ಆರು ತಿಂಗಳ ಅವಧಿಯ ಒಳಗೆ ಅವನನ್ನು ಮತ್ತೆ ಬದುಕಿಸಲು ಸಾಧ್ಯ ಎಂಬುದೇ ಈ ನಂಬಿಕೆ.

ನಾಗಪುರದ ನಿವಾಸಿ ಅರುವತ್ತೈದು ವರ್ಷ ವಯಸ್ಸಿನ ದಯಾಲಜೀ ಭಾಯೀ ಗಥಿಯಾ ಹೆಸರಾಂತ ತಾಂತ್ರಿಕರು ಹಾಗೂ ಆಯುರ್ವೇದ ಚಿಕಿತ್ಸೆಯಲ್ಲಿ ಸಿದ್ಧಹಸ್ತರು. ನಾನು ದಯಾಲರೊಡನೆ ಸಂಭಾಷಣೆಯಲ್ಲಿ ತೊಡಗಿದಾಗ ಈ ವಿಷಯಕ್ಕೆ ತಿರುಗಿದ ಮಾತು ಚರ್ಚೆಗೆ ಎಡೆಗೊಟ್ಟಿತು. ಅವರು ಇಂಥ ಅನೇಕ ಘಟನೆಗಳನ್ನು ಕುರಿತು ಮಾತನಾಡಿದರು. ವಿಷದ ಹಾವುಗಳಿಂದ ಕಡಿಸಿಕೊಂಡು ಸತ್ತವರು ಸ್ವಲ್ಪಕಾಲದ ಮೇಲೆ ಮತ್ತೆ ಜೀವಂತರಾದ ಪ್ರಸಂಗಗಳೂ ಇದರಲ್ಲಿ ಸೇರಿದ್ದುವು.

ಕುತೂಹಲದಿಂದ ನಾನು ದಯಾಲರನ್ನು ಅವರ ಕಣ್ಣೆದುರಿಗೆ ನಡೆದ ಇಂಥ ಯಾವುದಾದರೂ ಘಟನೆಯ ಬಗ್ಗೆ ವಿವರವಾಗಿ ತಿಳಿಯಪಡಿಸಬೇಕೆಂದು ಕೋರಿದಾಗ ಅವರು ಕಣ್ಣಿಗೆ ಕಟ್ಟುವಂತೆ ಒಂದು ಇಂಥ ಪ್ರಸಂಗದ ಬಗ್ಗೆ ವಿವರಣೆ ನೀಡಿದರು. ಅದನ್ನೇ ಈಗ ಓದುಗರ ಮುಂದೆ ಇಡುತ್ತಿದ್ದೇನೆ.

೧೯೬೦ರ ಮೇ ತಿಂಗಳಲ್ಲಿ ನಡೆದ ಘಟನೆ. ಮಹಾರಾಷ್ಟ್ರಕ್ಕೆ ಸೇರಿದ ಸಾವನೇರ ಒಂದು ಸಣ್ಣ ಊರು. ನಾಗಪುರ ಜಿಲ್ಲೆಯಲ್ಲಿದೆ. ಅಲ್ಲಿ ರಾಮೇಶ್ವರ ಪ್ರಸಾದನೆಂಬ ಮನುಷ್ಯನಿದ್ದ. ಅವನ ಕುಟುಂಬಕ್ಕೆ ಸೇರಿದಂತೆ ಮಡದಿ ರಾಜಕುರೀಬಾಯಿ, ಇಬ್ಬರು ಹರೆಯದ ಗಂಡುಮಕ್ಕಳು ಜಗದಂಬಾಪ್ರಸಾದ ಮತ್ತು ಲಲ್ಲೂಪ್ರಸಾದ ಹಾಗೂ ಒಬ್ಬ ಹೆಣ್ಣುಮಗಳು ಇದ್ದರು.

ರಾಮೇಶ್ವರಪ್ರಸಾದನ ಬಳಿ ಸಾಕಷ್ಟು ಜಮೀನಿತ್ತು. ಬಹಳ ಕಷ್ಟಪಟ್ಟು ಬೆವರು ಸುರಿಸಿ ಅವನು ಬೇಸಾಯ ಮಾಡುತ್ತಿದ್ದ. ಹೊಟ್ಟೆಬಟ್ಟೆಗಾಗಿ ಅವನ ಕುಟುಂಬ ಎಂದೂ ಕಷ್ಟಪಟ್ಟಿರಲಿಲ್ಲ. ರಾಮೇಶ್ವರಪ್ರಸಾದ ತನ್ನ ಜಮೀನಿನ

೧೯೮೩ ಜೂನ್ ತಿಂಗಳ 'ನವನೀತ್' ಪತ್ರಿಕೆಯಲ್ಲಿ ಪ್ರಕಟವಾದ ಮೋಹನ ಸೋಲಂಕಿಯವರ 'ಸರ್ಪ-ದಯ್‌ಸೇ ಮೃತ ವ್ಯಕ್ತಿ ಜೀ ಉಠಾ' ಲೇಖನದ ಕನ್ನಡಾನುವಾದ.

ಸ್ವಲ್ಪಭಾಗವನ್ನು ಬಾಗಾಯ್ತಿಗೆ ಪರಿವರ್ತಿಸಿಕೊಂಡು ಅದರಲ್ಲಿ ನಿಂಬೆ, ಮಾವು ಮತ್ತು ಹಲಸುಗಳನ್ನು ಹಾಕಿ ಒಳ್ಳೆಯ ಬೆಳೆ ತೆಗೆಯುತ್ತಿದ್ದ. ಜಮೀನಿಗೆ ಮತ್ತು ತೋಟಕ್ಕೆ ನೀರು ಒದಗಿಸಲು ಅವನು ಅಲ್ಲೇ ಒಂದು ಬಾವಿ ತೋಡಿಸಿ ಏತ ಹಾಕಿಸಿದ್ದ. ತೋಟದ ಉಸ್ತುವಾರಿ ನೋಡಿಕೊಳ್ಳಲು ಲಖನಾ ಎಂಬ ಆಳನ್ನು ಕೂಡ ನೇಮಿಸಿಕೊಂಡಿದ್ದ.

ಘಟನೆ ನಡೆದ ದಿನ, ಬೆಳಗ್ಗೆಯಿಂದ ಬಿಸಿಲಲ್ಲಿ ದುಡಿದ ಕಾರಣ ರಾಮೇಶ್ವರ ಪ್ರಸಾದನ ಮೈ ಮನಸ್ಸು ತುಂಬ ದಣಿದಿದ್ದುವು. ಬಿಸಿ ಗಾಳಿಯ ದೆಸೆಯಿಂದಾಗಿ ಮೈಯೆಲ್ಲ ಬೆವರಿನಿಂದ ತೊಯ್ದಿತ್ತು. ಇಡೀ ದಿನ ಸುಡುಬಿಸಿಲಿನಿಂದ ದಣಿಸಿದ ಸೂರ್ಯ ಸಂಜೆ ಪಶ್ಚಿಮ ದಿಗಂತದಲ್ಲಿ ಇಳಿಯತೊಡಗಿದಾಗ ಮಬ್ಬು ಕವಿಯಲಾರಂಭಿಸಿತು. ದುಡಿದ ಮೈಗೆ ಹಾಯಾಗಿ ಸ್ನಾನಮಾಡುವುದು ತುಂಬ ಹಿತವೆನಿಸಿತು. ತೋಟದಲ್ಲೇ ಸ್ನಾನ ಮಾಡಿದರಾಯಿತು ಅಂದ ರಾಮೇಶ್ವರ ಪ್ರಸಾದ ಆ ಕಡೆ ಹೆಜ್ಜೆ ಹಾಕಿದ. ಆಗ ಅಲ್ಲಿ ಆಳು ಲಖನಾ ಏತದಿಂದ ನೀರೆತ್ತಿ ಗಿಡಗಳಿಗೆ ಹಾಯಿಸುತ್ತಿದ್ದ.

“ಲಖನಾ, ನಾನು ಇವತ್ತು ಇಲ್ಲೇ ಸ್ನಾನ ಮಾಡ್ತೀನಿ. ಸ್ವಲ್ಪ ನೀರು ಕೊಡು. ಮೈಯೆಲ್ಲಾ ಬೆವರಿನಿಂದ ಅಸಹ್ಯವಾಗ್ತಾ ಇದೆ.”—ರಾಮೇಶ್ವರ ಪ್ರಸಾದ ಏತದ ಹತ್ತಿರ ಹೋಗಿ ಆಳಿಗೆ ಹೇಳಿದ. ಬನೀನು ಬಿಚ್ಚಿ ಬಾವಿಯ ಹತ್ತಿರ ಇಟ್ಟ. ಮನೆಯಿಂದ ಬಂದ ಬಟ್ಟೆ ಟವಲುಗಳನ್ನು ಅಲ್ಲೇ ಜೊತೆಯಲ್ಲಿ ಇಟ್ಟ.

“ಸರಿ ಬುದ್ಧಿ” ಅನ್ನುತ್ತಾ ಲಖನಾ ಎತ್ತುಗಳಿಗೆ ‘ಹುಂಯ್ ಹುಂಯ್’ ಮಾಡಿ ಓಡಿಸಿ ಬಾನೆಯನ್ನು ಮೇಲೆ ಎಳೆಯತೊಡಗಿದ. ಸ್ನಾನಕ್ಕೆ ನೀರು ಕೊಟ್ಟಿದ್ದಾಯಿತು. ಸ್ವಲ್ಪ ಹೊತ್ತಾದ ಮೇಲೆ ಸ್ನಾನ ಮುಗಿಸಿ ರಾಮೇಶ್ವರ ಬಾವಿಯ ಹತ್ತಿರ ಬಂದ. ಟವಲನ್ನು ಎತ್ತಿಕೊಳ್ಳಲು ಮುಂದಕ್ಕೆ ಕೈಚಾಚಿದ. ಇದ್ದಕ್ಕಿದ್ದಂತೆ ಬಟ್ಟೆಯ ಸಂದಿಯಿಂದ ಭಯಂಕರವಾಗಿ ಫೂತ್ಕರಿಸುತ್ತಾ ಒಂದು ಗೋದಿನಾಗರ ಮೊಳಕ್ಕೆ ಎತ್ತರಕ್ಕೆ ಮೇಲೆದ್ದು ನಿಂತಿತು. ಅದು ಪೂರ್ತಿ ಹೆಡೆಬಿಚ್ಚಿಕೊಂಡಿತ್ತು. ಅದು ಬುಸುಗುಟ್ಟುತ್ತಿರುವುದನ್ನು ನೋಡಿದರೆ ಅದು ತುಂಬ ಸಿಟ್ಟಿನಲ್ಲಿದೆ ಅಂತ ಗೊತ್ತಾಗುತ್ತಿತ್ತು. ರಾಮೇಶ್ವರ ಇನ್ನೂ ಗಾಬರಿಯಿಂದ ಎಚ್ಚತ್ತುಕೊಂಡಿರಲಿಲ್ಲ. ಹಾವು ಬಹಳ ವೇಗವಾಗಿ ಅವನ ಹತ್ತಿರ ಬಂದು ಅವನು ಹಿಂದಕ್ಕೆ ಸರಿಯುವಷ್ಟರಲ್ಲಿಯೆ ಎಡಗಾಲಿನ ಹೆಬ್ಬೆಟ್ಟಿಗೆ ಬಲವಾಗಿ ಕಚ್ಚಿಬಿಟ್ಟಿತು.

"ಅಯ್ಯೋ……..ಲಖನಾ….ಹಾವು ಕಚ್ಚಿಬಿಟ್ಟಿತು…..” ರಾಮೇಶ್ವರನ ಬಾಯಿಂದ ಹೊರಬಂದದ್ದು ಇಷ್ಟೇ ಮಾತುಗಳು. ಲಖನಾ ಇನ್ನೂ ‘ಹುರ್…. ಹುರ್….’ ಅಂತ ಹತಕ್ಕೆ ಕಟ್ಟಿದ್ದ ಎತ್ತುಗಳನ್ನು ಹುರಿದುಂಬಿಸುತ್ತಿದ್ದ. ಯಜಮಾನರು ಜೋರಾಗಿ ಕಿರುಚಿಕೊಂಡಿದ್ದು ನೋಡಿ ಏನಾಯಿತೋ ಅಂತ ಓಡಿಬಂದ.

"ಏನಾಯ್ತು, ಬುದ್ಧಿ….” ಅಂತ ಲಖನಾ ರಾಮೇಶ್ವರನ ಕಡೆ ಹಾರಿದ. ಆದರೆ ಲಖನಾ ಬರುವಷ್ಟರಲ್ಲಿ ಹಾವು ತನ್ನ ಕೆಲಸ ಮುಗಿಸಿ ಅಲ್ಲೇ ಪೊದೆಗಳ ಸಂದಿಯಲ್ಲಿ ಹೊರಟುಹೋಗಿತ್ತು. ರಾಮೇಶ್ವರ ಕಾಲಿನ ಬೆರಳನ್ನು ಒತ್ತಿ ಹಿಡಿದು ಹಾಗೇ ಕುಳಿತುಬಿಟ್ಟಿದ್ದ, ಮೇಲೇಳಲಾಗಲಿಲ್ಲ. ಹಾವು ಕಚ್ಚಿದ ವಿಷಯವನ್ನು ರಾಮೇಶ್ವರ ನರಳುತ್ತಲೇ ಹೇಳಿದ. ವಿಷಯ ಗೊತ್ತಾದ ಲಖನಾ ಯಜಮಾನರ ಮನೆಗೆ ಹೋಗಿ ಹೆಂಡತಿಮಕ್ಕಳನ್ನು ಕರೆದುಕೊಂಡು ಬಂದ. ಇತ್ತ ರಾಮೇಶ್ವರಪ್ರಸಾದನ ಆರೋಗ್ಯ ತೀವ್ರವಾಗಿ ಉಲ್ಬಣಿಸುತ್ತಿತ್ತು. ಮೈಬಣ್ಣ ನೀಲಿಯಾಗುತ್ತಿತ್ತು. ಹಾಗೂ ಹೀಗೂ ಮಾಡಿ ಹಳ್ಳಿಯ ವೈದ್ಯನನ್ನು ಹುಡುಕಿ ಕರಕೊಂಡು ಬಂದರು. ಅವನು ಹಾವು ಕಡಿದವನನ್ನು ಉಳಿಸಲು ಏನೆಲ್ಲ ಪ್ರಯತ್ನ ಮಾಡಿದರೂ ಸ್ವಲ್ಪವೂ ಪ್ರಯೋಜನವಾಗಲಿಲ್ಲ. ಸಾವಿನಿಂದ ಕಾಪಾಡಲು ಸಾಧ್ಯವಾಗಲಿಲ್ಲ.

ಎಲ್ಲರೂ ನೋಡುತ್ತಿರುವಂತೆಯೇ ರಾತ್ರಿ ಹನ್ನೊಂದು ಗಂಟೆಯಹೊತ್ತಿಗೆ, ರಾಮೇಶ್ವರನ ಪ್ರಾಣಪಕ್ಷಿ ಹಾರಿಹೋಯಿತು. ಮನೆಯಲ್ಲಿ ಎಲ್ಲೆಲ್ಲೂ ಆಕ್ರಂದನ, ಗೋಳು. ಯಾರನ್ನು ನೋಡಿದರೂ ಅಯ್ಯೋ ಹೀಗಾಯಿತಲ್ಲ ಅನ್ನುವವರೇ. ಹಾವು ಕಡಿದು ಸತ್ತ ಮನುಷ್ಯನನ್ನು ಸುಡುವುದಿಲ್ಲ ಅಂತ ಹೇಳುತ್ತಾರೆ. ಆರುತಿಂಗಳವರೆಗೆ ದೇಹದಲ್ಲಿ ಜೀವವಿರುತ್ತದೆ ಎಂದು ಜನರ ನಂಬಿಕೆ. ಹಾವು ಕಚ್ಚಿ ಸತ್ತ ವ್ಯಕ್ತಿಯ ಪ್ರಾಣ ತಲೆಬುರುಡೆಯ ಮೇಲ್ಭಾಗದಲ್ಲಿ ಬಂದು ನಿಂತುಬಿಡುತ್ತದೆಂದು ಕೆಲವರು ಬಲ್ಲ ವ್ಯಕ್ತಿಗಳು ಹೇಳುವುದುಂಟು. ಹಾಗಾಗಿ, ಯಾರಾದರೂ ಸರಿಯಾದ ತಾಂತ್ರಿಕರು ಪ್ರಯತ್ನಮಾಡಿದರೆ ಹಾವು ಕಡಿದು ಸತ್ತ ಮನುಷ್ಯನನ್ನು ಬದುಕಿಸಲು ಸಾಧ್ಯ ಅನ್ನುವ ನಂಬಿಕೆ ಅಂಥ ಜನರಲ್ಲುಂಟು. ಏನೇ ಇರಲಿ, ಹಾವು ಕಚ್ಚಿ ಸತ್ತ ವ್ಯಕ್ತಿಯ ದೇಹ ಆರು ತಿಂಗಳವರೆಗೆ ಸ್ವಲ್ಪವೂ ಕೆಡದೆ ಇರುತ್ತದೆ ಎಂಬ ಅಂಶ ನಿಜವಾದುದು. ಅದು ಹಾಳಾಗಿರುವುದಿಲ್ಲ, ಕರಗಿರುವುದಿಲ್ಲ, ಹುಳುಗಳು ಸಹ ಅದನ್ನು ಮುಟ್ಟಿರುವುದಿಲ್ಲ ಎನ್ನುತ್ತಾರೆ.

ಹಳ್ಳಿಯ ವೈದ್ಯ ನಾಡಿಪರೀಕ್ಷೆ ಮಾಡಿ ರಾಮೇಶ್ವರಪ್ರಸಾದ ಸತ್ತು ಹೋಗಿರುವನೆಂದು ಘೋಷಿಸಿದಾಗ ಅವನ ಶವವನ್ನು ಅಲ್ಲೇ ಬಾವಿಯಿಂದ ಸ್ವಲ್ಪ ದೂರದಲ್ಲಿ ಹಳ್ಳತೋಡಿ ಹೂತುಬಿಟ್ಟರು. ಆಮೇಲೆ ಎಂದಿನಂತೆ ಕಾಲ ಚಕ್ರ ಉರುಳತೊಡಗಿತು. ಕುಟುಂಬ ಹೊಸ ವಾತಾವರಣಕ್ಕೆ ಹೊಂದಿ ಕೊಂಡು ನಡೆಯತೊಡಗಿತು.

೧೯೬೦ನೇ ಇಸವಿಯ ಅಕ್ಟೋಬರು ತಿಂಗಳು. ಮಧ್ಯಾಹ್ನ ಎರಡು ಗಂಟೆಯ ಸಮಯ. ಚಳಿಗಾಲಿ ಆಗತಾನೇ ಪ್ರಾರಂಭವಾಗಿತ್ತು. ಸೂರ್ಯನ ಬಿಸಿಲಲ್ಲೂ ಚಳಿಯ ಅಂಶ ಕಂಡುಬರುತ್ತಿತ್ತು. ಲಖನಾ ಕೆಲಸದಲ್ಲಿ ತೊಡಗಿದ್ದ. ಏತದಿಂದ ಜಮೀನಿಗೆ ನೀರು ಹಾಯಿಸುತ್ತಿದ್ದ. ಇದ್ದಕ್ಕಿದ್ದಂತೆ ಹಿಂದಿನಿಂದ ಈ ಮಾತುಗಳು ಅವನ ಕಿವಿಗೆ ಬಿದ್ದು ಬಿಟ್ಟಿದ—"ಏನು ತಮ್ಮ, ಈ ಬಾವಿ ನೀರಿನಲ್ಲಿ ನಾನು ಸ್ನಾನ ಮಾಡಬಹುದೆ?"

ಲಖನಾ ಹಿಂದಿರುಗಿ ನೋಡಿದ. ಅವನ ಎದುರಿಗೆ ಸುಮಾರು ೪೭-೪೮ ವರ್ಷ ವಯಸ್ಸಿನ ಒಬ್ಬ ಮನುಷ್ಯ ನಿಂತು ಅವನನ್ನೇ ನೇರವಾಗಿ ನೋಡುತ್ತಿದ್ದ. ಆಗಂತುಕನ ಗಡ್ಡಮೀಸೆಗಳು ನೀಳವಾಗಿ ಬೆಳೆದಿದ್ದವು. ತಲೆಯ ಮುಂಗೂದಲು ಬಿಳುಪಾಗಿದ್ದವು. ಮೈಮೇಲೆ ಪಂಚೆ ಷರಟು ಧರಿಸಿದ್ದ. ಲಖನಾ ಸಮ್ಮತಿಸಿ ಕೊಂಡು ಅಂದ—"ಬನ್ನಿ, ಬನ್ನಿ, ಧಾರಾಳವಾಗಿ ಸ್ನಾನಮಾಡಿ." ಏತ ಎಳೆದು ಒಂದು ಬಾನೆ ನೀರನ್ನು ಅವನಿಗೆ ಕೊಟ್ಟ. ಆಗಂತುಕ ಬಟ್ಟೆ ಬಿಚ್ಚಿ ಸೊಂಟಕ್ಕೆ ಲಂಗೋಟಿ ಬಿಗಿದುಕೊಳ್ಳುತ್ತಾ ಅಂದ—"ಬೆಳಗ್ಗೆ ಮನೆಬಿಟ್ಟು ಹೊರಟೆದ್ದು ಇನ್ನೂ ಮುಂದಿನ ಹಳ್ಳಿಗೆ ಹೋಗಬೇಕು. ಹೋಗುವಷ್ಟರಲ್ಲಿ ಸಂಜೆಯಾಗಿ ಹೋಗತ್ತೆ. ಇಲ್ಲೇ ಸ್ನಾನಮಾಡಿ ಹೋಗೋಣ ಅಂದುಕೊಂಡೆ." ಲಖನಾ ಏನೂ ಮಾತಾಡಲಿಲ್ಲ. ಸುಮ್ಮನೆ ಆಗಂತುಕನ ಮಾತುಗಳನ್ನು ಕೇಳುತ್ತಾ ನಿಂತಿದ್ದ.

ಬಂದವನು ಸ್ನಾನ ಮುಗಿಸಿ ಮೈಕೈ ಒರೆಸಿಕೊಂಡು ಮತ್ತೆ ಬಟ್ಟೆ ಹಾಕಿ ಕೊಂಡ. ಲಂಗೋಟಿ ನೀರಿನಲ್ಲಿ ನೆನೆಸಿ ಚೆನ್ನಾಗಿ ಹಿಂಡಿ ಬಾವಿಯ ಹತ್ತಿರದಲ್ಲೇ ಒಣಗಲು ಹರವಿ ಹಾಕಿದ. ಲಂಗೋಟಿ ಐದು ನಿಮಿಷಗಳಲ್ಲೇ ಒಣಗಿ ಹೋಯಿತು. ಆಗಂತುಕನಿಗೆ ತುಂಬ ಆಶ್ಚರ್ಯವಾಯಿತು. ಏಕೆಂದರೆ ಲಂಗೋಟಿ ಒಣಗಲು ಕಡೇಪಕ್ಷ ಇಪ್ಪತ್ತು ನಿಮಿಷಗಳಾದರೂ ಬೇಕಾಗಿತ್ತು. ಅವನು ಮತ್ತೊಮ್ಮೆ ಲಂಗೋಟಿಯನ್ನು ನೀರಲ್ಲಿ ನೆನೆಸಿ ಅದೇ ಜಾಗದಲ್ಲಿ ಮತ್ತೆ ಒಣಗಲು ಹಾಕಿದ, ಸುಮಾರು ಐದು ನಿಮಿಷಗಳಲ್ಲೇ ಅದು ಮತ್ತೊಮ್ಮೆ ಗರಿಗರಿಯಾಗಿ ಒಣಗಿನಿಂತಿತ್ತು.

ಆಗಂತುಕ ಅನುಮಾನಗೊಂಡು ಲಖನಾನನ್ನು ಕೇಳಿದ—"ಏನು ತಮ್ಮಾ, ಇಲ್ಲಿ ಹಾವು ಕಚ್ಚಿ ಸತ್ತ ಯಾರಾದರೂ ಮನುಷ್ಯನನ್ನು ಹೂತುಹಾಕಿದ್ದಾರೆಯೆ?"

"ಹೌದು ಸ್ವಾಮಿ," ಲಖನಾ ನಿಟ್ಟುಸಿರುಬಿಟ್ಟು ಹೇಳಿದ—"ನಮ್ಮ ಯಜಮಾನರ ಹೆಣವನ್ನು ಇಲ್ಲೇ ಹೂತಿದ್ದಾರೆ. ನೀವು ಲಂಗೋಟಿ ಒಣಗಲು ಹಾಕಿದ್ದಿರಲ್ಲ, ಅಲ್ಲೇ."

ಲಖನಾ ಆಡಿದ ಮಾತು ಕೇಳಿ ಆಗಂತುಕ ಉತ್ಸಾಹದಿಂದ ಕೇಳಿದ—"ನಿಮ್ಮ ಯಜಮಾನರಿಗೆ ಹಾವು ಕಚ್ಚಿ ಎಷ್ಟು ದಿನಗಳಾಗಿರಬಹುದು?"

"ಸುಮಾರು ಐದು ಅಥವಾ ಆರು ತಿಂಗಳು," ಲಖನಾ ಲೆಕ್ಕಹಾಕಿ ಹೇಳಿದ. ಆಮೇಲೆ ರಾಮೇಶ್ವರಪ್ರಸಾದ ಹಾವು ಕಚ್ಚಿ ಸತ್ತ ಘಟನೆಯನ್ನು ವಿವರವಾಗಿ ತಿಳಿಯಪಡಿಸಿದ. ಘಟನೆಯ ವಿವರಗಳನ್ನೆಲ್ಲ ಕೇಳಿದ ಮೇಲೆ ಆಗಂತುಕ ಅಂದ—"ನಾನು ನಿಮ್ಮ ಯಜಮಾನರನ್ನು ಬದುಕಿಸಬಲ್ಲೆ. ನಾನು ಅವರ ಕುಟುಂಬದ ಜನರ ಜೊತೆ ಮಾತಾಡಲು ಇಷ್ಟಪಡುತ್ತೇನೆ."

ಲಖನಾಗೆ ಅವನ ಮಾತಿನಲ್ಲಿ ನಂಬಿಕೆ ಹುಟ್ಟಲಿಲ್ಲ. ಅಪನಂಬಿಕೆಯ ದೃಷ್ಟಿಯಲ್ಲಿ ಅವನನ್ನು ಕಣ್ಣವೆ ಮುಚ್ಚದೆ ನೋಡುತ್ತಿದ್ದ. "ಇಲ್ಲ ತಮ್ಮಾ, ನಾನು ನಿಜವಾಗಿಯೂ ನಿಮ್ಮ ಯಜಮಾನರನ್ನು ಬದುಕಿಸುತ್ತೇನೆ. ನನಗೆ ಅವರ ಮನೆ ತೋರಿಸು ನಡಿ."

ಆಗಂತುಕನ ಮಾತಿಗೆ ಒಪ್ಪಿ ಲಖನಾ ಅವನನ್ನು ಕರೆದುಕೊಂಡು ತನ್ನ ಯಜಮಾನರ ಮನೆ ತೋರಿಸಿದ. ಆಗಂತುಕ ರಾಮೇಶ್ವರಪ್ರಸಾದನ ಹೆಂಡತಿ ರಾಜಹಂಭಾಯಿ ಹಾಗೂ ಮಕ್ಕಳೊಡನೆ ತಾನು ಬಂದ ಬಗ್ಗೆ ಮಾತನಾಡಿದ. ತನಗೆ ಹಾವಿನ ವಿಷ ಇಳಿಸುವ ಮಂತ್ರ ಗೊತ್ತೆಂದೂ ತಾನು ಯಜಮಾನರನ್ನು ಬದುಕಿಸುತ್ತೇನೆಂದು ಸ್ಪಷ್ಟವಾಗಿ ಹೇಳಿದ. ಹಾವು ಕಡಿದು ಆರು ತಿಂಗಳು ಅವಧಿಗೆ ಮೀರದಂತೆ ಇದ್ದರೆ ಅಂಥ ವ್ಯಕ್ತಿಯನ್ನು ತಾನು ಮಂತ್ರ ಶಕ್ತಿಯಿಂದ ಬದುಕಿಸುತ್ತೇನೆಂದು ಹೇಳಿದ.

ಅವನ ಮಾತಿನಲ್ಲಿ ಮನೆಯವರಿಗೆ ಎಳ್ಳಷ್ಟೂ ನಂಬಿಕೆ ಬರಲಿಲ್ಲ. ಆದರೆ ಹಳ್ಳಿಯ ಹಿರಿಯರು ಹಾಗೂ ಇತರ ಕೆಲವರು ಪ್ರಯತ್ನಮಾಡಿ ನೋಡಲು ಆಗಂತುಕನಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸಿ ಮನವೊಲಿಸಿದಾಗ ರಾಮೇಶ್ವರನ ಇಬ್ಬರು ಮಕ್ಕಳು ಒಪ್ಪಿಕೊಂಡರು. ಸತ್ತ ತಾರೀಖನ್ನು ಗುರುತಿಟ್ಟುಕೊಂಡು ಸರಿಯಾಗಿ ಲೆಕ್ಕಹಾಕಿದಾಗ ರಾಮೇಶ್ವರ ಸತ್ತು

ಸುಮಾರು ಐದೂವರೆ ತಿಂಗಳುಗಳಾಗಿವೆ ಎಂದು ಗೊತ್ತಾಯಿತು. ಅಂದರೆ ಆಗಂತುಕನ ಮಾತಿನ ಪ್ರಕಾರ ಅವನನ್ನು ಬದುಕಿಸಲು ಸಾಧ್ಯವಿತ್ತು. ಈ ಕೆಲಸಕ್ಕಾಗಿ ಹಳ್ಳಿಯ ಪಂಚಾಯಿತಿಯ ಮುಖ್ಯರಿಂದ ಹಾಗೂ ಪೋಲೀಸರಿಂದ ಅನುಮತಿ ಪಡೆದು ಮಾರನೆಯ ದಿವಸ ಪ್ರಯೋಗ ಶುರುಮಾಡಬೇಕೆಂದು ತೀರ್ಮಾನಿಸಿದರು.

ಈ ಆಶ್ಚರ್ಯಕರ ಘಟನೆಯನ್ನು ನೋಡುವ ಕುತೂಹಲದಿಂದ ಹಳ್ಳಿಗೆ ಹಳ್ಳಿಯೇ ನೆರೆದಿತ್ತು. ಗೊತ್ತಾದ ವೇಳೆಗೆ ಸರಿಯಾಗಿ ಆಗಂತುಕ, ಗ್ರಾಮ ಪಂಚಾಯಿತಿಯವರು ಹಾಗೂ ಪೋಲೀಸರ ಸಮಕ್ಷಮದಲ್ಲಿ ರಾಮೇಶ್ವರ ಪ್ರಸಾದನ ಹೂತಿದ್ದ ಹೆಣವನ್ನು ತೋಟದ ಬಾವಿಯ ಹತ್ತಿರದಿಂದ ಹೊರಕ್ಕೆ ತೆಗೆಯಲಾಯಿತು. ಹೂತಿದ್ದ ಶವ ಸ್ವಲ್ಪವೂ ವಿಕಾರಗೊಂಡಿಲ್ಲದಿರುವುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಆಗ ಆಗಂತುಕ ಸ್ವಲ್ಪ ತುಪ್ಪ ತರಲು ಹೇಳಿದ. ತುಪ್ಪ ಬಂದಮೇಲೆ ಅವನು ಪಾತ್ರೆಯನ್ನೇ ಹಿಡಿದು ರಾಮೇಶ್ವರನ ತಲೆಯ ಮಧ್ಯಭಾಗದಲ್ಲಿ ಬುಡಮೇಲು ಮಾಡಿ ಇಟ್ಟುಬಿಟ್ಟ. ಸ್ವಲ್ಪ ಹೊತ್ತಾದ ಮೇಲೆ ತುಪ್ಪ ಕರಗಿ ಹರಿಯತೊಡಗಿತು. ರಾಮೇಶ್ವರನ ತಲೆಬುರುಡೆಯ ಮುಂಭಾಗದಲ್ಲಿ ಪ್ರಾಣಶಕ್ತಿ ಇನ್ನೂ ಸ್ಪಂದಿಸುತ್ತಿರುವುದು ಇದರಿಂದ ಸ್ಪಷ್ಟವಾಯಿತು.

ಆಗಂತುಕ ನೆರೆದ ಜನರಿಗೆಲ್ಲ ದೊಡ್ಡದಾಗಿ ಸುತ್ತುಗಟ್ಟಿ ನಿಲ್ಲಲು ಹೇಳಿ ತಾನು ಮಧ್ಯದಲ್ಲಿ ಕುಳಿತ. ರಾಮೇಶ್ವರಪ್ರಸಾದನ ನಿರ್ಜೀವ ದೇಹ ಭೂಮಿಯ ಮೇಲೆ ಆಕಾಶದ ಕಡೆ ಮುಖಮಾಡಿ ಮಲಗಿತ್ತು. ಅವನು ರಾಮೇಶ್ವರನ ಸುತ್ತ ಒಂದು ಗೆರೆ ಎಳೆದ. ಆಮೇಲೆ ಕೆಲವು ಕವಡೆಗಳನ್ನು ತರಿಸಿದ. ಚಕ್ಕಳ ಬಕ್ಕಳ ಹಾಕಿಕೊಂಡು ಕುಳಿತು ಬಾಯಿಂದ ಮಂತ್ರ ಪಠಿಸಲು ಶುರುಮಾಡಿದ. ಮಂತ್ರ ಹೇಳುತ್ತಲೇ ನಾಲ್ಕೂ ದಿಕ್ಕುಗಳ ಕಡೆಗೆ ಕವಡೆ ಎಸೆಯುತ್ತಿದ್ದ. ಹೀಗೆಯೇ ಒಂದೂವರೆಗಂಟೆ ಕಾಲ ಮಂತ್ರ ಹೇಳುತ್ತಾ ಕವಡೆ ಎಸೆಯುತ್ತಾ ಕಳೆಯಿತು. ಆದರೆ ಯಾವ ವಿಶೇಷ ಘಟನೆಯೂ ನಡೆಯಲಿಲ್ಲ. ಜನ ಕುತೂಹಲದಿಂದ ಉಸಿರು ಬಿಗಿಹಿಡಿದು ನೋಡುತ್ತಿದ್ದರು. ತುಂಬ ಹೊತ್ತು ಹೀಗೇ ನಿಂತಿದ್ದರಿಂದ ಅವರಿಗೂ ಬೇಸರವಾಗತೊಡಗಿತ್ತು. ಅಷ್ಟರಲ್ಲಿ ಆಗಂತುಕ ಒಂದು ಬಟ್ಟಲಿನಲ್ಲಿ ಹಾಲು ತರಬೇಕೆಂದು ಹೇಳಿಕಳುಹಿಸಿದ. ಹಾಲು ಕೂಡ ಬಂತು.

ಈಗ ಆಗಂತುಕ ಆವೇಶಕ್ಕೊಳಗಾದವನಂತೆ ಮತ್ತೂ ಜೋರಾಗಿ ಕವಡೆ

ಗಳನ್ನು ಎಸೆಯತೊಡಗಿದ. ಜೋರುಜೋರಾಗಿ ಮಂತ್ರೋಚ್ಚಾರಣೆ ಮಾಡತೊಡಗಿದ. ಹೀಗೇ ಸುಮಾರು ಅರ್ಧಗಂಟೆ ಕಳೆದಿತ್ತು. ಅಷ್ಟರಲ್ಲಿಯೆ ಇದ್ದಕ್ಕಿದ್ದಹಾಗೆ ಜನರ ನೋಟವೆಲ್ಲ ಉತ್ತರದಿಕ್ಕಿನೆಡೆಗೆ ಹರಿಯಿತು. ಗುಂಪಿನಲ್ಲಿ ಸಾಕಷ್ಟು ಗಲಭೆ ಶುರುವಾಯಿತು. ಆಗಂತುಕ ಮಂತ್ರೋಚ್ಚಾರಣೆಯನ್ನು ಹಾಗೆಯೇ ಮುಂದುವರಿಸಿದ್ದ. ಸ್ವಲ್ಪ ನಿಮಿಷಗಳಲ್ಲಿಯೆ ಅಗಲವಾದ ಹೆಡೆ ಬಿಚ್ಚಿಕೊಂಡು ಸುಮಾರು ೬-೬½ ಅಡಿ ಉದ್ದದ ಗೋದಿನಾಗರ ಸಿಟ್ಟಿನಿಂದ ಬುಸುಗುಟ್ಟುತ್ತಾ ಬರುತ್ತಿರುವುದನ್ನು ಜನ ಕಂಡರು. ಅವರಿಗೆ ಇನ್ನೂ ಆಶ್ಚರ್ಯ ಉಂಟುಮಾಡಿದ ಸಂಗತಿಯೆಂದರೆ ಒಂದು ಕವಡೆ ಹಾವಿನ ಹೆಡೆಗೆ ಹೊಡೆದು ಮತ್ತೆ ಜನರ ಗುಂಪಿನ ಕಡೆಗೆ ಬರುತ್ತಲಿತ್ತು. ಕವಡೆ ಮಂತ್ರಬಲದಿಂದ ಹಾರಿ ಹಾವಿಗೆ ದಾರಿ ತೋರಿಸುತ್ತಿತ್ತು ಅಂತ ಜನಕ್ಕೆ ಮನದಟ್ಟಾಯಿತು. ಹಾವು ಫೂತ್ಕರಿಸುತ್ತಲೇ ಗುಂಪಿನೆಡೆಗೆ ಬರುತ್ತಿತ್ತು.

ಅದು ಜನರ ಗುಂಪನ್ನು ಸಮೀಪಿಸಿದ ಕೂಡಲೇ ಜನ ಹಿಂದೆ ಸರಿದು ಹಾವು ಒಳಗೆ ಹೋಗಲು ದಾರಿಮಾಡಿಕೊಟ್ಟರು. ಹಾವು ಶವದ ಹತ್ತಿರ ಬಂದು ಸುತ್ತುಗೆರೆಯ ಬಳಿ ನಿಂತಿತು. ಸಿಟ್ಟಿನಿಂದ ನಾಲ್ಕೈದು ಬಾರಿ ಹೆಡೆ ನೆಲಕ್ಕೆ ಬಡಿಯಿತು. ಆಗಂತುಕ ಇನ್ನೂ ಮಂತ್ರ ಓದುತ್ತಲೇ ಇದ್ದ. ಈಗ ಅವನು ಸರ್ಪವನ್ನು ದುರುಗುಟ್ಟಿಕೊಂಡು ನೋಡುತ್ತ—"ನಡಿ, ಒಳಗೆ ಹೋಗು!" ಅಂದ. ಆದರೆ ಹಾವು ಹೊರಗಡೆಯೆ ಸಿಂಬಿ ಕಟ್ಟಿಕೊಂಡು ಕುಳಿತು ಮತ್ತೆ ಮತ್ತೆ ಹೆಡೆಯನ್ನು ನೆಲಕ್ಕೆ ಅಪ್ಪಳಿಸುತ್ತಲೇ ಇತ್ತು.

ಒಂದೇಕಡೆ ಸ್ವಲ್ಪಹೊತ್ತು ಕುಳಿತಿದ್ದು ಮತ್ತೆ ಮತ್ತೆ ಹೆಡೆ ಬಡಿಯುತ್ತಿದ್ದುದರಿಂದ ಹಾವಿಗೂ ಸುಸ್ತಾಗಿತ್ತು. ಕಡೆಗೆ ಅದು ರಾಮೇಶ್ವರನ ಶವದ ಬಳಿಗೆ ಹರಿಯತೊಡಗಿತು. ಅದು ಶವದ ಕಾಲಿನ ಬಳಿ ಹೋಗಿ ನಿಂತುಬಿಟ್ಟಾಗ ಆಗಂತುಕ ಆವೇಶಗೊಂಡು ಹೇಳಿದ—"ನಡಿ, ನಾಗರಾಜ, ಈ ನಿರ್ದೋಷಿಯನ್ನು ಬದುಕಿಸು. ನಿನ್ನಮೇಲಾಣೆ...."

ಈಗ ಎಲ್ಲರ ಕಣ್ಣುಗಳೂ ಹಾವಿನ ಮೇಲೆ ನೆಟ್ಟಿದ್ದುವು. ಈಗ ಹಾವು ರಾಮೇಶ್ವರನ ಕಾಲ ಹೆಬ್ಬೆರಳಿಗೆ ಬಾಯಿಟ್ಟು ವಿಷ ಹೀರಿ ಪಕ್ಕದಲ್ಲಿದ್ದ ಹಾಲಿನ ಬಟ್ಟಲಿಗೆ ಉಗುಳತೊಡಗಿತು. ಸುಮಾರು ಎಂಟು ಹತ್ತುಬಾರಿ ಹಾಗೆಯೆ ವಿಷ ಹೀರಿ ಉಗುಳುತ್ತಲೇ ಇತ್ತು. ಇದಾದ ಮೇಲೆ ಎದುರಾದ ದೃಶ್ಯದಿಂದ ಜನರೆಲ್ಲ ಬೊಂಬೆಯಂತೆ ನಿಂತುಬಿಟ್ಟರು. ರಾಮೇಶ್ವರನ ದೇಹದಲ್ಲಿ ಜೀವದ ಸಂಚಾರ ಪ್ರಾರಂಭವಾಗಿತ್ತು. ಹೆಣದಂತೆ ಬಿದ್ದಿದ್ದ ದೇಹದಲ್ಲಿ ಉಸಿರು ತುಂಬ

ತೊಡಗಿತು. ಈಗ ಹಾವು ಪಕ್ಕದಲ್ಲಿ ಒಂದು ಕಡೆ ಸಿಂಬಿ ಸುತ್ತಿ ಕುಳಿತು ಬಿಟ್ಟಿತ್ತು. ಆಗಂತುಕ ಹಾವಿನ ಸುತ್ತ ಗೆರೆ ಎಳೆದು ಮಂತ್ರಬಲದಿಂದ ಅದನ್ನು ಅಲ್ಲೇ ಬಂಧಿಸಿಬಿಟ್ಟ. ಅನಂತರ ರಾಮೇಶ್ವರನ ದೇಹದ ಬಳಿಗೆ ಬಂದು ಅವನ ಎದೆಯ ಬಡಿತವನ್ನು ಪರೀಕ್ಷೆಮಾಡತೊಡಗಿದ. ಅವನ ಕೈ ಹಿಡಿದು ನಾಡಿ ಪರೀಕ್ಷೆಮಾಡತೊಡಗಿದ. ಜನ ನೋಡುತ್ತಿದ್ದ ಹಾಗೆಯೆ ಸ್ವಲ್ಪ ಹೊತ್ತಿನಲ್ಲಿ ರಾಮೇಶ್ವರನ ಮೈ ಅಲುಗಾಡತೊಡಗಿತು. ಅವನು ಎದ್ದು ನೆಲದ ಮೇಲೆ ಕುಳಿತ. ಹಳ್ಳಿಯ ಜನ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟರು. ರಾಮೇಶ್ವರನ ಕುಟುಂಬದವರಿಗಂತೂ ಆನಂದದಿಂದ ಹುಚ್ಚುಹಿಡಿದಂತಾಗಿತ್ತು.

ಹಾಲಿನ ಬಟ್ಟಲು ವಿಷದಿಂದ ಕಪ್ಪಾಗಿಹೋಗಿತ್ತು. ರಾಮೇಶ್ವರ ಆಗತಾನೇ ನಿದ್ದೆಯಿಂದ ಎದ್ದವನಂತೆ ಕುಳಿತಿದ್ದ. ಆಗಂತುಕನ ಬಗ್ಗೆ ಎಲ್ಲರ ಕಣ್ಣುಗಳಲ್ಲೂ ಭಯಭಕ್ತಿ, ಕೃತಜ್ಞತೆ ತುಂಬಿಹೋಗಿದ್ದುವು. ಆಮೇಲೆ ಆಗಂತುಕ ರಾಮೇಶ್ವರನಿಗೆ ಆರುತಿಂಗಳ ಕಾಲ ತುಪ್ಪ ಸೇವಿಸಲು ಹೇಳಿದ. ಸುಮಾರು ಒಂದು ತಿಂಗಳ ಕಾಲ ಹಸುರು ಸೊಪ್ಪು ತರಕಾರಿ ಪಥ್ಯದಲ್ಲಿರಲು ಹೇಳಿದ. ಆಮೇಲೆ ನಿಧಾನವಾಗಿ ಎಂದಿನಂತೆ ಆಹಾರ ತೆಗೆದುಕೊಳ್ಳಲು ಸಲಹೆ ಮಾಡಿದ.

ರಾಮೇಶ್ವರ ಬದುಕಿ ಬಂದ ಮೇಲೆ ಅತನ ಮಕ್ಕಳು ಆಗಂತುಕನ ಹೆಸರು ಕೇಳಿದರು. ಆದರೆ ಆಗಂತುಕ ಏನೂ ಹೇಳಲಿಲ್ಲ. ಅವರು ನೀಡಿದ ಯಾವ ಕಾಣಿಕೆಯನ್ನೂ ತೆಗೆದುಕೊಳ್ಳಲಿಲ್ಲ. ಕಾಣಿಕೆಯಾಗಿ ಒಂದು ಕಾಸು ಮುಟ್ಟುವುದಕ್ಕೂ ಗುರುಗಳ ಅನುಮತಿಯಿಲ್ಲ ಅಂದುಬಿಟ್ಟ.

ಅಂದು ಆ ಹಳ್ಳಿ ಬಿಟ್ಟು ಹೊರಟುಹೋದ ಆಗಂತುಕ ಮತ್ತೆಂದೂ ಕಾಣಿಸಿಕೊಳ್ಳಲಿಲ್ಲ.

ರಾಮೇಶ್ವರಪ್ರಸಾದ ಇಂದು ಬದುಕಿಲ್ಲ. ಕಳೆದ ಎರಡು ವರ್ಷಗಳ ಹಿಂದಷ್ಟೆ ಅವನು ಸ್ವರ್ಗಸ್ಥನಾದ.

ಅರೋರಾ

ಮದ ಮತ್ಸರವ ಬಿಡದ ತನಕ। ವಿಧವಿಧದ ಸಾಧನ ದಿನ ದಿನ ಮಾಡಲೇನೋ।

—ಜಗನ್ನಾಥದಾಸರು

ಚಿನ್ನದ ಗುಡ್ಡದ ಚಿನ್ನ

ಭೂಮಿಯನ್ನು ನಮ್ಮ ಹಿರಿಯರು 'ಬಹುರತ್ನಾವಸುಂದರ' ಎಂದು ಹೊಗಳಿದ್ದಾರೆ. ರತ್ನ ಖನಿಜಗಳಿಗೆ ಭೂಮಿಯೇ ಮೂಲ. ಅಷ್ಟೇ ಅಲ್ಲ, ಕಬ್ಬಿಣ, ತಾಮ್ರ, ನಿಕ್ಕಲ್, ಸತು, ಸೀಸ, ತವರ, ಚಿನ್ನ, ಬೆಳ್ಳಿ ಇಂತಹ ಹತ್ತಾರು ಲೋಹಗಳು ದೊರೆಯುವುದು ಭೂಮಿಯಲ್ಲಿ ಅಡಗಿರುವ ಶಿಲೆಗಳಲ್ಲೇ. ಕುಡಿಯುವ ನೀರಿನಿಂದ ಹಿಡಿದು ಬೆಳೆಯುವ ಬೆಳೆಯುವರೆಗೆ ನಮಗೆ ಭೂಮಿಯೆ ಆಸರೆ. ಇದರಿಂದಾಗಿ ಭೂಮಿಗೆ ತಾಯಿಯ ಸ್ಥಾನವನ್ನು ನೀಡಿದ್ದೇವೆ.

ಕಬ್ಬಿಣ, ತಾಮ್ರ, ತವರ ಇಂತಹ ಲೋಹಗಳ ಉಪಯೋಗವನ್ನು ತಿಳಿಯದವರಾರು? ಪಾತ್ರೆ ಪದಾರ್ಥ, ಯಂತ್ರೋಪಕರಣ ಮುಂತಾದ ಸಾಮಗ್ರಿಗಳು ತಯಾರಾಗುವುದು ಲೋಹಗಳಿಂದಲೇ. ನಾವು ಇಂದು ಯಂತ್ರ ಯುಗದಲ್ಲಿದ್ದೇವೆ. ಭೂಮಿಯಲ್ಲಿ ಕಂಡು ಬರುವ ಎಲ್ಲ ಶಿಲೆಗಳಲ್ಲೂ ಲೋಹಗಳು ದೊರೆಯುವುದಿಲ್ಲ. ಯಾವ ಶಿಲೆಯಲ್ಲಿ ಲೋಹದ ಅದುರು ಇದೆ, ಇದರ ಪ್ರಮಾಣವೆಷ್ಟು, ಗಣಿ ಮಾಡಲು ಸಾಧ್ಯವೆ ಎಂಬುದನ್ನು ಭೂವಿಜ್ಞಾನಿಗಳು ಸಮೀಕ್ಷೆ ಮಾಡಿ ತಿಳಿಸಬೇಕು.

ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಕುದುರೆಮುಖ, ಕೆಮ್ಮಣ್ಣುಗುಂಡಿಗಳಲ್ಲಿ ಕಬ್ಬಿಣದ ಅದುರು ಬೆಟ್ಟದ ರೂಪದಲ್ಲಿ ಸೃಷ್ಟಿಯಾಗಿದೆ. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಈ ಅಮೂಲ್ಯ ಲೋಹಕ್ಕಾಗಿ ಹನ್ನೆರಡು ಸಾವಿರ ಅಡಿಗೂ ಆಳವಾದ ಗಣಿಯನ್ನೇ ತೋಡಿದ್ದಾರೆ. ವಜ್ರಕ್ಕಾಗಿ ಆಂಧ್ರ ಪ್ರದೇಶದ ವಜ್ರಕರೂರಿನಲ್ಲಿ ಜೈರಿಗೆ ಹಾಕಿ ನೆಲವನ್ನು ಕೊರೆಯುತ್ತಿದ್ದಾರೆ. ರತ್ನ ಖನಿಜಗಳಿಗಾಗಿ ರಾಮನಗರ, ಪಾವಗಡ ಮುಂತಾದ ಕಡೆಗಳಲ್ಲಿ ಗುಣಿಗಳನ್ನು ತೋಡುತ್ತಿದ್ದಾರೆ. ತಾಮ್ರದ ಅದುರಿಗಾಗಿ ಚಿತ್ರದುರ್ಗದ ಬಳಿಯ ಇಂಗಳದಾಳಿನಲ್ಲಿ ಜೆಳ್ಳಿಗುಡ್ಡವೆಂಬ ಬೆಟ್ಟವನ್ನೇ ಕೊರೆಯುತ್ತಿದ್ದಾರೆ. ಒಂದೊಂದು ಲೋಹದ ಗುಣವೂ ಬೇರೆ. ಹಾಗೆಯೇ ಅವು ಶಿಲೆಗಳಲ್ಲಿ ದೊರೆಯುವ ಬಗೆಯೂ ಬೇರೆ.

ಕಳೆದ ವರ್ಷ (೧೯೮೬) ನಾನು ಹಾಗೂ ಸಹೋದ್ಯೋಗಿ ಮೂರ್ತಿ ಪಶ್ಚಿಮ ಘಟ್ಟದ ಆಗುಂಬೆಯ ಬೆಟ್ಟಗುಡ್ಡಗಳ ಸಮೀಕ್ಷೆಗೆಂದು ಹೊರಟೆವು. ಇಂಥ ಸಮೀಕ್ಷೆ ಒಂದೆರಡು ದಿನಗಳಲ್ಲಿ ಮುಗಿಯುವುದಿಲ್ಲ. ಮಳೆಗಾಲ ಕಳೆದ ಮೇಲೆ ಹೊರಡುವುದೇ ನಮಗೆ ಅನುಕೂಲ. ಆರು ತಿಂಗಳ ಕಾಲ ಕಾಡುಮೇಡನ್ನು ಸುತ್ತಿ ಸಮೀಕ್ಷೆ ನಡೆಸುವುದರಿಂದ ನಮಗೆ ಈ ಅವಧಿಗೆ ಬೇಕಾಗುವ ಬಟ್ಟೆಬರೆ, ಪಾತ್ರೆ ಪದಾರ್ಥ, ಸೀಮೆಎಣ್ಣೆಲಾಂದ್ರ, ಬಕೇಟು, ಒಲೆ, ಡಬ್ಬ, ತಿಂಡಿತಿನಿಸು

ಇವುಗಳನ್ನು ಮರದ ಪೆಟ್ಟಿಗೆಗಳಲ್ಲಿ ತುಂಬಿಕೊಂಡು ಹೊರಡುತ್ತೇವೆ. ದಿನನಿತ್ಯ ವಾಸಿಸಲು ಒಂದು ದೊಡ್ಡ ಬಿಳಿಡೇರಾ. ಅದರಲ್ಲಿ ಎರಡು ಕೋಣೆಗಳಿರುತ್ತವೆ. ಊಟಕ್ಕೆ ಒಂದು ಸುಮಾರಾದ ಡೇರಾ. ಸ್ನಾನಕ್ಕೆ, ದೇಹ ಬಾದೆ ತೀರಿಸಿ ಕೊಳ್ಳಲು ಬೇರೆ ಬೇರೆ ಚಿಕ್ಕ ಡೇರೆಗಳು. ಕೊನೆಯ ಪಕ್ಷ ನಮ್ಮ ಡೇರೆಗಳನ್ನು ಹಾಕಲು ಅರ್ಧ ಎಕರೆ ಜಾಗವಾದರೂ ಬೇಕು. ಜೀಪಿನ ಹಿಂಭಾಗದಲ್ಲಿ ಲಗತ್ತಿಸಿದ 'ಟ್ರೈಲರ್'ನಲ್ಲಿ ಇವುಗಳನ್ನು ತುಂಬಿಕೊಂಡು ನವೆಂಬರ್ ತಿಂಗಳಲ್ಲಿ ಹೊರಡುತ್ತೇವೆ. ಹಳ್ಳಿಗಳನ್ನು ಹಾದು ಹೋಗುವಾಗ 'ಸರ್ಕಸ್ ಕಂಪೆನಿ ಹೋಗುತ್ತಾ ಇದೆ ಎಂದು ಜನ ಭಾವಿಸುವುದುಂಟು. ನಾವು ಡೇರೆ ಹಾಕುವುದು ಸಾಮಾನ್ಯವಾಗಿ ಹಳ್ಳಿಗಳ ಪಕ್ಕದಲ್ಲಿ, ಹೀಗಾಗಿ ಗ್ರಾಮೀಣ ಜೀವನದ ನಿಜವಾದ ಸಹವಾಸ ನಮಗೆ ಲಭ್ಯವಾಗುತ್ತದೆ. ನಾವು ಸಮೀಕ್ಷಿಸಬೇಕಾದ ಜಾಗಕ್ಕೆ ಯಾವ ಊರು ಹತ್ತಿರವಿದೆ ಎಂಬುದನ್ನು ಮೊದಲೇ ನಾವು ನಕ್ಷೆ ಗಳನ್ನು ನೋಡಿ ತಿಳಿದುಕೊಳ್ಳುತ್ತೇವೆ. ನಮ್ಮ ಕೈಯಲ್ಲಿ ಸದಾ ಒಂದು ನಕ್ಷೆ ಇರುತ್ತದೆ. ಇದರಲ್ಲಿ ಕಾಡುದಾರಿ, ಕಾಲುದಾರಿ, ಹೆದ್ದಾರಿ, ಸೇತುವೆ, ಬಂಡಿಜಾಡು, ನದಿ, ಕೆರೆ, ಕಾಲುವೆ, ರೈಲ್ವೆಲೈನ್ಗಳು, ಊರು, ಕೇರಿ, ಕೋಟೆ ಕೊತ್ತಲ, ಪೋಸ್ಟಾಫೀಸು, ಬೆಟ್ಟಗುಡ್ಡದ ಹೆಸರು, ಸಮುದ್ರ ಮಟ್ಟದಿಂದ ಇವು ಇರುವ ಎತ್ತರ, ದೇವಸ್ಥಾನ, ಮಸೀದಿ, ಇಗರ್ಜಿ, ಸ್ಮಶಾನ ಇಂತಹ ಹತ್ತಾರು ಪ್ರಮುಖ ಲಕ್ಷಣಗಳನ್ನು ಯಥಾವತ್ತಾಗಿ ನಕಲು ಮಾಡಿರುತ್ತಾರೆ. ಇಂತಹ ನಕ್ಷೆ ಇದ್ದರೆ ಸಾಕು, ಈ ಊರು ಯಾವುದು, ಮುಂದಿನ ಊರಿನ ಹೆಸರೇನು, ಇದು ಯಾವ ತಾಲ್ಲೂಕಿಗೆ ಸೇರುತ್ತದೆ. ಈ ಊರಿನ ಮುಂದೆ ಹಳ್ಳವಿದೆಯೇ ಇಂತಹ ಹತ್ತಾರು ಪ್ರಶ್ನೆಗಳನ್ನು ಸ್ಥಳದವರನ್ನು ಕೇಳುವ ಅವಶ್ಯಕತೆಯೇ ಇಲ್ಲ. ಇಂತಹ ನಕ್ಷೆಗಳ ಮೇಲೆ ನಾವು ಶಿಲೆಗಳು ಹಾದಿರುವ ದಿಕ್ಕು, ಸಾಗಿರುವ ಜಾಡು, ಉದ್ದ, ಹರವು, ಬಾಗು, ಅವುಗಳ ಜಾತಿ ಮುಂತಾದ ಅಂಶಗಳನ್ನು ನಕಲು ಮಾಡಿ ಆ ಪ್ರದೇಶದ ಭೂವಿಜ್ಞಾನದ ನಕ್ಷೆಗಳನ್ನು ತಯಾರು ಮಾಡುತ್ತೇವೆ.

ಪಶ್ಚಿಮ ಘಟ್ಟವೆಂದೊಡನೆ ಮಲೆನಾಡಿನ ಸೊಬಗು ಕಣ್ಣಮುಂದೆ ಬರುತ್ತದೆ. ದಟ್ಟವಾದ ಅರಣ್ಯ, ಕತ್ತೆತ್ತಿ ನೋಡಿದರೆ ಬೆಟ್ಟಸಾಲು, ತೇಗ, ಗಂಧ, ಹೊನ್ನೆ, ನಂದಿ, ದೇವದಾರು, ಹೆಬ್ಬಲಸು ವೃಕ್ಷಗಳ ಸ್ಪರ್ಧೆ ನಡೆಸಿ ಬೆಳೆದಿರುವ ದುರ್ಗಮ ಕಾಡು, ಕಾಲಿಟ್ಟರೆ ತರಗೆಲೆಯ ಸಪ್ಪಳಕ್ಕೆ ದಿಕ್ಕು ಪಾಲಾಗಿ ಹೋಗುವ ವನ್ಯ ಜೀವಿಗಳು, ಮರದಿಂದ ಮರಕ್ಕೆ ಹಾರುವ ಕೆಂಬಣ್ಣದ

ಅಳಿಲು, ಕಣ್ಮುಂದೆ ಮಿಂಚಿ ಮಾಯವಾಗುವ ಕಾಡುಕುರಿ, ಪ್ರಾಣಿಗಳನ್ನು ಲಟಲಟ ಮುರಿದು ನಾಗಾಲೋಟದಲ್ಲಿ ಕುದುರೆಯಂತೆ ನುಗ್ಗುವ ಕಾಡು ಕೋಣದ ಹಿಂಡು, ಪುಕ್ಕ ಕೂದಲನ್ನು ನಿಮಿರಿಸಿ ಬಾಣದಂತೆ ನೆಟ್ಟಗೆ ಎದುರಾಗುವ ಕಾಡುಹಂದಿ. ಒಂದೇ ಎರಡೆ. ತೀರ್ಥಹಳ್ಳಿಯಿಂದ ಆಗುಂಬೆಗೆ ಹೋಗುವ ರಸ್ತೆಯಲ್ಲಿ ಇದ್ದ ಹಳ್ಳಿಗಳನ್ನೆಲ್ಲ ನೋಡಿದೆವು. ನೀರಿದ್ದರೆ ನೆರಳಿಲ್ಲ, ನೆರಳಿದ್ದರೆ ಡೇರೆ ಹಾಕಲು ಜಾಗವಿಲ್ಲ, ಕೊನೆಗೆ ಮಾಸ್ತಿಕಟ್ಟೆಯ ಬಳಿ ಊರಿಂದ ಹೊರಗೆ ಮುಕ್ಕಾಲು ಎಕರೆ ಜಾಗದಲ್ಲಿ ಪಂಚಾಯಿತಿ ಅಧ್ಯಕ್ಷರ ಸಮ್ಮತಿ ಪಡೆದು ತಂದ ಸಾಮಾನನ್ನೆಲ್ಲ ಇಳಿಸಿದೆವು. ನಮ್ಮನ್ನು ಬಂಗಾರ ಹುಡುಕಲು ಬಂದಿದ್ದಾರೆಂದು ಅಧ್ಯಕ್ಷರು ಬಂದವರಿಗೆಲ್ಲ ಕುತೂಹಲವಾಗಿ ವಿವರಿಸುತ್ತಿದ್ದರು.

ಮರುದಿನ ನಮ್ಮ ಕೆಲಸ ಪ್ರಾರಂಭ, ನಾಲ್ಕು ಜನ ದಿನಗೂಲಿಯವರು ಬಂದರು. ನಾವು ನಮ್ಮ ವೇಷ ಬದಲಾಯಿಸಿದೆವು. ತಲೆಗೆ ಬಿಳಿಯ ಟೋಪಿ, ಕೊರಳಿಗೆ ನೇತುಬಿಟ್ಟ ಭೂತಗನ್ನಡಿ, ಜೇಬಿನಲ್ಲಿ ಚಾಕು, ಪೆನ್ಸಿಲ್ಲು, ಇಂಚು ಪಟ್ಟಿ, ಸೊಂಟಕ್ಕೆ ಸಿಕ್ಕಿಸಿದಂತೆ ದಿಕ್ಕನ್ನು ಗುರುತಿಸುವ ದಿಕ್ಸೂಚಿ, ಕಾಲಿಗೆ ರಬ್ಬರಿನ ಬೂಟು, ದಪ್ಪ ಹತ್ತಿ ಬಟ್ಟೆಯ ನೀಲಿ ಪ್ಯಾಂಟು. ಕೂಲಿಯವರಲ್ಲಿ ಒಬ್ಬನ ಕೈಲಿ ನೀರಿನ ಬಾಟಲು, ಮತ್ತೊಬ್ಬನ ಕೈಲಿ ಮಚ್ಚು, ಇನ್ನೊಬ್ಬ ಗೋಣಿಚೀಲ ಹಾಗೂ ನಮ್ಮ ಬುತ್ತಿಯನ್ನು ಎತ್ತಿಕೊಂಡ. ನಾಲೂರಿನ ದೇವಯ್ಯ ಹೆಗಲಿಗೆ ದೊಡ್ಡ ಸುತ್ತಿಗೆ ಏರಿಸಿದ. ಕೈಯಲ್ಲಿ ನಕ್ಷೆ ಹಿಡಿದು ಜೀಪು ಹತ್ತಿದೆವು.

ಆಗುಂಬೆಗೆ ಬರುವ ಮೊದಲೇ ಈ ಪ್ರದೇಶದ ಸುತ್ತಮುತ್ತ ದೊರೆಯುವ ಶಿಲೆಗಳ ಬಗ್ಗೆ ಸ್ವಲ್ಪ ಮಾಹಿತಿ ಸಂಗ್ರಹಿಸಿ ತಂದಿದ್ದೆವು. ಮೊದಲ ದಿನ ನಾವು ಮಾಸ್ತಿಕಟ್ಟೆಗೆ ನಾಲ್ಕು ಕಿಲೋಮೀಟರ್ ಪೂರ್ವಕ್ಕಿರುವ ಬೆಟ್ಟದ ಸಾಲಿನಲ್ಲಿ ಒಂದು ಬೆಟ್ಟವನ್ನು ಸಮೀಕ್ಷೆ ಮಾಡಲು ಯೋಜಿಸಿದ್ದೆವು. ಅದೇ ಬೆಟ್ಟ ನಮ್ಮ ಗಮನ ಸೆಳೆಯಲು ಒಂದು ಕಾರಣವಿದೆ. ಬ್ರಿಟಿಷರ ಕಾಲದಲ್ಲಿ ಇಲ್ಲಿ ಚಿನ್ನಕ್ಕಾಗಿ ಗಣಿ ಮಾಡಿದ್ದರಂತೆ ಎಂದೇ ಈ ಜಾಗವನ್ನು ಶೋಧಿಸಲು ನಮಗೂ ಉತ್ಸಾಹ. ಸಾಮಾನ್ಯವಾಗಿ ಚಿನ್ನ ಹೆಚ್ಚು ಪಾಲು ದೊರೆಯುವುದು ಬೆಣಚುಕಲ್ಲಿನ ಸಿರಗಳಲ್ಲಿ. ಚಿನ್ನವುಳ್ಳ ಕಲ್ಲು ಮಳೆ ಬಿಸಿಲು ನದಿಗಳಿಂದಾಗಿ ಕೊಚ್ಚಿಹೋಗಿ ಮರಳಿನಲ್ಲಿ ಅದರಲ್ಲೂ ನದಿಗಳು ಸಾಗರ ಸೇರುವ ಮುಖಜ ಭೂಮಿಗಳಲ್ಲಿ ಸಂಚಯನವಾಗುವುದೂ ಉಂಟು.

ಕೂಲಿಯವರು ಆ ಪ್ರದೇಶದವರೇ ಆಗಿದ್ದುದರಿಂದ ಕಾಡಿನ ದಾರಿಗಳ

ಪರಿಚಯ ಅವರಿಗಿತ್ತು. ಕೆಲವರು ಏಲಕ್ಕಿ ಕೀಳಲು ಈ ಜಾಗದಲ್ಲಿ ಬಂದಿದ್ದರೆಂದು ಅವರೇ ಹೇಳುತ್ತಿದ್ದರು. ಟಾರು ರಸ್ತೆಯಲ್ಲಿ ಸುಮಾರು ಮೂರುಕಿಲೋಮೀಟರ್ ದೂರ ಬಂದು ರಸ್ತೆಯ ಬಳಿ ಇಳಿದೆವು. ಜೀಪಿನ ಡ್ರೈವರ್ ಸಂತಾನಂಗೆ ಬಂಡೀ ಜಾಡಿನಲ್ಲಿ ಬಂದು ತಲ್ಲಿಮನೆಯ ಬಳಿ ಕಾದಿರಲು ತಿಳಿಸಿ ಹೊರಟೆವು. ರಸ್ತೆ ಇಳಿಯುತ್ತಲೇ ಗದ್ದೆಯ ಬಯಲು. ಬಯಲನ್ನು ದಾಟಿದರೆ ಗುಡ್ಡದ ಬುಡ ಪ್ರಾರಂಭವಾಗುತ್ತದೆ. ಅಲ್ಲಲ್ಲೇ ಪಾಚಿಕಟ್ಟಿದ ಉರುಟುಕಲ್ಲುಗಳು ಬಿದ್ದಿದ್ದವು. ಹೆಜ್ಜೆ ಇಡುವಾಗ ಜಾರುತ್ತಿದ್ದೆವು, ಜೌಗಿನಲ್ಲಿದ್ದ ರಕ್ತ ಹೀರುವ ಜಿಗಣೆಗಳು ಹೇಗೋ ಕಾಲು ಚೀಲದಲ್ಲಿ ತೂರಿ ಬೆರಳು ಸಂದಿಗಳಲ್ಲಿ ಸೇರಿ ರಕ್ತಹೀರಿ ಬಿಡುತ್ತಿದ್ದವು. ಕೆರೆತ ಶುರುವಾದಾಗಲೇ ನಮಗೆ ಎಚ್ಚರ. ಡಬ್ಬಿಯಲ್ಲಿದ್ದ ಸುಣ್ಣವನ್ನು ಮೆತ್ತಿ ಅವುಗಳನ್ನು ಹಿಡಿತದಿಂದ ಬಿಡಿಸಿ ಪಾರಾಗಬೇಕಾದರೆ ಶತಸಾಹಸವಾಗುತ್ತಿತ್ತು. ಹಾಗೂ ಹೀಗೂ ನಾಲ್ಕುನೂರು ಅಡಿ ಹತ್ತಿದೆವು. ಸುತ್ತ ಗ್ರಾನೈಟ್ ಬಂಡೆಗಳು, ಇವುಗಳ ಬಿರುಕಿನಲ್ಲಿ ಎದ್ದಿರುವ ಗಿಡಗೆಂಟೆ, ಮೇಲೆ ಏರಿದಂತೆ ಮರಗಳು ಒತ್ತಾಗಿ ಬೆಳೆದು ಸೂರ್ಯಮರೆಯಾದ. ಕಾಲಿಟ್ಟರೆ ತರಗೆಲೆಯ ಸಪ್ಪಳ. ಗದ್ದೆಗಳಲ್ಲಿ ರಾಗಮಯವಾಗಿ ಹಾಡುತ್ತಿದ್ದ ರೈತರ ಸ್ವರ ಬರುಬರುತ್ತಾ ಕ್ಷೀಣಿಸಿತು. ಕಾಡಿನಲ್ಲಿ ಒಂದು ಬಗೆಯ ನೀರವತೆ ಹಬ್ಬಿತು. ಮರಗಳ ತೊಗಟೆಗಳಿಗೆ ಅಂಟಿಕೊಂಡಿದ್ದ ಕೀಟಗಳು ಒಂದೇ ಸಮನೆ ಚುಯ್‌ಚುಯ್ ಎಂದು ಆಲಾಪನೆ ಮಾಡಲು ಪ್ರಾರಂಭಿಸಿದವು. ಇದು ಕಾಡಿನ ಏಕಾಂತತೆಯನ್ನು ಮತ್ತಷ್ಟು ಹೆಚ್ಚಿಸಿತು. ಸುತ್ತ ನರಪ್ರಾಣಿಯ ಸುಳಿವೇ ಸಿಗದು. ಮೊದಲ ದಿನದ ಕಾಲುನಡಿಗೆಯಾದ್ದರಿಂದ ಸ್ವಲ್ಪ ಆಯಾಸವಾದಂತಾಯಿತು. ಹತ್ತಿರವಿದ್ದ ಬಂಡೆಯ ಮೇಲೆ ಕುಳಿತೆವು. ಆ ಹೊತ್ತಿಗೆ ಹಿಂದೆ ನಮ್ಮನ್ನು ಅನುಸರಿಸಿ ಬರುತ್ತಿದ್ದ ಕೂಲಿಯವರೂ ಬಂದು ಸೇರಿದರು. ಸುತ್ತ ಒಮ್ಮೆ ಕಣ್ಣಾಡಿಸಿದೆವು. ಹೆಬ್ಬಂಡೆಗಳನ್ನು ಸೀಳಿಹಾದಂತೆ ಹಸಿರುಮಿಶ್ರಿತ ಕಪ್ಪು ಬಣ್ಣದ ಶಿಲೆಯ ಜಾಡು ಕಾಣಿಸಿತು. ಮುಟ್ಟಿದರೆ ನುಣುಪು, ಸುತ್ತಿಗೆಯಲ್ಲಿ ಒಂದು ಏಟು ಬೀಳುತ್ತಲೆ ಮುದ್ದೆಯಂತೆ ನವಿರಾಯಿತು. ಮೂರ್ತಿ ಜೇಬಿನಲ್ಲಿದ್ದ ಚಾಕು ತೆಗೆದು ಕಲ್ಲಿನ ಮೇಲೆ ಗೀರಿದ, ಚಾಕುವಿನ ಗೀರು ಕಲ್ಲಿನ ಮೇಲೆ ಬಿತ್ತು. ಮೂರ್ತಿ ಥಟ್ಟನೆ 'ಇದು ಸ್ಟಿಯಟೈಟ್' ಎಂದ. ದೇವಯ್ಯ ಏನೂ ಅರ್ಥವಾಗದವನಂತೆ ನನ್ನ ಕಡೆ ನೋಡಿದ. 'ನೋಡಯ್ಯ ಬೇಲೂರು ಹೆಸರು ಕೇಳಿದ್ದೀಯಾ' ಎಂದೆ. ಗೋಣು ಅಲ್ಲಾಡಿಸಿದ, 'ಇಂಥ ಕಲ್ಲಿನಲ್ಲೇ ಬೇಲೂರು ದೇವಸ್ಥಾನದ ವಿಗ್ರಹಗಳನ್ನು ಕೆತ್ತಿರು

ಪ್ರದು' ಎಂದು ಮುಂದುವರಿಸಿದೆ. ಅಲ್ಲ ಸ್ವಾಮಿ, ಇದು ಮರಗಿ ಕಲ್ಲು ಅಲ್ವಾ, ಇದರಲ್ಲಿ ನಾವು ಉಪ್ಪಿನ ಕಾಯಿ ಹಾಕೋದಕ್ಕೆ, ಸಾರು ಮಾಡುವುದಕ್ಕೆ ಜಾಡಿ ಮಾಡ್ತೀವೆ ಎಂದ, ನಾನು ಹೌದೆಂದು ಸಮ್ಮತಿಸಿದೆ. ಈ ಕಲ್ಲಿನ ಜಾಡನ್ನೇ ಹಿಡಿದು ಮತ್ತೆ ಬೆಟ್ಟದ ಮೇಲೇರಿದೆವು. ಕಲ್ಲು, ಪೊದೆಯಲ್ಲಿ ಮರೆಯಾಗಿ ಮತ್ತೆ ನೆತ್ತಿಯ ಕಡೆ ಹಾದಿತ್ತು. ಅಲ್ಲಲ್ಲೆ ಶಿಥಿಲವಾಗಿ ಪುಡಿಪುಡಿಯಾಗಿತ್ತು. ಈ ಪುಡಿಯನ್ನು ಗುಡ್ಡೆಮಾಡಿ ನಾವು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಅವುಗಳಿಗೆ ಪ್ರತ್ಯೇಕವಾದ ಕ್ರಮಸಂಖ್ಯೆ ನೀಡುತ್ತಾ ಹೋದೆವು. ಈ ಪುಡಿ ಕೆಲಸಕ್ಕೆ ಬರೋದಿಲ್ಲ, ಗಟ್ಟಿಕಲ್ಲು ಕೆತ್ತನೆಗೆ ಬಂದೀತು ಎಂದ ದೇವಯ್ಯ. ನನಗೆ ಕಲ್ಲಿಗಿಂತ ಪುಡಿನೇ ಸದ್ಯದಲ್ಲಿ ಮುಖ್ಯ ದೇವಯ್ಯ, ಯಾಕೆ ಗೊತ್ತಾ ಇದರಲ್ಲಿ ನಿಕ್ಕಲ್ ಬೆರೆತಿರೋ ಸಾಧ್ಯತೆ ಇರುತ್ತೆ, ಪ್ರಯೋಗಾಲಯಕ್ಕೆ ಕಳಿಸಿ ಅಲ್ಲಿ ಪರೀಕ್ಷೆ ಮಾಡಬೇಕು ಎಂದೆ. ನಿಕ್ಕಲ್ ಬಗ್ಗೆ ದೇವಯ್ಯ ಮತ್ತೆ ತನ್ನ ಶಂಕೆಯನ್ನು ವ್ಯಕ್ತಪಡಿಸಿದ, 'ನೀನು ಹಿಂದೆ ಬರುತ್ತಿದ್ದ ಇಪ್ಪತ್ತು ಪೈಸೆ ಹಳದಿ ನಾಣ್ಯ ನೋಡಿಲ್ವಾ, ಅದು ನಿಕ್ಕಲ್ ಲೋಹದ್ದೇ' ಎಂದು ಮೂರ್ತಿ ಬಿಡಿಸಿ ಹೇಳಿದ ಮೇಲೆ ದೇವಯ್ಯನಿಗೆ ಏನೋ ಹೊಳೆದಂತಾಗಿ ತಲೆಯನ್ನು ಅಲ್ಲಾಡಿಸಿ ನೆನಪಿಗೆ ತಂದುಕೊಂಡ. ನೋಡು ದೇವಯ್ಯ, 'ಈ ಕರಿಕಲ್ಲು ಹೋಗುತ್ತಲ್ಲ ಅದೇ ಜಾಡು ಹಿಡಿದು ಮುಂದೆ ಹೋಗು, ಮುಳ್ಳನ್ನೆಲ್ಲ ಕತ್ತೀಲಿ ಸವರು' ಎಂದೆ. ಮುಳ್ಳಿರಲಿ ಬಿಡಲಿ ದೇವಯ್ಯ ಕತ್ತಿಯನ್ನು ಆಡಿಸುತ್ತಾ ಮುಂದೆ ಹೋದ. ಅಲ್ಲಿದ್ದ ಹಸಿ ಸಗಣಿಯನ್ನು ನೋಡಿ ದೇವಯ್ಯ 'ಇದು ಕಾಡು ಕೋಣದ್ದು' ಎಂದ. ನನಗೆ ಕಿವಿ ಚುರುಕಾಯಿತು, ನಕ್ಷೆಯಲ್ಲಿ ನಾವಿದ್ದ ಜಾಗವನ್ನು ಗುರುತಿಸಿದೆವು. ಕಂಪಾಸಿನಿಂದ ಕಲ್ಲುಸಾಗಿದ್ದ ಜಾಡನ್ನು ಅಳೆದು ಯಥಾವತ್ತಾಗಿ ನಕ್ಷೆಯ ಮೇಲೆ ನಕಲು ಮಾಡಿದೆವು. ನಾನು ದಿನಚರಿಯ ಪುಸ್ತಕದಲ್ಲಿ ವಿವರಗಳನ್ನೆಲ್ಲ ಬರೆದುಕೊಂಡೆ. ಆ ಹೊತ್ತಿಗೆ ಬಾಯಾರಿಕೆ ಅತಿಯಾಗಿ ನೀರಿನ ಬಾಟಲಿಗೆ ಬಾಯಿ ಒಡ್ಡಿದೆವು. ದಣಿವಾರಿಸಿಕೊಂಡು ಹೊರಡಲು ಸಿದ್ಧರಾದೆವು. ಮೂರ್ತಿ ನಾಲ್ಕು ಹೆಜ್ಜೆ ಮುಂದೆ ಹೋಗಿ ಪೊದೆಯ ಬಳಿ ಬೆರಗುಗಣ್ಣಿನಿಂದ ಏನೋ ನೋಡುತ್ತ ನಿಂತ. ನನ್ನನ್ನು ಹತ್ತಿರ ಬರಲು ಸಂಜ್ಞೆ ಮಾಡಿ ತಿಳಿಸಿದ. ಹತ್ತಿರ ಹೋದೆ. ಅಲ್ಲಿ ಮುರಿದ ಮರಗಿ, ಅರ್ಧಮರ್ಧ ಕೆತ್ತಿದ ಬೃಂದಾವನ, ಯಾವುದೋ ವಿಗ್ರಹದ ತಲೆ ಇಲ್ಲದ ಶರೀರ ಇವುಗಳನ್ನು ನೋಡಿ 'ಶಿಲಾಯುಗದ' ಖುಳಿಕೆಗಳೇನೋ ಅನ್ನಿಸಿತು. 'ನೋಡು ದೇವಯ್ಯ ಈ ಕಲ್ಲಿನಿಂದ ಎಂತೆಂಥ ವಸ್ತುಗಳನ್ನು ಕೆತ್ತಬಹುದು' ಎಂದೆ.


ನಿಧಾನವಾಗಿ ಇಳಿದು ಬೆಟ್ಟದ ಬುಡಕ್ಕೆ ಬಂದಾಗ ಆ ಕಲ್ಲಿನಲ್ಲಿ ವಿಗ್ರಹಗಳನ್ನು ಕೆತ್ತಿದ್ದ "ಆಚಾರ್ರು" ಎದುರಾದರು. ಮತ್ತೊಂದು ಬೋಳುಗುಡ್ಡ ತೋರಿಸಿ 'ಅಕೋ ಆ ಮೂರನೇ ಗುಡ್ಡ ಕಾಣುತ್ತಲ್ಲ ಅದೇ ಚಿನ್ನದ ಗುಡ್ಡ' ಎಂದು ಹೇಳಿ ನಿಮಗೆ ಹತ್ತೋದಕ್ಕೆ ಆಗೋದಿಲ್ಲ ಬರಿ ಪೊದೆ, ಮುಳ್ಳು, ಜೊತೆಗೆ ಮಲೆಮುರುಗ ಇರುತ್ತೆ ಹೊಡೆದರೆ ನಾಲ್ಕು ದಿನ ಜ್ವರ ಬರುತ್ತೆ' ಎಂದು ನಮ್ಮನ್ನು ದಿಗಿಲುಗೊಳಿಸಿದರು. ಮೂರ್ತಿ ನನ್ನ ಮುಖ ನೋಡಿದ. ನಾನು ದೇವಯ್ಯನ ಮುಖ ನೋಡಿದೆ. ಮಲೆಮುರಗ ಅಂದರೆ ಹುಲಿನೋ ಸಿಂಹವೋ ಎಂದ ಮೂರ್ತಿ. ಇಲ್ಲಪ್ಪಾ....ಅದೊಂದು ತರ ತುರುಚೆಗಿಡ ಎಲೇಲಿ ಸಣ್ಣಸಣ್ಣ ಮುಳ್ಳಿರುತ್ತೆ, ತಗಲಿದರೆ ಕೆರೆತ, ಶೀಟಿ ಶುರುವಾಗುತ್ತೆ ಎಂದ ದೇವಯ್ಯ. 'ಸರಿ ಆಚಾರ್ರೆ ನಮ್ಮ ವಿಚಾರ ಏನೂ ಯೋಚನೆ ಮಾಡಬೇಡಿ. ನಾವು ಹಿಮಾಲಯ ಪರ್ವತಾನ ಹತ್ತಿ ಬಂದಿದ್ದೀವಿ' ಎಂದು ಮೂರ್ತಿ ಹೇಳಿ ಅವರನ್ನು ಬೀಳ್ಕೊಟ್ಟ. ಚಿನ್ನದ ಗುಡ್ಡದ ಬುಡಕ್ಕೆ ಬರುತ್ತಲೇ ಅದರ ನೆತ್ತಿ ಕಾಣದಾಯಿತು. ಬರಿ ಮರಬಳ್ಳಿ, ಕಾಲುದಾರಿಯೂ ಇರಲಿಲ್ಲ. ಒಂದು ಅಂದಾಜು ಮೇಲೆ ಬೆಟ್ಟ ಹತ್ತಲು ಪ್ರಾರಂಭಿಸಿದೆವು. ನೆತ್ತಿಯ ಮೇಲೆ ಹೋದಾಗ ನಾವಿರುವ ಬೆಟ್ಟವನ್ನು ನಕ್ಷೆಯಲ್ಲಿ ಗುರುತಿಸಲು ಸುಲಭವೆಂದು ಯೋಚಿಸಿದೆವು. ಗ್ರಾನೈಟ್ ಬಂಡೆಗಳು ಬರುಬರುತ್ತಾ ಮರೆಯಾಗಿ ಅನಂತರ ಕಲ್ಲಿನ ಬಣ್ಣ ಬದಲಾಯಿಸಿತು. ಮೆತ್ತನೆಯ ಪದರುಪದರುಗಳ ಅಬ್ರಕವುಳ್ಳ ಶಿಲೆಗಳು ಕಾಣಲು ಪ್ರಾರಂಭಿಸಿದವು. ಬಿಳಿ ಅಭ್ರಕವಿದ್ದುದರಿಂದ ಕಲ್ಲು ಮಿರಿಮಿರಿ ಮಿನುಗುತ್ತಿತ್ತು. ಅಲ್ಲಿಂದ ಮುಂದಕ್ಕೆ ಬೆಣಚುಕಲ್ಲಿನ ಬಂಡೆಗಳು ಪ್ರಾರಂಭವಾದವು. ಮರಗಳಲ್ಲಿ ಇಳಿಬಿದ್ದಿದ್ದ ಬಿಳಲುಗಳನ್ನು ಜಗ್ಗಿ ಈ ಬಂಡೆಗಳನ್ನು ಹತ್ತಿದೆವು. ಸಾಮಾನ್ಯವಾಗಿ ಹೊಲಗದ್ದೆಗಳಲ್ಲಿ ಅಲ್ಲಲ್ಲೇ ಪುಡಿಯಾಗಿ ಬೆಳ್ಳಗೆ ಹೊಳೆದು ಕೆಲವೊಮ್ಮೆ ಮಾಸಲು ಬಣ್ಣ ತಳೆದ ಬೆಣಚುಕಲ್ಲಿನಂತೆ ಇದಿರಲಿಲ್ಲ. ಬೆಟ್ಟದ ನೆತ್ತಿಯವರೆಗೂ ಇದು ಹಾದಿತ್ತು. ಕಪ್ಪು ಮಿಶ್ರಿತ ಕೆಂಬಣ್ಣದ ಈ ಕಲ್ಲು ಬಲುಗಟ್ಟಿ. ಇದರ ಮೈಮೇಲೆ ಕುಳಿಗಳು. ಗಂಧಕದ ಖನಿಜಗಳು ಗಂಧಕದ ಅಂಶವನ್ನು ಕಳೆದುಕೊಂಡಾಗ ಇಂಥ ಕುಳಿಗಳಾಗುವುದನ್ನು ಸಾಮಾನ್ಯವಾಗಿ ಅನೇಕ ಶಿಲೆಗಳಲ್ಲಿ ಕಾಣಬಹುದು. ಚಿನ್ನಕ್ಕೂ ಗಂಧಕದ ಖನಿಜಕ್ಕೂ ಸ್ವಭಾವತಃ ನಂಟು. ಸುತ್ತಿಗೆಯಿಂದ ಹೊಡೆದಾಗ ನಮ್ಮ ಊಹೆ ನಿಜವಾಯಿತು. ನಮ್ಮ ಕಣ್ಣುಗಳು ಚುರುಕಾದವು, ಪಕ್ಕದಲ್ಲೇ ಕಲ್ಲಿನ ಜಾಡಿನ ಮಧ್ಯ ದೊಡ್ಡ ಕಾಲುವೆಯ ತರಹ ಹಳ್ಳ. ಇದರ ಸುತ್ತ ಮರಗಿಡಗಳು

ಸೊಂಪಾಗಿ ಬೆಳೆದಿದ್ದವು. ಮಣ್ಣು ಕೂಡ ಆಳದಿಂದ ದೂಗೆದು ತೆಗೆದಂತೆ ಕಂಡುಬಂತು. ಚಿನ್ನಕ್ಕಾಗಿ ಹಿಂದೆ ಗಣಿ ಮಾಡಿದ ಜಾಗ ಇದೆಂದು ಸ್ಪಷ್ಟವಾಯಿತು. ನಮ್ಮ ಮಾತನ್ನು ಆಲಿಸುತ್ತಿದ್ದ ದೇವಯ್ಯನಿಗೆ ಹಿಂದೂರಿತಷ್ಟೇ ಉತ್ಸಾಹ, ಕುತೂಹಲ. ನಮ್ಮ ಮಾತಿಗೂ ಕಾಯದೆ ದೊಡ್ಡ ಸುತ್ತಿಗೆಯಿಂದ ಐದಾರು ಚೂರುಗಳನ್ನು ಹೊಡೆದು ತಂದ. ಬಿಳಿ ಅಭ್ರಕವನ್ನು ಚಿನ್ನವೆಂದೇ ಭಾವಿಸಿ ನಮ್ಮ ಮುಂದೆ ಹಿಡಿದ. ಇದು ಅಭ್ರಕ ದೇವಯ್ಯ ಚಿನ್ನದ ರೇಖು ಅನೇಕ ವೇಳೆ ಕಣ್ಣಿಗೆ ಕಾಣಿಸುವುದೇ ಇಲ್ಲ. ನೋಡು ಒಂದು ಲಾರಿ ಕಲ್ಲನ್ನು ಪುಡಿಮಾಡಿ ಅರೆದು ಜಾಲಿಸಿದರೆ ಅದರಿಂದ ಮೂರು ಗ್ರಾಂ ಚಿನ್ನದ ರೇಖು ದೊರೆತರೂ ಇವತ್ತಿನ ಬೆಲೆಯಲ್ಲಿ ಚಿನ್ನವನ್ನು ತೆಗೆದು ಲಾಭಗಳಿಸಬಹುದು ಎಂದ ಮೂರ್ತಿ. ದೇವಯ್ಯ ಬೆಪ್ಪಾಗಿ ನಿಂತ. ನಾವು ಶಿಲೆಗಳ ಮಾದರಿಗಳನ್ನು ಕೊಟ್ಟು ಅವುಗಳನ್ನು ಚೀಲದಲ್ಲಿ ತುಂಬಲು ವೆಂಕಟೇಶನಿಗೆ ಹೇಳಿದೆವು. 'ಎಷ್ಟೋ ವೇಳೆ ಹಳೆಯ ಗಣಿಗಳ ಆಧಾರದ ಮೇಲೆ ಆಸುಪಾಸಿನಲ್ಲಿ ಹೊಸ ಗಣಿಗಳನ್ನು ತೋಡುವುದು ಸಾಧ್ಯ. ಇಲ್ಲವೇ ಹಳೆ ಗಣಿಗಳನ್ನು ಮತ್ತೆ ತೆರೆಸಿದಾಗ ಇಂದಿನ ತಂತ್ರ ವಿಧಾನದಲ್ಲಿ ಆಳಕ್ಕೆ ಹೋಗಬಹುದು. ಕಡಿಮೆ ಅಂಶವಿರುವ ಲೋಹವನ್ನು ಲಾಭದಾಯಕವಾಗೇ ಪಡೆಯಬಹುದು.' ಮೂರ್ತಿ ಈ ಮಾತನ್ನು ಹೇಳುವ ಹೊತ್ತಿಗೆ ವೆಂಕಟೇಶ ನನ್ನನ್ನು ದೂರತಳ್ಳಿ ತಾನು ಓಡಿದ, ದೇವಯ್ಯ ಮೂರ್ತಿಯನ್ನು ಬಿಗಿಯಾಗಿ ಹಿಡಿದು ಪಕ್ಕಕ್ಕೆ ಸರಿಸಿದ, ನಾವು ಕಣಿವೆ ಕಡೆ ಇದ್ದುದರಿಂದ ಕಾಡುಕೋಣಗಳು ಪೊದೆಗಳನ್ನು ಮುರಿದು ನುಗ್ಗಿ ನಿಮಿಷಾರ್ಧದಲ್ಲಿ ಕಣ್ಮರೆಯಾದವು, ಗುಂಪಿನಲ್ಲಿ ಅವು ಎಷ್ಟಿದ್ದುವೆಂದು ಎಣಿಸಲೂ ಆಗಲಿಲ್ಲ.

ಬೆಟ್ಟ ಇಳಿದು ತಲ್ಲೆ ಮನೆಯ ಹತ್ತಿರ ಬಂದಾಗ ಮಧ್ಯಾಹ್ನ ಎರಡು ಗಂಟೆ, ಎದುರಿಗೆ ಬಂದ ಭಟ್ಟರು ಮನೆಗೆ ಆಹ್ವಾನಿಸಿದರು. "ಗಂಗೋದಕ"ದ ಜೊತೆಗೆ ಮಲೆನಾಡಿನ ಬಾಳೇ ಹಣ್ಣನ್ನು ನೀಡಿದರು. ಒಳಗೆ ಹೋಗಿ ವಾಪಸು ಚೀಲದಿಂದ ಪೊಟ್ಟಣ ತೆಗೆದು 'ನೀವು ಚಿನ್ನ ಹುಡುಕಲು ಬಂದಿದ್ದೀರೆಂದು ಕೇಳಿದೆ; ಇದರ ಬೆಲೆ ಎಷ್ಟಾಗುತ್ತೆ ತಿಳಿಸಿ ಎಂದು ಪೊಟ್ಟಣ ಬಿಚ್ಚಿದರು. ಪೊಟ್ಟಣದಲ್ಲಿ ಸಣ್ಣಸಣ್ಣ ಚಚ್ಚೌಕದ ಹತ್ತು ಹಳದಿ ಹರಳುಗಳಿದ್ದವು. ಮೂರ್ತಿ ಬಾಯಿ ಹಾಕಿ 'ಭಟ್ಟರೇ ನಿಮಗೆ ಇದು ಎಲ್ಲಿ ಸಿಕ್ಕಿತು ಎಂದ, ಭಟ್ಟರು' ಹೀಗೆ.... ಯಾರೋ ತಂದು ಕೊಟ್ಟದ್ದು' ಎಂದು ಮಾತು ಬದಲಾಯಿಸಿದರು. ನೋಡಿ ಭಟ್ಟರೆ ಇದು ಚಿನ್ನ ಅಲ್ಲ. ಗಂಧಕ ಕಬ್ಬಿಣ ಮಿಶ್ರಣವಾಗಿರುವ

ಪೈರೈಟ್ ಖನಿಜ, ನೋಡೋದಕ್ಕೆ ಚಿನ್ನದ ತರಹ ಇದೆ, ಇದನ್ನು ಏನಂತಾರೆ ಗೊತ್ತ 'ದಡ್ಡರ ಚಿನ್ನ' ಅಂತ ಎಂದ. ಭಟ್ಟರು ದೇಶಾವರಿ ನಗೆ ಬೀರಿ ಪೊಟ್ಟಣ ವನ್ನು ಮತ್ತೆ ಕೈ ಚೀಲದಲ್ಲಿ ಸೇರಿಸಿದರು. ಬಿಡುವಿಲ್ಲದ ಇಂಥ ಸರ್ವೀಕ್ಷೆಗಳ ಅವಧಿಯಲ್ಲಿ ಇಂಥ ಅನುಭವ ನೂರಾರು.

ಟಿ. ಆರ್. ಅನಂತರಾಮು



ಕರುಣೆ ಉಳ್ಳವರು ಧನ್ಯರು, ಏಕೆಂದರೆ ಅವರಿಗೆ ದೇವರ ಕರುಣೆ ಲಭಿಸು ತ್ತದೆ.

—ಬೈಬಲ್

ಏನನ್ನೂ ನಿರೀಕ್ಷಿಸದವನೇ ಸುಖಿ. ಏಕೆಂದರೆ ಅವನಿಗೆ ನಿರಾಶೆ ಎಂಬುದೇ ಇಲ್ಲ.

—ಪೋಪ

ಜಗಳವಾಡದೇ ಕೆಲಸ ಮಾಡೋಣ. ಜೀವನ ಸಹ್ಯವಾಗುವಂತೆ ಮಾಡಲು ಇರುವುದು ಇದೊಂದೇ ದಾರಿ.

—ವಾಲ್ಟೇರ

ರಕ್ತಪಾತವಿಲ್ಲ ಎಂಬುದೊಂದನ್ನು ಬಿಟ್ಟರೆ ಚುನಾವಣೆ ಯುದ್ಧವಷ್ಟೇ ಅನರ್ಥಕಾರಿ.

—ಬರ್ನಾರ್ಡ್ ಷಾ

ಥೇಮ್ಸ್ ನದಿಯನ್ನು ಕುರಿತು

• ಉತ್ಸಾಹದಾಯಕವಾದ ಒಂದು ವಿಷಯವೆಂದರೆ ಈ ನಗರದಲ್ಲಿ ಕಳೆದ ಭಯಂಕರ ಚಳಿಗಾಲದಲ್ಲಿ ನೆರೆಯ ಹಾವಳಿ ಇಲ್ಲದಿದ್ದುದು. ಈ ನಗರದ ನದೀ ತೀರದ ಸುಮಾರು ನಲವತ್ತೈದು ಚದರ ಮೈಲಿ ವಿಸ್ತಾರದ ಪ್ರದೇಶ ಪ್ರವಾಹದ ದವಡೆಯಲ್ಲಿದೆ. ಇದರ ಬಹಳಷ್ಟು ಭಾಗ ಡಿಸೆಂಬರ್ ೧೯೮೨ರ ಒಳಗೆ ಜಲತಲವನ್ನು ಸೇರುವ ಸಾಧ್ಯತೆ ಐವತ್ತರಲ್ಲೊಂದು. ಆ ಕಾಲಬರುವ ಮೊದಲೇ ನಗರಕ್ಕೆ ಯಾವ ಅಪಾಯವೂ ತಟ್ಟದೇ ಇದ್ದ ಪಕ್ಷದಲ್ಲಿ ಆ ಸಮಸ್ಯೆ ಮುಂದಿನ ಒಂದು ಶತಮಾನದವರೆಗೂ ತಲೆಯೆತ್ತದಂತೆ ತೊಡೆದುಹಾಕುವ ನಂಬಿಕೆಯನ್ನು ಗ್ರೇಟರ್ ಲಂಡನ್‌ಕೌನ್ಸಿಲ್ (ಜಿ.ಎಲ್.ಸಿ) ಹೊಂದಿದೆ.

ಈಚೆಗೆ ಒಂದು ದಿನ ಬೆಳಗ್ಗೆ ಒಂದು ದೋಣಿಯ ತುಂಬ ಜನರೊಡನೆ ನಾನು ನದಿಯ ಮೇಲೆ ಕೆಳಮೊಗನಾಗಿ ಹೋದೆ. ನಮ್ಮ ಪೈಕಿ ಜಿ.ಎಲ್.ಸಿ.ಯ ನಾಯಕ ಹೊರೇಸ್ ಕಟ್ಲರ್ ಮತ್ತು ವಿರೋಧ ಪಕ್ಷದ ನಾಯಕಿ ಮಾರ್ಗರೆಟ್ ಥ್ಯಾಚರ್ ಸಹ ಇದ್ದರು. ನಮ್ಮ ಉದ್ದೇಶ ವುಲ್ ವಿಚ್ ಎಂಬಲ್ಲಿ ಥೇಮ್ಸ್ ನದಿಗೆ ಅಡ್ಡಲಾಗಿ ಕಟ್ಟಲಾಗುತ್ತಿರುವ ಪ್ರಪಂಚದ ಅತ್ಯಂತ ದೊಡ್ಡ ಚಲಿಸುವ ತಡೆಯ ಕೆಲಸ ಹೇಗೆ ಸಾಗುತ್ತಿದೆ ಎಂಬುದನ್ನು ನೋಡುವುದು. ಅಂದು ಬೆಳಗ್ಗೆ ಬೂದು ಬಣ್ಣದ ಮಂಜು ಸುತ್ತಲೂ ಕವಿದಿತ್ತು. ನಾವು ಏರಿದ್ದುದು ಕ್ವೀನ್ ಎಲಿಜಬೆತ್ ಎಂಬ ಹೆಸರಿನ ನದೀದೋಣಿ. ವೆಸ್ಟ್‌ಮಿನಿಸ್ಟರ್ ಸೇತುವೆಯ ಬಳಿಯ ದೋಣಿ ಕಟ್ಟೆಯಿಂದ ಹೊರಟೆವು. ಈ ಸೇತುವೆಯನ್ನು ಪಾರ್ಲಿಮೆಂಟ್ ಭವನಗಳು ಮತ್ತು ದಕ್ಷಿಣ ತೀರದಲ್ಲಿರುವ ಕೌಂಟಿ ಹಾಲುಗಳ ನಡುವೆ ಹರಿಯುವ ನದಿಯ ಮೇಲುಗಡೆ ಕಟ್ಟಲಾಗಿದೆ. ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷದ ಮುಂದಿನ ಸಾಲಿನಲ್ಲಿ ಥ್ಯಾಚರ್ ಅವರು ತಮ್ಮ ಛಾಯಾ ಸಂಪುಟ ದೊಡನೆ ಕುಳಿತರೆ ಕೌಂಟಿ ಹಾಲಿನಲ್ಲಿ ಕಟ್ಲರ್ ಅವರು ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವರು. ನಾವು ನದಿಯಲ್ಲಿ ಕೆಳಮೊಗನಾಗಿ ಕ್ಷಿಪ್ರವಾಗಿ ಇಳಿಯುತ್ತಿದ್ದ ಇಳಿತದ ಅಲೆಯೊಡನೆ ಸಾಗಿದೆವು. ವಾಟರ್‌ಲೂ, ಬ್ಲ್ಯಾಕ್ ಫ್ರೈಯರ್ಸ್, ಸೌತ್‌ವಾರ್ಕ್, ಲಂಡನ್ ಮತ್ತು ಟವರ್ ಸೇತುವೆಗಳ ಕೆಳಗಡೆ ನದಿಯ ಅಂಕು

'ನ್ಯೂ ಯಾರ್ಕರ್' ಪತ್ರಿಕೆಯ ಸಂಪಾದಕರಿಗೆ ಲಂಡನ್ನಿನಲ್ಲಿ ವಾಸವಿರುವ ಅವರೊಬ್ಬ ಸ್ನೇಹಿತರು ಬರೆದ ಪತ್ರದ ಸಾರಾಂಶ ಆ ಪತ್ರಿಕೆಯ ೨೬-೩-೧೯೭೯ನೇ ದಿನಾಂಕ ಆ ಪತ್ರಿಕೆಯಲ್ಲಿ, ಪ್ರಕಟವಾಗಿತ್ತು. ಅದರ ಅನುವಾದ ಇದು.

ಡೊಂಕಾದ ಹಾವಿನ ಮೇಲೆ ತೇಲುತ್ತ ಹೋದಂತೆ ಸೋಮರ್ ಸೆಟ್ ಹೌಸ್, ಟವರ್ ಆಫ್ ಲಂಡನ್ ಮತ್ತು ಗ್ರೀನ್ ವಿಚ್‌ನಲ್ಲಿಯ ರಾಯಲ್ ನೇವಲ್ ಕಾಲೇಜ್‌ಗಳನ್ನು ದಾಟಿ ಸೈಂಟ್ ಪಾಲ್ಸ್ ಕ್ಯಥಡ್ರಲ್, ಹಳೆಯ ಬಂದರು ಕಟ್ಟೆಗಳು, ಸಾಮಾನುಗಡಂಗುಗಳು, ಎರಡನೇ ಪ್ರಪಂಚ ಯುದ್ಧದಲ್ಲಿ ಬಳಸಿದ ಹೆಚ್.ಎಮ್.ಎಸ್. ಬೆಲ್‌ಫಾಸ್ಟ್ ಮುಂತಾದ ಹಡಗುಗಳು, ಹತ್ತೊಂಬತ್ತನೇ ಶತಮಾನದ ವೇಗದ ದೋಣಿಕಟ್ಟಿ ಸಾರ್ಕ್ ಇವೇ ಮೊದಲಾದವನ್ನು ಕಾಣುತ್ತಿದ್ದೆವು. ಥೇಮ್ಸ್ ನದಿ ತನ್ನ ನಿತ್ಯದ ಅಪಾಯ ರಹಿತ ಚಿತ್ರಮಯವಾದ ಹೊಲಸಿನಿಂದ ಕೂಡಿತ್ತು. ಆದರೆ ನಸುನರೆತ ವ್ಯಾನ್‌ಡೈಕ್ ದಾಡಿ ಮತ್ತು ಕಪ್ಪು ಬೋ-ಟೈ ಧರಿಸಿದ್ದ ಕಟ್ಲರ್ ಅವರು, "ಈ ಶಾಂತ ಮುದ್ರೆಯ ನದಿಗೆ ನಗರದ ಮೇಲೆ ಅಪಾಯಕರವಾದ ನೆರೆಯನ್ನು ಹರಿಬಿಡುವ ಶಕ್ತಿ ಇದೆ." ಎಂದು ಒತ್ತಿ ಹೇಳಿದರು. ಅವರು ಹೇಳಿದರು—

"ಈ ದೇಶ ಎಂದೆಂದೂ ನೋಡಿರದ ಅತ್ಯಂತ ಹೆಚ್ಚಿನ ಪ್ರಕೃತಿ ಪ್ರಕೋಪಕ್ಕೆ ಇದು ಕಾರಣವಾಗಬಹುದು. ನಮ್ಮ ರಾಜಧಾನಿಗೆ ೧೬೬೬ ರಲ್ಲಿ ಉಂಟಾದ ಲಂಡನ್ನಿನ ಮಹಾಜ್ವಾಲನಕ್ಕೆ (ಗ್ರೇಟ್ ಲಂಡನ್ ಫೈರ್) ಸಮನಾಗಬಹುದು. ಈ ನಗರದ ತಗ್ಗು ಭಾಗಗಳಲ್ಲಿರುವ ಸುಮಾರು ಒಂದು ಮಿಲಿಯನ್ ಜನರಿಗೆ ಅಪಾಯ. ನೆಲ ಜಲಾವೃತವಾಗಿ ಸುಮಾರು ಆರು ತಿಂಗಳವರೆಗೆ ಪಾರ್ಶ್ವ ವಾಯು ಬಡಿದಂತಾಗಬಹುದು. ಸೇತುವೆಗಳೂ ಸುರಂಗ ಮಾರ್ಗಗಳೂ ಕೆಲಸಕ್ಕೆ ಬಾರದಾಗುವುವು. ಅನೇಕ ಟೆಲಿಫೋನ್ ಎಕ್ಸ್‌ಛೇಂಜ್‌ಗಳೂ ಅಂತೆಯೇ ಆಸ್ಪತ್ರೆಗಳೂ ಮಲಿನ ಜಲ ವಿಸರ್ಜನಾ ವ್ಯವಸ್ಥೆಗಳೂ ಅಗ್ನಿಶಾಮಕ ಮತ್ತು ಆಂಬ್ಯುಲೆನ್ಸ್ ಸ್ಟೇಷನ್ನುಗಳೂ ನೀರಡಿಗಾಗುವುವು. ಪಾರ್ಲಿಮೆಂಟ್ ಭವನಗಳ, ಹೊಸ ಸ್ಕಾಟ್‌ಲ್ಯಾಂಡ್ ಯಾರ್ಡ್ ಕಟ್ಟಡದ ಸುತ್ತ ಒಂದು ದಿನ ಪೂರ್ತಿ ಮೂರು ಅಡಿ ಆಳದ ನೀರು ನಿಲ್ಲುವುದು. ಅನೇಕ ಸ್ಥಳಗಳಲ್ಲಿ ಯಂತ್ರಗಳೂ ದಾಖಲೆಗಳೂ ನಾಶವಾಗುವುವು ಅಥವಾ ಕೆಟ್ಟುಹೋಗುವುವು. ಇಂತಹ ಅಗಾಧ ಪ್ರವಾಹದಿಂದಾಗುವ ನೇರವಾದ ನಷ್ಟ ಸುಮಾರು ಮೂರು ಬಿಲಿಯನ್ (ಮೂರು ಲಕ್ಷ ಕೋಟಿ) ಪೌಂಡುಗಳಾಗಬಹುದು. ಕಾರ್ಯರೂಪದ ನಷ್ಟ ಲಂಡನ್ ಪೂರ್ವಸ್ಥಿತಿಗೆ ಬರಬೇಕಾದರೆ ತಿಂಗಳುಗಟ್ಲೆ ದುಡಿಯಬೇಕಾಗಬಹುದು. ನಾನು ಯಾರನ್ನೂ ಗಾಬರಿ ಪಡಿಸುವವನಲ್ಲ. ನಮ್ಮ ನದೀಶಿಲ್ಪಿಗಳ ಪ್ರಕಾರ 'ಪ್ರವಾಹ ಉಂಟಾದರೆ' ಎಂದಲ್ಲ. 'ಉಂಟಾದಾಗ' ಎಂದು (ಎಂದರೆ, ಒಂದಲ್ಲ, ಒಂದು ದಿನ ಅದು ಉಂಟಾಗಿಯೇ ಆಗುವುದು)."

ಮೇಲಿನ ಸಂಚಿಕೆಗೆ ಕಾರಣವನ್ನು ಜಿ.ಎಲ್.ಸಿ. ಯಲ್ಲಿ ಮುಖ್ಯ ನದೀಶಿಲ್ಪಿಯಾಗಿರುವ ಡೀ. ಹಾರ್ನರ್ ಎಂಬ ಸುಶಿಕ್ಷಿತ ಪ್ರಯಾಣಿಕರು ಹೇಳಿದರು. ಅರವತ್ತೆರಡು ವಯಸ್ಸಿನ ಗಟ್ಟಿಮುಟ್ಟಾದ ಅವರಿಗೆ ನರೆತ ಮೀಸೆ.

"ಬ್ರಿಟನ್ ಹಿಮಯುಗದ ಫಲವನ್ನು ಇನ್ನೂ ಉಣ್ಣುತ್ತಿದೆ. ಇದರ ಫಲವಾಗಿ ನಮ್ಮ ದ್ವೀಪದ ಈಶಾನ್ಯ ಭಾಗ ಮೇಲೇಳುತ್ತಿದೆ. ಆಗ್ನೇಯ ಭಾಗ ಕುಸಿಯುತ್ತಿದೆ–ಸುಮಾರು ಒಂದು ಶತಮಾನಕ್ಕೆ ಒಂದು ಅಡಿಯಷ್ಟು. ಇದು ಲಂಡನ್ನಿಗೆ ಅನತಿ ದೂರದಲ್ಲಿರುವ ಸೌತ್-ಎಂಡ್-ಆನ್-ಸೀ ಮತ್ತು ಎಸ್ಸೆಕ್ಸ್‌ನಲ್ಲಿ ತೆಗೆದುಕೊಳ್ಳಲಾದ ಅಳತೆಗಳಂತೆ. ಲಂಡನ್ ಪಟ್ಟಣದ ಬಹುಭಾಗ ತಳದಲ್ಲಿರುವ ಜೇಡಿಮಣ್ಣಿನ ಮೇಲೆ ಬೀಳುವುದರಿಂದ ಅದು ಇನ್ನೂ ಹೆಚ್ಚು ವೇಗವಾಗಿ ಕುಸಿಯುತ್ತಿದೆ. ಅಲ್ಲದೆ ಉತ್ತರ ಧ್ರುವಭಾಗದ ಹಿಮಗಡ್ಡೆಗಳು ಕರಗುತ್ತಿರುವುದರಿಂದ ಇತ್ತೀಚೆಗೆ ಸಾಗರದಲೆಗಳೂ ಹೆಚ್ಚು ಹೆಚ್ಚು ಎತ್ತರಕ್ಕೇಳುತ್ತಿವೆ—ಸುಮಾರು ಒಂದು ಶತಮಾನಕ್ಕೆ ಎರಡೂವರೆ ಅಡಿಗಳಷ್ಟು. ಅಥವಾ ಹಾರ್ನರ್ ಹೇಳಿದಂತೆ "ಅಂದಾಜು ಪ್ರತಿವರ್ಷಕ್ಕೂ ನನ್ನ ಕಿರುಬೆರಳಿನ ಗಾತ್ರದಷ್ಟು. ಜತೆಗೆ ಅವುಗಳನ್ನು ಮೀರಿಸುವ ಇನ್ನೊಂದು ಕಾರಣವಿದೆ. ಸಾಮಾನ್ಯ ಉಬ್ಬರದಲೆಗಳಿಗಿಂತಲೂ ಸುಮಾರು ಎಂಟು ಅಡಿ ಹೆಚ್ಚಿನ ಎತ್ತರದ ಅಲೆಗಳು ಬಡಿಯುವ (೧೯೫೩ರಲ್ಲಾದಂತೆ) ಸಾಧ್ಯತೆ ಇದೆ. ಕಾರಣ, ಸ್ಕಾಟ್ಲ್ಯಾಂಡ್ ಉತ್ತರದ ಮೇಲ್ಗಡೆ ಸುತ್ತಿ ಉತ್ತರ ಸಮುದ್ರದ ಮೇಲೆ ಕೆಳಮೊಗವಾಗಿ ಚಲಿಸುವ ವಾಯುಮಂಡಲದ ಕಡಿಮೆ ಒತ್ತಡದ ಬಾನಿ (ಟ್ರಫ್) ಈ ತಗ್ಗು ಸಮುದ್ರ ಜಲವನ್ನು" ದುಬ್ಬದಂತೆ ಮೇಲಕ್ಕೆತ್ತುತ್ತದೆ. ಈ ದುಬ್ಬ ಉತ್ತರ ಸಮುದ್ರದ ದಕ್ಷಿಣಭಾಗದ ಆಳವಿಲ್ಲದ ಪ್ರದೇಶಕ್ಕೆ ಬಂದಂತೆ, ಅದು ಥೇಮ್ಸ್ ನದೀ ಮುಖದಿಂದ ನದೀ ಪಾತ್ರದ ಮೇಲೆ ನುಗ್ಗುತ್ತದೆ. ಅದೇ ಸಮಯಕ್ಕೆ ಉತ್ತರಾಭಿಮುಖವಾದ ಬಿರುಗಾಳಿ ಬೀಸಿತೆಂದರೆ ಭಯಂಕರ ಗಾತ್ರದ ನೀರಿನ ಮೊತ್ತ ಥೇಮ್ಸ್ ನದಿಗೆ ನುಗ್ಗಿ ಲಂಡನ್ ನಗರಕ್ಕೆ ಬರುವುದು. ಇದಕ್ಕೆ ಕಟ್ಟಕಡೆಯ ನೂಕಾಟ ಭೂಮಿಯ ಪರಿಭ್ರಮಣದಿಂದ ದೊರೆಯುವುದು.

ಹಲವು ಶತಮಾನಗಳಿಂದಲೂ ಲಂಡನ್ ನಗರ ಪ್ರವಾಹದ ಬಾಯಿಯಲ್ಲೇ ಇರುವುದು. ೧೨೩೬ರಲ್ಲಿ ನದಿಯಲ್ಲಿ ನೆರೆ ಬಂದಾಗ ವೆಸ್ಟ್‌ಮಿನಿಸ್ಟರ್‌ನ ಅರಮನೆಯ ವಿಶಾಲ ಹಜಾರದಲ್ಲಿ ಹರಿಗೋಲಿನಲ್ಲಿ ತೇಲಾಡಿದರಂತೆ. ಪೆಪಿಸ್ ೧೬೬೩ ಡಿಸೆಂಬರ್ ೭ರ ತನ್ನ ದಿನಚರಿಯಲ್ಲಿ ಬರೆದುದು, "ಹಿಂದಿನ ರಾತ್ರಿಯ

ನದಿಯಲ್ಲಿನ ಉಬ್ಬರ ಇಂಗ್ಲೆಂಡಿನ ಜನರ ನೆನಪಿನಂತೆ, ಎದೆಗಿಂತ ಹೆಚ್ಚಿನ ಎತ್ತರದ್ದಾಗಿತ್ತು. ವೈಟಿಹಾಲೆಲ್ಲಾ ಮುಳುಗಿತ್ತು." ೧೯೫೩ ರಲ್ಲಿ ಪೂರ್ವ ತೀರದಲ್ಲೂ ಥೇಮ್ಸ್ ನದಿಯ ಅಳಿವೆಯಲ್ಲೂ ಎದ್ದ ಪ್ರವಾಹದಲ್ಲಿ ಮುನ್ನೂರು ಮಂದಿ ಸತ್ತುಹೋದರು. ಅದೃಷ್ಟವಶಾತ್ ಲಂಡನ್ನಿನ ಮಧ್ಯಭಾಗದವರೆಗೆ ನೀರು ಬರಲಿಲ್ಲ. ಕಳೆದ ಕೆಲವು ತಿಂಗಳಲ್ಲಿ ಉತ್ತರಾಭಿಮುಖವಾಗಿ ಬೀಸುವ ಬಿರುಗಾಳಿಗಳೂ ಎಂದೂ ಇಲ್ಲದಷ್ಟು ಎತ್ತರದ ಉಬ್ಬರವೂ ಬರುತ್ತಿವೆ. (ಹೊಸ ವರ್ಷದ ಹಿಂದಿನ ರಾತ್ರಿ ಬಂದುದು ನದೀ ತೀರದ ಗೋಡೆಗಳಿಗಿಂತ ಕೇವಲ ಕೆಲವೇ ಇಂಚುಗಳಷ್ಟು ಕೆಳಗಿತ್ತು) ಆದರೆ ಅದೃಷ್ಟವಶಾತ್ ಉಬ್ಬರವೂ ಬಿರುಗಾಳಿಯೂ ಒಮ್ಮೆಲೇ ಬರಲಿಲ್ಲ. ಏರುತ್ತಿರುವ ನೀರನ್ನು ಹದ್ದಿನಲ್ಲಿಡಲು ತೀರಗಳ ಗೋಡೆಗಳ ಎತ್ತರವನ್ನು ಏರಿಸುತ್ತಲೇ ಬಂದುದಾಗಿದೆ, ಕಟ್ಟಕಡೆಗೆ ೧೯೭೮-೭೨ ರಲ್ಲಿ ಅದನ್ನು ಹದಿನೆಂಟು ಇಂಚುಗಳಷ್ಟು ಎತ್ತರಿಸಲಾಯಿತು. (ಲಂಡನ್ ನಗರವನ್ನು ಬಹುಕಾಲ ಕಾಪಾಡಲು ಆರು ಅಥವಾ ಏಳು ಅಡಿಗಳಷ್ಟು ಏರಿಸ ಬೇಕಾದೀತು. ಹೀಗೆ ಏರಿಸುತ್ತಲೇ ಹೋದರೆ ನದೀ ತೀರದಿಂದ ದೃಶ್ಯವನ್ನು ನೋಡುವ ಪ್ರಜೆಗಳಿಗೂ ಪ್ರವಾಸಿಗಳಿಗೂ ನದಿಯೇ ಕಣ್ಮರೆಯಾಗುವ ಸಂಭವವಿದೆ. ಆದ್ದರಿಂದ ೧೯೭೨ ರಲ್ಲಿ ಜಿ.ಎಲ್.ಸಿ. ಯವರು ಒಪ್ಪಿಸಿದ ನೆರೆ ತಡೆಯೋಜನೆಯನ್ನು ಪಾರ್ಲಿಮೆಂಟ್ ಅಂಗೀಕರಿಸಿತು. ಈ ಯೋಜನೆಯಂತೆ ವೆಸ್ಟ್‌ಮಿನಿಸ್ಟರ್‌ಗೆ ಎಂಟು ಮೈಲಿ ಪೂರ್ವದಲ್ಲಿ ವುಲ್‌ವಿಚ್-ಎಂಬಲ್ಲಿನ ನದೀ ಮುಖದಲ್ಲಿ ನೆರೆ ತಡೆಯನ್ನು ಕಟ್ಟುವುದು. ಈ ಸ್ಥಳದಲ್ಲಿ ಹಡಗು ಸಂಚಾರಕ್ಕೆ ಎರಡು ದಿಕ್ಕಿನಿಂದಲೂ ಆಸ್ಪದವಿದೆ. ನದಿಯ ಕೆಳಭಾಗದಲ್ಲಿ ನದಿಯ ತೀರದ ಗೋಡೆಗಳನ್ನು ಎತ್ತರಿಸುತ್ತಲೇ ಬರಲಾಗುತ್ತದೆ."

ಅಂದು ಸೂರ್ಯತೋಯ್ದಂತೆ ಹಿಮದ ಸಂದಿನಲ್ಲಿ ಇಣುಕುತ್ತಿದ್ದ. ನಮ್ಮ ದೋಣಿ ತಡೆ ಸಾಧನೆಗಳ ಪಕ್ಕದಲ್ಲಿ ಮೆಲ್ಲಗೆ ಚಲಿಸುತ್ತಿತ್ತು. ಅಲ್ಲಿದ್ದ ಸಣ್ಣ ದೋಣಿಗಳು, ಆಧಾರ ಸ್ತಂಭಗಳು, ಇನ್ನೂ ಪೂರೈಸದಿದ್ದ ತಡೆಯಭಾಗಗಳು ಇವು ಐನೂರಿಪ್ಪತ್ತು ಗಜ ಅಗಲದ ನದೀ ನಾಲೆಯನ್ನು ಬಹುಮಟ್ಟಿಗೆ ಆಕ್ರಮಿಸಿದ್ದವು. ಇವುಗಳ ನಡುನಡುವೆ ಉಬ್ಬರದ ಪ್ರವಾಹ ನುಗ್ಗುತ್ತಿತ್ತು. ಆದ್ದರಿಂದ ನಾವು ಬಹು ಎಚ್ಚರದಿಂದ ಮುಂದೆ ಸಾಗಬೇಕಾಗಿತ್ತು. ನಮ್ಮ ಗುಂಪಿನ ಇತರರೊಡನೆ ಕಟ್ಲರ್ ಮತ್ತು ಥ್ಯಾಚರ್ ಅವರೊಡನೆ ನಾನು ನದಿಯ ಅಗಲದಲ್ಲಿದ್ದ ಒಂಭತ್ತು ಉಕ್ಕು-ಸಿಮೆಂಟುಗಳಿಂದ ಭದ್ರಪಡಿಸಿದ ಬಾವಿಗಳಲ್ಲಿ ಒಂದರ ಬಳಿಗೆ ಬಂದೆವು. ಕಟ್ಟಡದ ಸ್ಥಳದಲ್ಲಿ ಮಾರ್ಗರೆಟ್ ಥ್ಯಾಚರ್ ಬಹು

ಚಟುವಟಿಕೆಯಿಂದ ಹೆಜ್ಜೆ ಹಾಕುತ್ತಿದ್ದರು. ಏಣಿಗಳನ್ನು ಏರಿಳಿಯುತ್ತ ಕಟ್ಟಿದ್ದ ಸಾರ್ವೆಗಳನ್ನೂ ಮರದ ತೊಲೆಗಳನ್ನೂ ಮರಳಿನ ಚೀಲಗಳನ್ನೂ ಉಕ್ಕಿನ ಕಂಬಿಗಳನ್ನೂ ದಾಟುತ್ತ, ಆದರೂ ಒಂದು ಕ್ಷಣವೂ ತನ್ನ ಮುಖದ ಮೇಲಿನ ಮುಗುಳ್ನಗೆಯನ್ನು ತಡೆಗಟ್ಟದೆ, ಸಮೀಪದಲ್ಲಿದ್ದ ಕಟ್ಟಡದ ಇಂಜಿನಿಯರುಗಳನ್ನು ತಾಂತ್ರಿಕ ಸಂಬಂಧವಾದ ಪ್ರಶ್ನೆಗಳನ್ನು ಕೇಳುತ್ತ, (ಅದು ಸ್ವಲ್ಪವೂ ಅಲ್ಲಾಡದಂತೆ ತಳದಲ್ಲಿ ಹೇಗೆ ನೆಡುವಿರಿ?) ಕೆಲಸದಾಳು ಗಳನ್ನು ಕುರಿತು ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತ, (ಎಲ್ಲಿ ವಾಸಿಸುತ್ತೀರಿ? ನೀವೇನು ಮಾಡುತ್ತಿರುವಿರಿ? ಈ ಕೆಲಸ ನಿಮ್ಮ ಮನಸ್ಸಿಗೆ ಒಪ್ಪಿದೆಯೇ?) ಯೂನಿಯನ್ ಪ್ರತಿನಿಧಿಗಳೊಡನೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತ, (ಅವರಲ್ಲಿ ಕೆಲವರು ನಿಗದಿಯಾದ ತಾರೀಕಿನೊಳಗೆ ತಡೆಯೋಜನೆಯನ್ನು ಪೂರೈಸಲು ತಲಾ ಒಂದು ಸಾವಿರ ಪೌಂಡುಗಳ ಬೋನಸ್ಸಿಗಾಗಿ ಮಾತುಕತೆ ನಡೆಸುತ್ತಿದ್ದರು.) ಅವರು ಸ್ಥಳವನ್ನು ವೀಕ್ಷಿಸಿದರು. ಕಂಪ್ರೆಸ್ಸರುಗಳು (ಒತ್ತುವ ಯಂತ್ರಗಳು) ಮತ್ತು ಇತರ ಸಹಾಯಕ ಇಂಜಿನುಗಳಿಂದ ಹೊರಡುತ್ತಿದ್ದ ಆರ್ಭಟ ಬಹು ಭಯಂಕರವಾಗಿತ್ತು. ಹಡಗುಗಳ ಚಲನೆಗಾಗಿಯೇ ಬಿಟ್ಟಿದ್ದ ಮುನ್ನೂರು ಗಜ ಅಗಲದ ನಾಲೆಯಲ್ಲಿ ಒಂದು ಸಾಮಾನು ಹಡಗು ಚಲಿಸು ತ್ತಿತ್ತು. ಪ್ರತಿಯೊಂದು ವರ್ಷದಲ್ಲೂ ವುಲ್‌ವಿಚ್-ರೀಚಿಗಾಗಿ ದಾಟಿಹೋಗುವ ಐದುಸಾವಿರ ಸಮುದ್ರ ನಾವೆಗಳ ಪೈಕಿ ಅದೊಂದು. ಸುತ್ತಲಿಂದ ನೀರು ನುಗ್ಗದಂತೆ ತಡೆಯುವ ಒಂದು ದೊಡ್ಡ ಉಕ್ಕಿನ ಬಾವಿಯೊಳಗಿನಿಂದ ಜಲತಳ ದಲ್ಲಿ ಕೆಲಸ ಮಾಡುವ ಮುಳುಕನೊಬ್ಬ (ಡ್ರೈವರ್) ನೀರಿನೊಳಗಿನಿಂದ ಮೇಲಕ್ಕೆ ನಮ್ಮ ಮಟ್ಟಕ್ಕೆ ಬಂದ. ಈ ಉಕ್ಕಿನ ಬಾವಿಯೊಳಗೆ ನೀರಿನೊಳಗಡೆ ನೆಲಮಟ್ಟದಲ್ಲಿ ಉಕ್ಕು ಸಿಮೆಂಟಿನ ಕೆಲಸ ಮಾಡಿ ಉಕ್ಕಿನಿಂದ ಪ್ರಬಲಗೊಂಡ ಸಿಮೆಂಟ್ ಬಾವಿಗಳನ್ನು ಕಟ್ಟುವರು.

ಥ್ಯಾಚರ್ ಬಾವಿಯಲ್ಲಿ ಬಹು ಆಳಕ್ಕಿಳಿದು ಮುಂದೆ ತಡೆಗೇಟುಗಳಿಗೆ ಸಂಬಂಧಿಸಿದ ಯಂತ್ರಗಳನ್ನು ಅಳವಡಿಸುವ ಸ್ಥಳ ನೋಡುವುದನ್ನು ಹಾರ್ನರ್ ತಮ್ಮಲ್ಲಿದ್ದ ಹೋಂ ಮೂವಿ ಕ್ಯಾಮರಾದಲ್ಲಿ ಚಿತ್ರ ತೆಗೆಯುತ್ತಿದ್ದರು. ಹಲವು ಅಡಿಗಳಷ್ಟು ಚಿತ್ರಗಳನ್ನು ತೆಗೆದಾದ ಮೇಲೆ ಹಾರ್ನರ್ ಅವರನ್ನು ಕುರಿತು ತಡೆಬಾಗಿಲುಗಳ ಯಾಂತ್ರಿಕ ವಿವರಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿದೆ. "ಇಡೀ ತಡೆಯಲ್ಲಿ ಹತ್ತು ತೆರವುಗಳು ಇರುತ್ತವೆ. ಇವುಗಳ ಪೈಕಿ ಆರರ ಮೂಲಕ ಹಡಗುಗಳು ದಾಟಬಹುದು. ನಾಲ್ಕು ಮುಖ್ಯ ತೆರವುಗಳು

ಒಂದೊಂದರ ಅಗಲವೂ ಇನ್ನೂರು ಅಡಿಗಳು. ಬಾವಿಗಳ ನಡುವೆ ಇರುವ ಬಾಗಿಲುಗಳನ್ನು ಜಲತಲದ ನೆಲದ ಮೇಲೆ ಉಕ್ಕು-ಸಿಮೆಂಟ್‌ನಿಂದ ಕಟ್ಟಲಾಗಿರುವ ಚೈತ್ಯಾಕಾರದ ಹೊಸ್ತಿಲ ಮೇಲೆ ಕಿರುಗಣೆಗಳಲ್ಲಿ ಅಳವಡಿಸಿರುತ್ತವೆ. ಈ ಬಾಗಿಲುಗಳು ಸಾಮಾನ್ಯವಾಗಿ ಜಲತಲದ ನೆಲಮಟ್ಟದಲ್ಲಿ ಮಲಗಿರುತ್ತವೆ. ಬೇಕಾದಾಗ ಆ ಬಾಗಿಲುಗಳು ಕಿರುಗಣೆಗಳಲ್ಲಿ ತಿರುಗುತ್ತ ಲಂಬಸ್ಥಿತಿಗೆ ಬರುವಂತೆ ಮಾಡಬಹುದು. ಅವುಗಳನ್ನು ಮೇಲಕ್ಕೆ ಎತ್ತುವ ಕೆಲಸವನ್ನು ನೀರಿನ ಒತ್ತಡವೇ ನೆರವೇರಿಸುವಂತೆ ಏರ್ಪಡಿಸಲಾಗಿದೆ. ಇವು ಸುಮಾರು ಐದು ಅಂತಸ್ತಿನ ಮಹಡಿಯ ಎತ್ತರಕ್ಕೆ ಎದ್ದು ನಿಲ್ಲುವುವು. ಎಂತಹ ಪ್ರವಾಹವು ನದಿಯಲ್ಲಿ ನುಗ್ಗಲಿ ಅದನ್ನು ತಡೆಯುವುವು. ಆದರೆ ಎಲ್ಲಾ ಬಾಗಿಲುಗಳನ್ನು ಮೂವತ್ತು ನಿಮಿಷಗಳಲ್ಲೇ ಎತ್ತಬಹುದು. ಇದುವರೆಗೂ ಒಂದು ಹಡಗು ಮಾತ್ರ ನಮಗೆ ಹೊಡೆಯಿತು. ಅದು ಅಡ್ಡಡ್ಡಲಾಗಿ ನುಗ್ಗಲು ಪ್ರಯತ್ನಿಸಿದಂತೆ ಕಂಡಿತು. ನಮ್ಮನ್ನು ಅನೇಕ ಸಮಸ್ಯೆಗಳು ಕಾಡುತ್ತಿವೆ. ಈ ಛಳಿಗಾಲದ ಹವಾಗುಣ ನಮಗೆ ಬಹಳಷ್ಟು ಅಸಹಾಯಕವಾಗಿದೆ. ಯೋಜನೆಯ ಖರ್ಚು ದಿನೇದಿನೇ ಏರುತ್ತಲೇ ಇದೆ ಹಣದುಬ್ಬರ ನಮಗೆ ಬಾಗಿಲುಗಳನ್ನು ತಯಾರಿಸುತ್ತಿರುವ ಇಂಜಿನಿಯರಿಂಗ್ ಸಂಸ್ಥೆಗಳೊಡನೆ ಇರುವ ನಮ್ಮ ಸಂಬಂಧಕ್ಕೆ ನೆರವಾಗುತ್ತಿಲ್ಲ. ಕೊಸ್ಟೈನ್ ಮತ್ತು ಟೌರ್‌ಮ್ಯಾಕ್ ಎಂಬ ಬ್ರಿಟಿಷ್ ಕಂಪೆನಿ ಮತ್ತು ಡಚ್ ಕಂಪೆನಿ ಹಾಲ್ಲೇಂಡ್ಸ್ ಬೇಟಿನ್ ಮಾತ್ಸ್‌ಚಾಪಿಜ್ ಇವರ ಒಕ್ಕೂಟದಲ್ಲಿ ಬಾಗಿಲುಗಳು ಸಿದ್ಧವಾಗುತ್ತಿವೆ. ಈಗತಾನೆ ಅವರೊಡನೆ ಪುನಃ ಮಾತುಕತೆ ನಡೆಸಿ ಅವರಿಗೆ ಲಾಭವಾಗುವಂತೆಯೂ ಅವರ ಬ್ಯಾಂಕ್ ಓವರ್ ಡ್ರಾಫ್ಟ್‌ಗಳನ್ನು ನ್ಯಾಯವಾದ ಮಿತಿಯೊಳಗಿಡಲೂ ಆಗುವ ರೀತಿಯಲ್ಲಿ ತೀರ್ಮಾನಕ್ಕೆ ಬಂದಿದ್ದೇವೆ. ಜಿ.ಎಲ್.ಸಿ.ಯು ಪ್ರವಾಹ ತಡೆಗಾದ ಖರ್ಚಿನ ಶೇಕಡಾ ಇಪ್ಪತ್ತೈದು ಭಾಗವನ್ನು ಕೊಡುವುದಾದರೆ ಸರ್ಕಾರ ಮಿಕ್ಕುದನ್ನು ವಹಿಸಿಕೊಳ್ಳುತ್ತದೆ. ಇದಲ್ಲದೆ ತಡೆಯ ಕೆಳಗಿನ ನದಿಯ ಬದಿಗಳ ರಕ್ಷಣೆಗಾಗಿ ಇನ್ನೂ ಇನ್ನೂರೈವತ್ತು ಮಿಲಿಯ ಪೌಂಡುಗಳಷ್ಟು ಖರ್ಚಾಗುವುದು. ಮುಷ್ಕರಗಳೂ ನಿಧಾನ ಕೆಲಸಗಳೂ ನಡೆಯುತ್ತಿರುವುದರಿಂದ ೧೯೭೯ರ ನಡುವಿನಲ್ಲಿ ಮುಗಿಯುತ್ತದೆಂದು ನಂಬಿದ್ದ ಕೆಲಸ ಬಹುಬೇಗ ಎಂದರೆ ೧೯೮೦ರ ಕೊನೆಯ ಹೊತ್ತಿಗೆ ಆದೀತು. ಆಮೇಲೆ ಅದು ಕಾರ್ಯಾಚರಣೆಗೆ ಒದಗುವುದು. ಮಹಾಮಹಾ ಯಂತ್ರಗಳೂ ಶಿಲ್ಪಕಾರ್ಯಧುರೀಣರೂ ಇರುವ ಈಗಿನ ಕಾಲದಲ್ಲೂ ಇಂತಹ ಬೃಹತ್ ಯೋಜನೆಯಲ್ಲಿನ ಹಲವು ಕೆಲಸಗಳನ್ನು

ಹಳೆಯ ಕಾಲದಂತೆ ಮೈಮುರಿದೇ ಮಾಡಬೇಕಾಗುತ್ತದೆ. ಬಂಡೆಗಳನ್ನು ಒಡೆದು ನೆಲವನ್ನು ಕೊರೆದು ನದಿಯ ನೀರಿನ ಕೆಳಗಿನ ನೆಲದಲ್ಲಿನ ಕಲ್ಲುಚೂರುಗಳು ಕೆಸರು, ಗೋಡು ಮುಂತಾದವುಗಳನ್ನು ಪಂಪ್ ಮಾಡಿ ತೆಗೆದಾದಮೇಲೂ ತಳಪಾಯವನ್ನು ಹಾಕಬೇಕಾದ ಸುಣ್ಣಕಲ್ಲಿನ ನೆಲ ಚೊಕ್ಕಟವಾಗಿ ಸಿಮೆಂಟ್ ಕಾಂಕ್ರೀಟ್ ಕಟ್ಟಿಕೊಳ್ಳುವಂತಿದೆಯೋ ಎಂಬುದನ್ನು ನೀರಲ್ಲಿ ಮುಳುಗಿ ಕೈಯಿಂದ ತಡಕಾಡಿಯೇ ಪರೀಕ್ಷಿಸಬೇಕು. ಮುಳುಕರು ನೆಲದ ಪ್ರತಿಯೊಂದು ಚದರ ಮೀಟರ್ ಸ್ಥಳವನ್ನೂ ಹೀಗೆ ಪರೀಕ್ಷಿಸುತ್ತಾರೆ. ಎಲ್ಲವನ್ನೂ ಮುಗಿಸಲು ರಾತ್ರಿಹಗಲೂ ದುಡಿಯುತ್ತಿದ್ದೇವೆ. ಇದು ಹೀಗೆ ನಡೆಯುತ್ತಿರಲು ಲಂಡನ್ನಿನ ಪ್ರಜೆಗಳಿಗೆ ಪ್ರವಾಹದ ಭಯ ಎಷ್ಟು ಸತ್ಯವಾದುದು, ಪ್ರವಾಹದ ಎಚ್ಚರಿಕೆ ಕೊಡುವ ಸೈರನ್‌ಗಳು ಹೇಗೆ ಕೂಗುತ್ತವೆ, ಯಾವ ರೇಡಿಯೋ ಸ್ಟೇಷನ್ನುಗಳಿಗೆ ಕಿವಿಗೊಡಬೇಕು. ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಅವರು ಅನುಸರಿಸಬಹುದು ಎಂಬುದರ ಬಗ್ಗೆ ತಿಳಿವಳಿಕೆ ಕೊಡುತ್ತಾ ಇದ್ದೇವೆ.

ಮಾರ್ಗರೇಟ್ ಥ್ಯಾಚರ್ ಬಾವಿಯ ಮೇಲಕ್ಕೆ ಬಂದು ಕಟ್ಟೆಯ ಮೇಲೆ ನಿಂತಾಗ ಅವರ ಕದಪುಗಳು ಚಳಿಯಿಂದ ನೀಲಿಗಟ್ಟಿ ಹೋಗಿದ್ದವು. ಆದರೂ ಮುಖದ ಗೆಲುವು ಮಾಸಿರಲಿಲ್ಲ. ಇದು ಬಹು ತಣ್ಣಗಿನ ಕೆಲಸ. ಇಷ್ಟಾದರೂ ಆ ಹುಡುಗರೆಲ್ಲಾ ಉಲ್ಲಾಸವಾಗಿ ದುಡಿಯುತ್ತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ತಡೆಕಟ್ಟೆಯ ಬಗ್ಗೆ ನಾನು ಕೇಳಿದ್ದೆ. ಆದರೆ ಈ ತೆರನಾದವುಗಳನ್ನು ನಾವೇ ಕಣ್ಣಾರೆ ಕಾಣುವುದೇ ಉತ್ತಮ” ಎಂದು ಅವರು ಹೇಳಿದರು.

ಮಾರ್ಗರೇಟ್ ಥ್ಯಾಚರ್ ಮತ್ತು ಕಟ್ಲರ್ ಆಮೇಲೆ ಸಮೀಪದಲ್ಲಿದ್ದ ಒಂದು ಕಾಲ್ಚೆಂಡಿನ ಮೈದಾನಕ್ಕೆ ಹೋದರು. ಅಲ್ಲಿ ಒಂದು ಹೆಲಿಕಾಪ್ಟರ್ ಅವರನ್ನು ಪ್ರವಾಹ ಭಯಕ್ಕೊಳಗಾದ ಲಂಡನ್ನಿನ ಭಾಗವನ್ನು ಆಕಾಶದಿಂದ ನೋಡಲು ಕರೆದೊಯ್ಯಲು ಸಿದ್ಧವಾಗಿತ್ತು.

ಜಿ. ಎಸ್. ಕೇಶವಾಚಾರ್ಯ

ಸುಳ್ಳಿನ ಕಾನೂನುಗಳನ್ನು ಮಾಡಿ ಸತ್ಯದ ಯುಗವನ್ನು ತರಲು ಸಾಧ್ಯವಿಲ್ಲ.

—ಆಲ್ಡಸ್ ಹಕ್ಸಲಿ

"ಅಕ್ಷರ ಸೈನ್ಯ"

(ಕರ್ನಾಟಕದಲ್ಲಿ ಸಾಕ್ಷರತಾ ಮಟ್ಟವನ್ನು ಸುಧಾರಿಸಲು ಕೈಗೊಂಡ ಆಂದೋಳನ)

ಯಾವುದೇ ದೇಶದ ಅಭಿವೃದ್ಧಿ ಆ ದೇಶದ ಸುಶಿಕ್ಷಿತ ಪ್ರಜೆಗಳನ್ನು ಅವಲಂಬಿಸಿದೆ. ಅಮೆರಿಕಾ, ರಷ್ಯ, ಜಪಾನ್ ಮತ್ತಿತರ ರಾಷ್ಟ್ರಗಳು ಇದಕ್ಕೆ ನಿದರ್ಶನ. ನಮ್ಮ ದೇಶದ ಸಾಕ್ಷರತಾ ಪ್ರಮಾಣ ೩೬.೧೭. ಕರ್ನಾಟಕ ರಾಜ್ಯದ ಸಾಕ್ಷರತಾ ಪ್ರಮಾಣ ೩೮.೪೧. ನಮ್ಮ ರಾಜ್ಯದಲ್ಲಿ ೮ ಜಿಲ್ಲೆಗಳು ರಾಷ್ಟ್ರ ಮಟ್ಟದ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಸಾಕ್ಷರತೆಯನ್ನು ಹೊಂದಿವೆ. ರಾಜ್ಯದ ಸಾಕ್ಷರತಾ ಪ್ರಮಾಣ ೧೯೫೧ರಲ್ಲಿ ೧೮.೮೩ರಷ್ಟಿದ್ದು ಅದು ೧೯೮೧ರಲ್ಲಿ ೩೮.೪೧ಕ್ಕೆ ಏರಿದೆ. ಆದರೆ ಕಳೆದ ಮೂರು ದಶಕಗಳಲ್ಲಿ ಅನಕ್ಷರಸ್ಥರ ಸಂಖ್ಯೆಯೂ ಕೂಡ ಹೆಚ್ಚುತ್ತಾ ಬಂದಿದೆ. ೧೯೬೧ರಲ್ಲಿ ೧ ಕೋಟಿ ೭೫ ಲಕ್ಷ ಇದ್ದ ಅನಕ್ಷರಸ್ಥರ ಸಂಖ್ಯೆ ೧೯೮೧ರಲ್ಲಿ ೨ ಕೋಟಿ ೨೮ ಲಕ್ಷಕ್ಕೆ ಏರಿದೆ. ಸ್ವಾತಂತ್ರ್ಯ ಲಭ್ಯವಾದ ಮೇಲೆ ಶಾಲೆಗಳ ಸಂಖ್ಯೆ ಹೆಚ್ಚಿದ್ದರೂ ಕೂಡ ಜನಸಂಖ್ಯೆಗನುಗುಣವಾಗಿ ಈ ಹೆಚ್ಚಳ ಕಂಡುಬರುವುದಿಲ್ಲ. ಸಾಕ್ಷರತಾ ಪ್ರಮಾಣವನ್ನು ರಾಜ್ಯದಲ್ಲಿ ಕೈಗೊಳ್ಳದ ಹೊರತು ಈ ದಿಶೆಯಲ್ಲಿ ಗಣನೀಯ ಪ್ರಗತಿ ಕಷ್ಟಸಾಧ್ಯ. ಆದ್ದರಿಂದ ಕರ್ನಾಟಕ ಸರಕಾರ ಈ ದಿಶೆಯಲ್ಲಿ ಆದಷ್ಟು ಬೇಗನೆ ಸಾಕ್ಷರತಾ ಮಟ್ಟವನ್ನು ಉತ್ತಮಪಡಿಸಲು ಉದ್ದೇಶಿಸಿ "ಅಕ್ಷರ ಸೈನ್ಯ" ಎಂಬ ಕಾರ್ಯಕ್ರಮವನ್ನು ರೂಪಿಸಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಜನರ ಸಾಕ್ಷರತಾ ಮಟ್ಟವನ್ನು ಸುಧಾರಿಸುವುದೇ ಆಗಿದೆ. ಇದಕ್ಕಾಗಿ ಈ ಯೋಜನೆಯಲ್ಲಿ ೭ ಮುಖ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಒಮ್ಮುಖದ ಪ್ರಯತ್ನ ಮಾಡಿ ಪ್ರಗತಿ ಸಾಧಿಸಬೇಕೆಂದು ಉದ್ದೇಶಿಸಲಾಗಿದೆ.

೧) ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರ :

೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಶಾಲೆಗಳಿಗೆ ಹೋಗುವ ಅಭ್ಯಾಸವನ್ನು ರೂಢಿಸುವ ಸಲುವಾಗಿ ಮತ್ತು ದೊಡ್ಡ ಮಕ್ಕಳು ಶಾಲೆಗೆ ಬರುವಾಗ ಮನೆಯಲ್ಲಿರುವ ಸಣ್ಣ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಇಂತಹ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳಲ್ಲಿ ಅವರನ್ನು ಬಿಟ್ಟು

ಹೊದ್ದವರು ಶಾಲೆಗೆ ಸೇರಲು ಅನುಕೂಲವಾಗುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಆದರ ಪ್ರಕಾರ ೫ ವರ್ಷಗಳ ಅವಧಿಯಲ್ಲಿ ೮,೮೦೦ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸುವ ಗುರಿ ಹೊಂದಲಾಗಿದೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು ೧೭ ಸಾವಿರ ಏಕೋಪಾಧ್ಯಾಯ ಶಿಕ್ಷಕರ ಶಾಲೆಗಳಿವೆ. ಈ ಶಾಲೆಗಳಲ್ಲಿ ಕಾರಣಾಂತರಗಳಿಂದ ಶಿಕ್ಷಕರು ಗೈರು ಹಾಜರಾದರೆ ಶಾಲೆಯನ್ನು ಮುಚ್ಚಬೇಕಾಗುತ್ತದೆ. ಇದರಿಂದ ಶಾಲೆಗೆ ಬರುವ ಮಕ್ಕಳ ಹಾಜರಾತಿಯ ಮೇಲೆ ದುಷ್ಪರಿಣಾಮ ಬೀಳುತ್ತದೆ. ಆದ್ದರಿಂದ ಇಂಥ ಶಾಲೆಗಳಿಗೆ ಹೊಂದಿಕೊಂಡಂತೆ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿದರೆ, ಪ್ರಾಥಮಿಕ ಶಾಲೆಯ ಶಿಕ್ಷಕರು ಗೈರು ಹಾಜರಾದಾಗ, ನರ್ಸರಿ ಶಿಕ್ಷಕರು ಶಾಲೆಯನ್ನು ನೋಡಿಕೊಳ್ಳಬಹುದು. ೮೩-೮೪ ರಲ್ಲಿ ೮೦೦ ಕೇಂದ್ರಗಳನ್ನು ತೆರೆಯಲು ಅವಕಾಶ ಮಾಡಲಾಗಿದೆ. ಈ ಕೇಂದ್ರಗಳಲ್ಲಿ ೨೫,೦೦೦ ಮಕ್ಕಳನ್ನು ಸೇರಿಸಲು ಅವಕಾಶ ಮಾಡಲಾಗಿದ್ದು ಇದಕ್ಕೆ ೮೩-೮೪ ವರ್ಷದಲ್ಲಿ ೩೮.೧೨ ಲಕ್ಷ ರೂ.ಗಳನ್ನು ಖರ್ಚು ಮಾಡಲು ಅವಕಾಶ ಮಾಡಲಾಗಿದೆ. ಈ ಕಾರ್ಯಕ್ರಮದ ಪ್ರಕಾರ ಪ್ರತಿಯೊಂದು ಕೇಂದ್ರಗಳಲ್ಲಿ ಒಬ್ಬ ನರ್ಸರಿ ಶಿಕ್ಷಕ ಮತ್ತು ಒಪ್ಪೊತ್ತಿನ "ಆಯಾ" ಅವರನ್ನು ನೇಮಿಸಲು ಅವಕಾಶ ಮಾಡಲಾಗಿದೆ. ಇದು ಅಲ್ಲದೆ ಪ್ರತಿಯೊಂದು ಕೇಂದ್ರಕ್ಕೆ ಬೇಕಾಗುವ ಕಲಿಕೆ ಮತ್ತು ಬೋಧನಾ ಉಪಕರಣಗಳನ್ನು ಹಾಗು ಪೀಠೋಪಕರಣಗಳನ್ನು ಕೊಳ್ಳಲು ೩,೦೦೦-೦೦ ರೂ.ಗಳನ್ನು ಒದಗಿಸಲಾಗಿದೆ.

೨) ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರಗಳು :

ಪ್ರಾಥಮಿಕ ಶಾಲೆಗೆ ಸೇರಿದ ಮಕ್ಕಳು ನಾನಾ ಕಾರಣಗಳಿಗಾಗಿ ತಮ್ಮ ಅಭ್ಯಾಸವನ್ನು ಪೂರ್ಣ ಮಾಡದೆ ಮಧ್ಯದಲ್ಲಿ ಶಾಲೆಯನ್ನು ಬಿಟ್ಟು ಹೋಗುವುದುಂಟು. ೧೦೦ ಮಕ್ಕಳು ಪ್ರಾಥಮಿಕ ಶಾಲೆಯ ಒಂದನೆ ತರಗತಿಗೆ ಸೇರಿದರೆ ೫ನೇ ತರಗತಿಗೆ ಬರುವಷ್ಟರಲ್ಲಿ ಶೇ|| ೬೦ ರಷ್ಟು ಮಕ್ಕಳು ಶಾಲೆಗಳನ್ನು ಬಿಟ್ಟು ಹೋಗುವ ಪರಿಸ್ಥಿತಿ ಉಂಟು. ಈ ರೀತಿ ಶಾಲೆಗೆ ಹೋಗಿ ಶಾಲೆಯನ್ನು ಬಿಟ್ಟ ಮತ್ತು ಶಾಲೆಗಳಿಗೆ ಹೋಗದೆ ಇರುವ ೬ ರಿಂದ ೧೪ ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನರು ತಮ್ಮ ಮಕ್ಕಳನ್ನು ಹೊಲಗಳಲ್ಲಿ ಅಥವಾ ಮನೆಯಲ್ಲಿ ಸಣ್ಣಪುಟ್ಟ ಕಾರ್ಯಗಳಿಗೆ ಕಳುಹಿಸಿ ಸ್ವಲ್ಪಮಟ್ಟಿನ ಆದಾಯ ಪಡೆದು

ಕೊಳ್ಳುವುದೇ ಸರ್ವೇ ಸಾಮಾನ್ಯವಾಗಿದೆ. ನಮ್ಮ ಸಂಪ್ರದಾಯಿಕ ಶಾಲೆಗಳಲ್ಲಿ ಅನೇಕ ಕಟ್ಟುಪಾಡುಗಳಿರುವುದರಿಂದ ಇಂತಹ ಮಕ್ಕಳಿಗೆ ಶಾಲೆಗೆ ಸೇರುವ ಅವಕಾಶವಿಲ್ಲ. ಈ ಕಟ್ಟುಪಾಡುಗಳೆಂದರೆ ಶಾಲೆಗೆ ಸೇರುವ ವಯಸ್ಸು, ಶಾಲೆ ನಡೆಸುವ ಸಮಯ, ಶಾಲೆಗೆ ಸೇರಬೇಕಾದರೆ ಒಂದನೇ ತರಗತಿಯಲ್ಲಿ ಸೇರ ಬೇಕು. ಶಾಲೆಯಲ್ಲಿ ಸೇರಿದ ನಂತರ ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಹೋಗಲು ಅನುಸರಿಸುವ ಪರೀಕ್ಷಾ ಪದ್ಧತಿ ಇತ್ಯಾದಿ. ಒಂದು ವೇಳೆ ೯ ವರ್ಷಕ್ಕೆ ಮೇಲ್ಪಟ್ಟ ಒಬ್ಬ ಮಗು ಶಾಲೆಗೆ ಸೇರಲು ಇಚ್ಛಿಸಿದರೆ ಅವನು ಒಂದನೆ ತರಗತಿಗೆ ಸೇರಬೇಕಾಗುತ್ತದೆ. ಅಂತಹ ಪ್ರಸಂಗದಲ್ಲಿ ಅವನು ಸಣ್ಣ ಮಕ್ಕಳ ಜೊತೆ ಬೆರೆಯುವುದು ಕಷ್ಟವಾಗುತ್ತದೆ. ಆದ್ದರಿಂದ ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲು "ಅಕ್ಷರ ಸೈನ್ಯ" ಕಾರ್ಯಕ್ರಮ ದಲ್ಲಿ ಅವಕಾಶ ಮಾಡಲಾಗಿದೆ. ಈ ಕೇಂದ್ರಗಳನ್ನು ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ತೆರೆಯಲು ಅವಕಾಶ ಮಾಡಲಾಗಿದೆ. ಇಂತಹ ಕೇಂದ್ರಗಳಿಗೆ ಸೇರುವ ಮಕ್ಕಳು ೯ ರಿಂದ ೧೪ ವಯಸ್ಸಿನ ಒಳಗೆ ಇರುವು ದುಂಟು. ಇಲ್ಲಿ ಒಬ್ಬ ಬೋಧಕನನ್ನು ಸಂಭಾವನೆ ಮೇಲೆ ನೇಮಿಸಲು, ಪುಸ್ತಕ ಮತ್ತು ಸ್ಲೇಟುಗಳನ್ನು ಒದಗಿಸಲು ಹಾಗೂ ಸಾದಿಲ್ವಾರು ವೆಚ್ಚಕ್ಕಾಗಿ ಹಣ ಒದಗಿಸಲು ಅವಕಾಶ ಮಾಡಲಾಗಿದೆ. ಇದೇ ಮಾದರಿಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು ಈ ಕೇಂದ್ರಗಳನ್ನು ಪ್ರಾರಂಭಿಸಿದ ಪಕ್ಷದಲ್ಲಿ ಅಂಥ ಸಂಸ್ಥೆ ಗಳಿಗೆ ಪ್ರತಿಯೊಂದು ಕೇಂದ್ರಕ್ಕೆ ೩೨೫-೦೦ ರೂ.ಗಳ ಧನ ಸಹಾಯ ಕೊಡಲು ಅವಕಾಶ ಮಾಡಲಾಗಿದೆ. ಸರ್ಕಾರವು ನಡೆಸಬೇಕೆಂದಿರುವ ಕೇಂದ್ರಗಳು ೨೪೦೦. ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ನಡೆಸಬೇಕೆಂದಿರುವ ಕೇಂದ್ರಗಳು ೩೨೦೦. ಪ್ರತಿಯೊಂದು ಕೇಂದ್ರದಲ್ಲಿ ೩೦ ಮಕ್ಕಳನ್ನು ಸೇರಿಸಲು ಅವಕಾಶ ಇದ್ದು ಈ ಕಾರ್ಯಕ್ರಮದ ಪ್ರಕಾರ ಈ ವರ್ಷ ೧.೬೮ ಲಕ್ಷ ಮಕ್ಕಳಿಗೆ ಇದರ ಲಾಭ ಲಭ್ಯವಾಗಲಿದ್ದು, ಇವಕ್ಕಾಗಿ ೧೨.೮೪ ಲಕ್ಷ ರೂ.ಗಳನ್ನು ಒದಗಿಸ ಲಾಗಿದೆ.

೩) ವಯಸ್ಕರ ಶಿಕ್ಷಣ ಕೇಂದ್ರ :

ಕರ್ನಾಟಕ ರಾಜ್ಯದ ಜನಸಂಖ್ಯೆ ೩.೭೧ ಕೋಟಿ. ೧೫ ರಿಂದ ೩೫ ವಯಸ್ಸಿನ ಒಳಗಿನ ಅನಕ್ಷರಸ್ಥರ ಸಂಖ್ಯೆ ಸುಮಾರು ೬೦ ಲಕ್ಷ. ಅವರಲ್ಲಿ ೨೨ ಲಕ್ಷ ಗಂಡಸರು ಮತ್ತು ೩೮ ಲಕ್ಷ ಹೆಂಗಸರು ಇದ್ದಾರೆ. ೩೫ ಮತ್ತು

ಮೇಲ್ಪಟ್ಟ ವಯಸ್ಕ ಅನಕ್ಷರಸ್ಥರ ಸಂಖ್ಯೆ ೬೫ ಲಕ್ಷವಾಗಿದೆ. ಇದರ ಪೈಕಿ ೨೬ ಲಕ್ಷ ಗಂಡಸರು ಮತ್ತು ೩೯ ಲಕ್ಷ ಹೆಂಗಸರು ಇದ್ದಾರೆ. ರಾಜ್ಯ ಸರ್ಕಾರ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ೧೯೭೮ ರಿಂದ ಜಾರಿಯಲ್ಲಿ ತಂದಿದೆ. ಈ ಕಾರ್ಯಕ್ರಮದ ಉದ್ದೇಶ ಕೆಳಗಿನಂತಿದೆ:—

೧) ಸಾಕ್ಷರತೆ ೨) ಅರಿವು ೩) ಕ್ರಿಯಾಶೀಲತೆ

ಈ ಕಾರ್ಯಕ್ರಮವನ್ನು ಕನಿಷ್ಠ ಅವಶ್ಯಕತೆ ಕಾರ್ಯಕ್ರಮ ಮತ್ತು ೨೦ ಅಂಶಗಳ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.

ಕೆಳಕಂಡ ೮ ಜಿಲ್ಲೆಗಳಲ್ಲಿ ಅಕ್ಷರ ಸೈನ್ಯ ಕಾರ್ಯಕ್ರಮದ ಪ್ರಕಾರ ಈ ವರ್ಷ ಪ್ರಾರಂಭಿಸಲಾಗುವ ವಿವಿಧ ಕೇಂದ್ರಗಳ ವಿವರ ಈ ರೀತಿ ಇದೆ.

ಜಿಲ್ಲೆಗಳು	ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರ	ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರ	ವಯಸ್ಕರ ಶಿಕ್ಷಣ ಕೇಂದ್ರ
೧) ಗುಲ್ಬರ್ಗಾ	೧೦೦	೭೦೦	೮೦೦
೨) ರಾಯಚೂರು	೧೦೦	೭೦೦	೮೦೦
೩) ಬಿಜಾಪುರ	೧೦೦	೭೦೦	೮೦೦
೪) ಬೆಳಗಾಂ	೧೦೦	೭೦೦	೮೦೦
೫) ಕೋಲಾರ	೧೦೦	೭೦೦	೮೦೦
೬) ಚಿತ್ರದುರ್ಗ	೧೦೦	೭೦೦	೮೦೦
೭) ಮಂಡ್ಯ	೧೦೦	೭೦೦	೮೦೦
೮) ಮೈಸೂರು	೧೦೦	೭೦೦	೮೦೦

ಸರ್ಕಾರೇತರ ಸಂಘ ಸಂಸ್ಥೆಗಳೆಂದರೆ ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಸಹಕಾರಿ ಸಂಘ, ಮಹಿಳಾ ಮಂಡಲಿ, ಯುವಕ ಮಂಡಲಿ ಇತ್ಯಾದಿ ಗಳಾಗಬಹುದು. ಸಂಪ್ರದಾಯ ರಹಿತ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ಥಳೀಯರಾಗಿದ್ದು, ವಿದ್ಯಾವಂತರಾಗಿರತಕ್ಕದ್ದು.

ಈ ಕಾರ್ಯಕ್ರಮದ ಮೇಲ್ವಿಚಾರಣೆಯ ವ್ಯವಸ್ಥೆಯನ್ನು ಬಲಪಡಿಸಲು ಮೇಲೆ ಕಾಣಿಸಿದ ೮ ಜಿಲ್ಲೆಗಳ ೮೨ ತಾಲ್ಲೂಕುಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬರಂತೆ ಪದವೀಧರ ಶಾಲಾ ತನಿಖಾಧಿಕಾರಿಗಳ ಮತ್ತು ಒಬ್ಬ

ಪ್ರಥಮ ದರ್ಜೆ ಗುಮಾಸ್ತರ ಮತ್ತು ೫೦೦ ಕ್ಕಿಂತ ಹೆಚ್ಚು ಶಿಕ್ಷಕರು ಇರುವ ಸಹಾಯಕ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಒಬ್ಬ ಸೂಪರಿಂಟೆಂಡೆಂಟ್‌ರ ಹುದ್ದೆಗಳಿಗೆ (೨೫) ಸರ್ಕಾರವು ಮಂಜೂರಾತಿ ನೀಡಿದೆ.

ಈ ಕಾರ್ಯಕ್ರಮದ ಯಶಸ್ಸಿಗೆ ಜಿಲ್ಲಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಯೋಜನಾಧಿಕಾರಿಗಳು, ಮೇಲ್ವಿಚಾರಕರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದಲ್ಲಿರುವ ಇನ್ನಿತರ ಅಭಿವೃದ್ಧಿ ಇಲಾಖಾಧಿಕಾರಿಗಳು ವಿಶೇಷವಾದ ಆಸಕ್ತಿಯನ್ನು ಹೊಂದಿ ದೃಢ ಮನಸ್ಸಿನಿಂದ ಕಾರ್ಯತತ್ಪರರಾಗಬೇಕಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಸಾರ್ವಜನಿಕರು, ಆಯಾಯ ಗ್ರಾಮದ ಪ್ರಮುಖರು ಮುಂದೆ ಬಂದು ಈ ಕಾರ್ಯಕ್ರಮದ ಯಶಸ್ಸಿಗೆ ಕಂಕಣಬದ್ಧರಾಗಬೇಕು.

ಈ ರೀತಿಯಾಗಿ "ಅಕ್ಷರ ಸೈನ್ಯ" ಎಂಬ ಕಾರ್ಯಕ್ರಮದಲ್ಲಿ ೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳನ್ನು, ೬-೧೪ ವರ್ಷ ವಯಸ್ಸಿನ ಮಕ್ಕಳಿಗೆ ಸಂಪ್ರದಾಯ ರಹಿತ ಶಿಕ್ಷಣ ಕೇಂದ್ರಗಳನ್ನು ಮತ್ತು ೧೫ ವರ್ಷ ಮತ್ತು ಮೇಲ್ಪಟ್ಟ ಅನಕ್ಷರಸ್ಥ ವಯಸ್ಕರಿಗೆ ವಯಸ್ಕರ ಶಿಕ್ಷಣ ಕೇಂದ್ರ ಗಳನ್ನು ಪ್ರಾರಂಭಿಸುವ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯ ಕ್ರಮವನ್ನು ಮುಂಬರುವ ನಾಲ್ಕು ವರ್ಷಗಳಲ್ಲಿಯೂ ಕಾರ್ಯಾಚರಣೆಯಲ್ಲಿ ತರಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮವನ್ನು ಸುವ್ಯವಸ್ಥಿತವಾಗಿ ಒಮ್ಮುಖದ ಗತಿಯಿಂದ ಕಾರ್ಯಾಚರಣೆಗೆ ತಂದಲ್ಲಿ ಐದು ವರ್ಷಗಳ ನಂತರ ಕರ್ನಾಟಕ ರಾಜ್ಯದ ಸಾಕ್ಷರತಾ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗುವುದರಲ್ಲಿ ಸಂಶಯವಿಲ್ಲ.

ಕೆ. ಶಾಂತಯ್ಯ

ಇತರರು ನಮ್ಮ ನಂಬಿಕೆಗಳನ್ನು ಸ್ವೀಕರಿಸಬೇಕೆನ್ನುವುದು ಅಸಹನೀಯ ಪರಮಾವಧಿ.

—ಗಾಂಧೀಜಿ

ನಮ್ಮ ಭೂಮಿ-೧

ಇದೊಂದು ಗ್ರಹ : ಸೂರ್ಯ ಒಂದು ನಕ್ಷತ್ರ. ಉಳಿದ ನಕ್ಷತ್ರಗಳಿಗೆ ಹೋಲಿಸಿದಾಗ ಭೂಮಿಗೆ ಅದು ಬಹಳ ಸಮೀಪ. ಆದ್ದರಿಂದಲೇ ಭೂಮಿಯಿಂದ ನೋಡುವಾಗ ಸೂರ್ಯ ಬಿಂಬವಾಗಿ ಬೆಳಗುತ್ತದೆ; ಚುಕ್ಕಿಯಾಗಿ ಮಿನುಗುವುದಿಲ್ಲ. ಸೂರ್ಯನ ಸುತ್ತು ಪರಿಭ್ರಮಿಸುವ ಒಂಬತ್ತು ಗ್ರಹಗಳಲ್ಲಿ ನಮ್ಮ ಭೂಮಿಯೂ ಒಂದು.

ಭೂಮಿ ಸಾಗುವ ಹಾದಿಗೆ ಕಕ್ಷೆ ಎಂದು ಹೆಸರು. ಸೂರ್ಯನ ಸುತ್ತು ಸಾಗುವ ಗಾಣದೆತ್ತಿನ ಜಾಡಿದು. ಇದರದು ದೀರ್ಘವೃತ್ತಾಕಾರ. ಭೂಮಿಯನ್ನು ಸೂರ್ಯ ಸದಾ ಪ್ರಬಲವಾಗಿ ತನ್ನೆಡೆಗೇ ಸೆಳೆಯುತ್ತಿರುವುದರಿಂದ ಭೂಮಿ ಈ ಕಕ್ಷೆಗೇ ಕಟ್ಟುಬಿದ್ದಿದೆ. ಸೂರ್ಯನ ಈ ಸೆಳೆತವನ್ನು ಗುರುತ್ವಾಕರ್ಷಣ ಬಲ ಎಂದು ಹೇಳುತ್ತೇವೆ.

ಸೂರ್ಯ-ಭೂಮಿಗಳ ಸರಾಸರಿ ದೂರ ೧೪,೯೬.೦೦,೦೦೦ ಕಿಲೊಮೀಟರ್. ಬೆಳಕಿನ ವೇಗ ಅತ್ಯಂತ ಹೆಚ್ಚು ಎಂದು ನಿನಗೆ ಗೊತ್ತು. ಬೆಳಕು ಒಂದು ಸೆಕೆಂಡಿನೊಳಗೆ ಭೂಮಿಗೆ (ಭೂಮಿಯ ಪರಿಧಿ ಸುಮಾರು ೪೦ ಸಾವಿರ ಕಿ.ಮೀ.) ಏಳು ಪ್ರದಕ್ಷಿಣೆಗಳನ್ನು ಬರಬಲ್ಲುದು. ಇಂಥ ಬೆಳಕಿಗೂ ಸೂರ್ಯನಿಂದ ಹೊರಟು ಭೂಮಿಯನ್ನು ತಲಪಲು ೮ ಮಿನಿಟುಗಳೇ ಬೇಕಾಗುತ್ತವೆ.

ಈ ಮಹಾದೂರದಲ್ಲಿ ಸೆಕೆಂಡಿಗೆ ಸರಾಸರಿ ೨೯.೮ ಕಿ.ಮೀ. ವೇಗದಿಂದ ಭೂಮಿ ಅಡೆತಡೆ ಇಲ್ಲದೆ ಸೂರ್ಯನ ಸುತ್ತ ಉರುಳುತ್ತ ಓಡುತ್ತಿದೆ. ಭೂಮಿಯ ಬಂಧನವನ್ನು ಹರಿದು, ಭೂಮಿಯನ್ನು ತೊರೆದು ಓಡುವ ರಾಕೆಟ್ ಕೂಡ (ಇದರ ವೇಗ ಗಂಟೆಗೆ ಸುಮಾರು ೪೦ ಸಾವಿರ ಕಿ.ಮೀ. ಅಂದರೆ ಸೆಕೆಂಡಿಗೆ ೧೧ ಕಿ.ಮೀ.) ಭೂಮಿಯ ಓಟದ ಮುಂದೆ ಸೋಲುವುದೇ ಸರಿ!

ಭೂಮಿಗೆ ನಿರಂತರವಾಗಿ ಬೆಳಕು ಮತ್ತು ಕಾವು ಒದಗುತ್ತಿರುವುದು ಆಕಾಶದ ಮಹಾ ದೀಪವಾದ ಸೂರ್ಯನಿಂದ. ಇದರ ಎದುರು ಭೂಮಿ ತನ್ನ ಅಕ್ಷದಲ್ಲಿ ಆವರ್ತಿಸುವುದರಿಂದ ಭೂಮಿಯ ಮೈಗೆ ಬೆಳಕು-ಕತ್ತಲೆ, ಹಗಲು-ಇರುಳು.

ಸೂರ್ಯನಿಂದ ಭೂಗ್ರಹಕ್ಕೆ ಇರುವ ದೂರ ವ್ಯತ್ಯಾಸವಾಗುತ್ತದಷ್ಟೆ? ಭೂಮಿ ಸೂರ್ಯನಿಂದ ಅತಿ ದೂರದಲ್ಲಿ ಇರುವಾಗ ಉತ್ತರಾರ್ಧ ಗೋಲದಲ್ಲಿರುವ ನಮಗೆ ಬೇಸಿಗೆ. ಇದು ವಿಚಿತ್ರ ಎನಿಸುತ್ತದೆ ಅಲ್ಲವೆ? ಕಕ್ಷೆಯ ತಲಕ್ಕೆ

ಭೂಮಿಯ ಆವರ್ತನಾ ಅಕ್ಷವು ಲಂಬವಾಗಿಲ್ಲದೆ ಓರೆಯಾಗಿರುವುದೇ ಇದಕ್ಕೆ ಕಾರಣ. ಭೂಮಿಯ ಉತ್ತರ ಧ್ರುವವು ಸೂರ್ಯನೆಡೆಗೆ ವಾಲಿಕೊಂಡಿರುವಾಗ ಉತ್ತರಾರ್ಧಗೋಲದಲ್ಲಿ ಬೇಸಿಗೆ. ಆರುತಿಂಗಳ ಅನಂತರ ದಕ್ಷಿಣ ಧ್ರುವವು ಸೂರ್ಯನೆಡೆಗೆ ವಾಲುವುದು. ಆಗ ದಕ್ಷಿಣದಲ್ಲಿ ಸೆಕೆಗಾಲ; ಉತ್ತರದಲ್ಲಿ ಚಳಿಗಾಲ. ಭೂಗ್ರಹದ ಮೇಲಿನ ಜೀವನಕ್ಕೆ ಹೆಚ್ಚಿನ ಮೆರುಗನ್ನು ತಂದುದು ಈ ಋತು ಬದಲಾವಣೆ.

ಭೂಮಿಯ ಹುಟ್ಟು: ಸುಮಾರು ೪೬೦-೫೦೦ ಕೋಟಿ ವರ್ಷಗಳ ಹಿಂದೆ ಭೂಮಿ ಹುಟ್ಟಿತೆಂಬುದಾಗಿ ವಿಜ್ಞಾನಿಗಳು ಹೇಳುತ್ತಾರೆ. ಆದರೆ ಈ ಘಟನೆಯನ್ನು ಕಂಡವರು ಯಾರೂ ಇಲ್ಲ. ಆದ್ದರಿಂದ ಸಕಾರಣವೆಂದು ತೋರುವ ಕಲ್ಪನೆಗಳಿಂದ ಆ ಘಟನೆಯನ್ನು ಬಗೆಬಗೆಯಾಗಿ ಕಲ್ಪಿಸಿದ್ದಾರೆ.

ಸೂರ್ಯನ ಸಮೀಪವಾಗಿ ಸಮಗಾತ್ರದ ನಕ್ಷತ್ರವೊಂದು ಹೋದಾಗ ಅವೆರಡರ ಮೇಲಿನಿಂದಲೂ ಉರಿಯುತ್ತಿರುವ ಅನಿಲದ ಭಾರೀ ಅಲೆಗಳೆದ್ದುವು. ಸೂರ್ಯನ ಇಂಥ ಅಲೆಯಿಂದ ತುಣುಕೊಂದು ಬೇರ್ಪಟ್ಟು ಉದ್ದಕ್ಕೆ ಹೊರ ಸಿಡಿಯಿತು. ಅದಕ್ಕೆ ಆಗಂತುಕ ನಕ್ಷತ್ರದ ಹಿಂದೆ ಹೋಗಲಾಗಲಿಲ್ಲ; ಸೂರ್ಯನ ಮೇಲೆ ಬೀಳಲೂ ಆಗಲಿಲ್ಲ. ಅದು ಸೂರ್ಯನ ಸುತ್ತ ಓಲೈಸುವ ಚಾಮರವಾಯಿತು. ಕ್ರಮೇಣ ಅದು ಅಲ್ಲಲ್ಲಿ ಸಾಂದ್ರವಾಗಿ ಹನಿಗಳು ಮೈದಾಳಿದವು. ಇವೇ ಗ್ರಹಗಳು. ಇವುಗಳು ಪೈಕಿ ಮೂರನೆಯ ಹನಿ ನಮ್ಮ ಭೂಮಿ.

ಹೆಚ್ಚು ಸಂಭವನೀಯವಾದ ಬೇರೆ ಒಂದು ರೀತಿಯಲ್ಲಿಯೂ ಭೂಮಿ ಹುಟ್ಟಿರಬಹುದು. ಅಗಾಧವೆಂದು ತೋರುವ ಆಕಾಶ ಖಾಲಿ ಜಾಗವಲ್ಲ. ದೂರ ದೂರ ಇರುವ ನಕ್ಷತ್ರಗಳ ಮಧ್ಯೆ ಹೈಡ್ರೊಜನ್ ಅಣುಗಳೋ ನಶಿಸಿಹೋದ ನಕ್ಷತ್ರದ ಕಣಗಳೋ ಇರುತ್ತವೆ. ಪರಸ್ಪರ ಗುರುತ್ವಾಕರ್ಷಣೆಗೆ ಒಳಪಟ್ಟ ಈ ಅನಿಲ ಮತ್ತು ದೂಳು ಕಣಗಳಿಂದ ಕೋಟ್ಯಂತರ ಕಿ.ಮೀ.ವರೆಗೆ ವಿಸ್ತರಿಸಿದ ಅಗಾಧವಾದ ಮುಗಿಲೊಂದು ಆಕಾಶಗಂಗೆಯಲ್ಲಿ (ರಾತ್ರಿ ಆಕಾಶದಲ್ಲಿ ಬೆಳ್ಳಿ ಹುಡಿ ಚೆಲ್ಲಿದ ಹಾದಿಯಂತೆ ತೋರುವ, ಕೋಟ್ಯಂತರ ನಕ್ಷತ್ರಗಳನ್ನು ಒಳಗೊಂಡ ವ್ಯವಸ್ಥೆ) ರೂಪುಗೊಂಡಿತು. ಮುಗಿಲಿನ ಕಣಗಳು ಪರಸ್ಪರ ಸೆಳೆದು ಹತ್ತಿರಬಂದಂತೆ ಮುಗಿಲು ಸಂಕೋಚಗೊಳ್ಳತೊಡಗಿತು; ಆವರ್ತಿಸತೊಡಗಿತು. ಸಂಕೋಚನದಿಂದ ಮುಗಿಲು ಬಿಸಿಯೂ ಆಯಿತು. ಆವರ್ತಿಸುವ ದೈತ್ಯ ಗಾತ್ರದ ಬಿಲ್ಲೆಯಂತಿದ್ದ ಮುಗಿಲಿನ ಹೊರಭಾಗಗಳು ಕ್ರಮೇಣ ತಣಿಯ

ತೊಡಗಿದವು; ಕೇಂದ್ರ ಭಾಗದಿಂದ (ಇದೇ ಮುಂದೆ ಸೂರ್ಯ) ಬೇರೆಯಾಗ ತೊಡಗಿದವು. ಬೇರೆ ಬೇರೆ ದೂರಗಳಲ್ಲಿ ಬೇರೆಯಾದ ಈ ತುಣುಕುಗಳು ಸಂಚಯಿಸಿ ಉಂಟಾದ ಗ್ರಹಗಳಾದವು. ನಮ್ಮ ಭೂಮಿ ಅವುಗಳಲ್ಲೊಂದು.

ಆದಿಭೂಮಿ : ೪೬೦–೫೦೦ ಕೋಟಿ ವರ್ಷಗಳ ಹಿಂದಿನ ಭೂಮಿ ಖಂಡಿತ ಇಂದಿನ ಆಕಾರದಲ್ಲಿಲ್ಲ. ಆದಿ ಭೂಮಿಯು ತನ್ನ ಗುರುತ್ವಾಕರ್ಷಣೆಯಿಂದ ಸಂಕೋಚನಗೊಂಡಂತೆ ಬಿಸಿಯೇರಿತು. ಆಕಾಶದಲ್ಲಿ ಪಯಣಿಸುತ್ತಿದ್ದ ಉಲ್ಕೆಗಳು ಭೂಮಿಯನ್ನು ಸದಾ ಸಂಘಟಿಸುತ್ತ ಕಾವೇರಿಸುತ್ತಿದ್ದವು. ಭೂಮಿಯಲ್ಲಿ ಸೇರಿಕೊಂಡಿದ್ದ ಯುರೇನಿಯಂ, ಥೋರಿಯಂ ಮೊದಲಾದ ಮೂಲವಸ್ತುಗಳ ಪರಮಾಣುಗಳು ವಿಘಟಿಸುತ್ತ ಶಾಖವನ್ನು ಉಂಟುಮಾಡುತ್ತಿದ್ದವು. ಈ ಎಲ್ಲ ಕಾರಣಗಳಿಂದ ಬಿಸಿಯೇರುತ್ತ ಹೋದ ಭೂಮಿ ಕಾದು ಕರಗಿದ ದ್ರವ ಗೋಲವಾಗಿರಬಹುದು.

ಆಗ ಭಾರವಾದ ಕಬ್ಬಿಣಪ್ರಧಾನ ಪದಾರ್ಥ ಭೂಮಿಯ ಕೇಂದ್ರದೆಡೆ ಸರಿಯಿತು. ಸಿಲಿಕಾನ್, ಅಲ್ಯೂಮಿನಿಯಂ ಮೊದಲಾದ ಹಗುರ ಮೂಲವಸ್ತುಗಳನ್ನು ಒಳಗೊಂಡ ಪದಾರ್ಥ ಮೇಲ್ಗಡೆ ತೇಲಿತು. ಪದಾರ್ಥದ ಈ ಚಲನೆಗಳಿಗೆ ಒಳಗಾಗ ಆದಿಭೂಮಿಯು ಸ್ವಲ್ಪ ಓಲಾಡುತ್ತಿತ್ತು.

ಹೊರಮೈಯಿಂದ ಹಿಡಿದು ಕೇಂದ್ರದ ಕಡೆಗೆ ಭೂಮಿಯ ದ್ರವಗೋಲ ನಿಧಾನವಾಗಿ ತಣಿಯತೊಡಗಿತು. ದ್ರವ ಪದಾರ್ಥ ಘನಪದಾರ್ಥವಾಗ ತೊಡಗಿತು. ಭೂಗೋಲವನ್ನು ಆವರಿಸಿ ತೆಳುವಾದ ಚಿಪ್ಪು ಉಂಟಾಯಿತು. ಒಳಗಿನ ದ್ರವ ಪದಾರ್ಥದಿಂದ ಹೊರ ಬೀಳುತ್ತಿದ್ದ ಅನಿಲ ಮತ್ತು ಆವಿಯ ಒತ್ತಡಕ್ಕೆ ಒಳಗಾಗಿ ಚಿಪ್ಪು ಅಲ್ಲಿ ಇಲ್ಲಿ ಒಡೆಯುತ್ತಿತ್ತು. ಹೀಗೆ ಉಂಟಾದ ಬಿರುಕುಗಳಿಂದ ಶಿಲಾದ್ರವ (ಲಾವ) ಉಕ್ಕಿ ಹರಿಯುತ್ತಿತ್ತು: ಇವು ಗಟ್ಟಿಯಾಗಿ ಅಗ್ನಿಶಿಲೆಗಳ ಪರ್ವತಗಳಾದವು. ಭೂಮಿಯ ಚಿಪ್ಪು ಏಕಪ್ರಕಾರ ನಯವಾಗದೆ ಏರುತಗ್ಗುಗಳು ಉಂಟಾದವು. ಇವುಗಳಿಂದ ಮುಂದಿನ ಭೂಖಂಡ ಮತ್ತು ಕಡಲುಗಳ ಸೀಮಾರೇಖೆ ಸ್ಪಷ್ಟವಾಯಿತು.

ಇಂದಿನ ಕಡಲು, ವಾತಾವರಣಗಳಲ್ಲಿರುವ ನೀರು, ಅನಿಲಗಳು ಅಂದು ಭೂಗರ್ಭದಿಂದ ನುಸುಳಿ ಹೊರ ಬಂದಂಥವು. ಅಷ್ಟು ಅಗಾಧ ಪ್ರಮಾಣದ ನೀರು, ಅನಿಲಗಳು ಭೂಗರ್ಭದಿಂದ ಬಂದಿರಬಹುದೆ ಎಂದು ನಿನಗೆ ಆಶ್ಚರ್ಯವಾಗಬಹುದು. ಆದರೆ ಭೂಮಿಯ ಒಟ್ಟು ದ್ರವ್ಯರಾಶಿಗೆ ಹೋಲಿಸಿದರೆ ವಾತಾವರಣದ ಮತ್ತು ಸಮುದ್ರದ ನೀರಿನ ದ್ರವ್ಯರಾಶಿ ಅತ್ಯಲ್ಪ. ವಾತಾವರಣದ

ದ್ರವ್ಯರಾಶಿ ಭೂಮಿಯ ದ್ರವ್ಯರಾಶಿಯ ಹತ್ತು ಲಕ್ಷದಲ್ಲಿ ಒಂದು ಪಾಲು; ಸಮುದ್ರ ನೀರಿನ ದ್ರವ್ಯರಾಶಿ ನಾಲ್ಕು ಸಾವಿರದಲ್ಲಿ ಒಂದು ಪಾಲು!

ಅನವರತ ಮಳೆ, ಗುಡುಗು, ಮಿಂಚು: ಅಂದು ಭೂಗರ್ಭದಿಂದ ನೀರಾವಿ ಹೊರಬಂದಿರಬಹುದು. ಆದರೆ ನೀರಿನ ಕುದಿಬಿಂದುವಿಗಿಂತಲೂ ಅಧಿಕ ಉಷ್ಣತೆಯಲ್ಲಿದ್ದ ಚಿಪ್ಪಿನಲ್ಲಿ ನೀರು ಮಡುಗಟ್ಟಿ ನಿಂತಿರಲಾರದು. ನೀರೆಲ್ಲ ಉಗಿಯಾಗಿ ಹರಡಿತು. ಚಿಪ್ಪು ತಣಿದಂತೆ ಉಗಿ ಹನಿಗಟ್ಟಿ ಧಾರಾಕಾರ ಮಳೆ ಸುರಿಯತೊಡಗಿತು. ಬಿಸಿಯಾದ ಚಿಪ್ಪನ್ನು ತಲಪಿದೊಡನೆ ಕಾದ ಕಾವಲಿಗೆ ಬಿದ್ದ ನೀರಿನಂತೆ ಮತ್ತೆ ಉಗಿಯಾಯಿತು. ಹಗಲು, ಇರುಳೆಲ್ಲ ಮಿಂಚು, ಗುಡುಗುಗಳ ಅಬ್ಬರ. ಸೂರ್ಯ ರಶ್ಮಿ ನೆಲತಲಪದಷ್ಟು ದಪ್ಪದ ಮೋಡಗಳು. ಕ್ರಮೇಣ ಚಿಪ್ಪು ತಣಿದಾಗ ಮಳೆಯಾಗಿ ಬಿದ್ದ ನೀರು ಒಮ್ಮೆಗೇ ಆವಿಯಾಗದೆ ತಗ್ಗುಗಳನ್ನು ತುಂಬುವಂತಾಯಿತು. ಆದರೂ ದೀರ್ಘಕಾಲ ಕಡಲ ನೀರು ಕುದಿಯುತ್ತಿದ್ದಿರಬಹುದು; ಬಿಸಿಯಾಗಿದ್ದಿರಬಹುದು. ಭೂಮಿಯ ಚಿಪ್ಪು ಇನ್ನೂ ಅಲ್ಲಲ್ಲಿ ಬಿರುಕು ಬಿಡುತ್ತಲೇ ಇತ್ತು; ಲಾವರಸ ಉಕ್ಕಿ ಹರಿದು ಗಟ್ಟಿಯಾಗುತ್ತಲೇ ಇತ್ತು.

ಅಂದಿನ ವಾತಾವರಣವೂ ಇಂದಿನಂತಿರಲಿಲ್ಲ. ಉಗಿತುಂಬಿದ ದಟ್ಟ ವಾತಾವರಣದಲ್ಲಿ ಕಾರ್ಬನ್ ಡಯಾಕ್ಸೈಡ್, ಮಿಥೇನ್‌ನಂತಹ ಅನಿಲಗಳಿದ್ದವೇ ಹೊರತು, ನಮ್ಮ ಪ್ರಾಣಾಧಾರವಾದ ಆಕ್ಸಿಜನ್ ಮುಕ್ತಸ್ಥಿತಿಯಲ್ಲಿ ಇರಲಿಲ್ಲ. ಪರ್ವತ, ಜ್ವಾಲಾಮುಖಿಗಳಷ್ಟೇ ಇದು ಬೋಳುಬೋಳಾದ ನೆಲದ ಮೇಲೆ ಇಂದಿನಂತೆ ಸಸ್ಯಗಳಿರಲಿಲ್ಲ. ಇಂದಿನ ಯಾವ ಜೀವಿಗೂ ಬದುಕಲು ಕಷ್ಟವಾದ ಕಠಿಣ ಸ್ಥಿತಿ ಅಂದಿನ ನೆಲ, ಕಡಲು, ವಾತಾವರಣಗಳದ್ದು.

(ಸಶೇಷ)

ಅಡ್ಯನಡ್ಕ ಕೃಷ್ಣಭಟ್ಟ

ಯಾವ ಗುರಿಯೂ ಇಲ್ಲದವನು ಆಧಾರವೇ ಇಲ್ಲದೇ ಹೆಜ್ಜೆ ಹೆಜ್ಜೆಗೂ ದಾರಿ ತಪ್ಪಬಹುದು.

—ನ್ಯೂಮನ್

ಹಳೆ ಒಡಂಬಡಿಕೆಯ ಅಮೂಲ್ಯ ಭಾಗ: 'ಜೋಬನ ಜೀವನ ಕಥೆ'

'ದೇವರ ನ್ಯಾಯ ದೃಷ್ಟಿಗೆ ಇವನ ಜೀವನ ಕಥೆಯೇ ನಿದರ್ಶನ.'

ಒಂದಾನೊಂದು ಕಾಲದಲ್ಲಿ ಉದ್ಸ ಎಂಬ ಭೂ ಪ್ರದೇಶದಲ್ಲಿ ಜೋಬ ಎಂಬವನೊಬ್ಬ ವಾಸಿಸುತ್ತಿದ್ದನು. ಆತ ಎಲ್ಲ ರೀತಿಯ ಕಳಂಕ, ಅಪ್ರಮಾಣಿಕತೆ, ಇವುಗಳಿಂದೆಲ್ಲ ಮುಕ್ತನಾಗಿದ್ದು, ಪ್ರಾಮಾಣಿಕನೂ ದೈವಭಕ್ತನೂ ಆದವ. ಆತ ಸಂಪೂರ್ಣವಾಗಿ ದುಷ್ಟತೆ–ದುಷ್ಕೃತ್ಯಗಳಿಂದ ದೂರವಾಗಿದ್ದ.

ಹೀಗೆ ತಮಗೆಲ್ಲ ಕಥೆ ಹೇಳುವ ರೀತಿಯಲ್ಲೇ ಈತನ ಕಥೆ ಹಳೆ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿದೆ. ಈ ಕಥೆ ಈ ಹೊತ್ತಿಗೆಯಲ್ಲಿ ನಮಗೆ ದೊರಕುವ 'ಸಾಹಿತ್ಯದ ಒಂದು ಅತ್ಯಮೂಲ್ಯ ಭಾಗ' ಎಂದು ಇಂದಿಗೂ ಪರಿಗಣಿಸಲ್ಪಟ್ಟಿದೆ. ನಿರುದ್ದಿಶ್ಯವಾಗಿ ಒದಗುವ ಸಂಕಟಕ್ಕೆ ಈ ಜಗತ್ತಿನಲ್ಲೊಂದು ಸ್ಥಾನವಿದೆ, ಎನ್ನುವುದು ನಮ್ಮ ಸಾಮಾನ್ಯ ಬುದ್ಧಿಗೆ ಅವಿವೇಕದ್ದಾಗಿ ಕಾಣುತ್ತದೆ.

ಈ ಜೋಬನ ಕಥೆ, ಅದರ ಭಾಷಾ ಸೌಂದರ್ಯದಿಂದ, ಅದರ ಭಾವನಾವೇಶದಿಂದ ಮತ್ತು ಅದರ ಅನಿರೀಕ್ಷಿತ ಅಂತ್ಯದಿಂದ ನಮ್ಮನ್ನು ಆಕರ್ಷಿಸುತ್ತದೆ. ಇದು ನಮ್ಮ ಜಗತ್ತಿನ ಸಾಹಿತ್ಯ ಪ್ರಪಂಚದಲ್ಲೊಂದು ಅತ್ಯುತ್ತಮ ಕೃತಿ ಎಂದು ಪರಿಗಣಿಸಲ್ಪಟ್ಟಿದೆ. ಇದಕ್ಕಿಂತ ಮಿಗಿಲಾಗಿ, ಈ ಜೋಬನ ಕಥೆಯಲ್ಲಡಗಿರುವ ಗೂಢಾರ್ಥ, ಅದು ದೇವರ ನ್ಯಾಯದೃಷ್ಟಿಯನ್ನು ಪ್ರಶ್ನಿಸುವುದರ ಮೂಲಕ ಅನೇಕ ತಲೆಮಾರಿನಿಂದ ಓದುಗರ ತಲೆಯನ್ನು ಕೆಡಿಸಿದೆ.

ಪುರಾತನ ಜಾನಪದ ಕಥೆಯೊಂದು ಇಂದಿನ ಜೋಬನ ಜೀವನ ಕಥೆಗೆ ಶಿಲ್ಪಸೂತ್ರ. ಆ ಹಿಂದಿನ ಕಥೆಯು ಎಂದು ಜನಿಸಿದ್ದು ಎಂಬುದಕ್ಕೆ ತಕ್ಕ ಪುರಾವೆಗಳಿಲ್ಲವಾದರೂ ಬಹುಶಃ ಅದು ಕ್ರಿ.ಪೂ. ೫ ಅಥವಾ ೬ನೇ ಶತಮಾನಕ್ಕೆ ಸೇರಿತ್ತೆನ್ನಬಹುದು. ಇದರ ಕರ್ತೃ ಬಹುಶಃ ಸಮೃದ್ಧವಾದ ಪ್ರಾಪಂಚಿಕ ಜ್ಞಾನವನ್ನು ಹೊಂದಿದ್ದು ಹೀಬ್ರೂ ಜನಾಂಗಕ್ಕೆ ಸೇರಿದವನಾಗಿರಬೇಕು. ಅವನೇ ಸ್ವತಃ ದುಃಖವನ್ನು ಅನುಭವಿಸಿ ಅರಿತಿದ್ದು ಆ ಮೂಲಕ ಮನುಷ್ಯನ

೧೯೫೭ರ ಸೆಪ್ಟೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟಗೊಂಡ ಅರ್ನೆಸ್ಟ ಹಾಸ್ಸರ್ ಅವರ "ದಿ ಬುಕ್ ಆಫ್ ಜೋಬ ಎ ಜೆಮ್ ಆಫ್ ದ ಓಲ್ಡ್ ಟೆಸ್ಟಮೆಂಟ್" ಲೇಖನದ ಅನುವಾದ.

ಆತ್ಮದ ಕತ್ತಲ ರಾಜ್ಯಕ್ಕೆ ಹಣಕುವ ಪ್ರಯತ್ನ ಮಾಡಿರಬೇಕು. ಜೊತೆಗೆ ಪ್ರಕೃತಿಯನ್ನು ಸೂಕ್ಷ್ಮವಾಗಿ ಅರಿತವನಾಗಿರಬೇಕು.

ಪೈಶಾಚಿಕ ಅಳಿವು: ಮೊಟ್ಟ ಮೊದಲು ನಾವು ಈತನನ್ನು ಭೆಟ್ಟಿಯಾದಾಗ ಈತ ದೊಡ್ಡ ಕುಟುಂಬವೊಂದರ ಯಜಮಾನ. ಅವನ ಐಶ್ವರ್ಯವನ್ನು ಆತ ಹೊಂದಿದ್ದ ಭೂಮಿ ಮತ್ತು ಜನಜಂಗುಳಿಯ ಆಧಾರದ ಮೇಲೆ ಅಳೆಯಬಹುದಾಗಿತ್ತು. ಅವನು ಹತ್ತು ಜನ ಮಕ್ಕಳನ್ನು ಮತ್ತು ಹಲವಾರು ಸೇವಕರನ್ನು ಹೊಂದಿದ್ದ. ಆತ ತನ್ನ ತೆರೆದ ಹಸ್ತಕ್ಕೆ ಹೆಸರುವಾಸಿಯಾಗಿದ್ದ. ಜೊತೆಗೆ ಜ್ಞಾನವಂತನೂ ಆಗಿದ್ದನು. ದೇವರು ಆತನ ನಡವಳಿಕೆಯನ್ನು ಅವಲೋಕಿಸುತ್ತಿದ್ದ. ಅನಂತರ ಒಂದು ದುರ್ದಿನ ಆತನ ಸಂಭ್ರಮದ ಬದುಕು ನುಚ್ಚುನೂರಾಯಿತು.

ಆ ದಿನ ದೇವಲೋಕದಲ್ಲಿ ಏನಾಯಿತು ಎಂಬುದನ್ನು ಕಥೆ ನಮಗೆ ಹೀಗೆ ಹೇಳುತ್ತೆ. ಅಂದು ದೇವರು ಸ್ವರ್ಗದಲ್ಲಿ ತನ್ನ ಸಭೆಯನ್ನು ಸೇರಿಸಿದ. ಸೈತಾನನಿಗೆ ಮಾತನಾಡುವ ಸರದಿ ಬಂದಾಗ ಆತ ಹೀಗೆ ಹೇಳುತ್ತಾನೆ. "ಜೋಬನು ನ್ಯಾಯವಂತನಾಗಿದ್ದಾನೆ, ಯಾಕೆಂದರೆ ಆತ ಸಿರಿವಂತನಾಗಿದ್ದಾನೆ. ಒಮ್ಮೆ ದೇವರು ತನ್ನ ಕೃಪಾ ದೃಷ್ಟಿಯನ್ನು ಆತನಿಂದ ದೂರಗೊಳಿಸಿದರೆ ಮತ್ತು ಆತನ ಎಲ್ಲಾ ಸಂಪತ್ತನ್ನೂ ನಾಶಗೊಳಿಸಿದರೆ, ಆತ ದೇವರ ಮುಖಕ್ಕೆ ಉಗುಳುತ್ತಾನೆ."

ದೇವರಿಗೆ ಜೋಬನ ಅಚಲವಾದ ದೈವಶ್ರದ್ಧೆ ತಿಳಿದಿದ್ದರಿಂದ, ಆತ ಸೈತಾನನಿಗೆ ಜೋಬ ಹೊಂದಿದ್ದ ಎಲ್ಲವನ್ನೂ ದೋಚಿಕೊಳ್ಳಲು ಅನುಜ್ಞೆ ನೀಡುತ್ತಾನೆ. ಇದರ ಪರಿಣಾಮವಾಗಿ ಜೋಬನ ಗಂಡು ಮತ್ತು ಹೆಣ್ಣು ಮಕ್ಕಳೆಲ್ಲ ಆತನ ಮನೆಯ ಮೇಲೆರಗಿದ ಚಂಡಮಾರುತಕ್ಕೆ ಬಲಿಯಾಗಿ ಸಾವನ್ನಪ್ಪುತ್ತಾರೆ. ಸಾಮೂಹಿಕ ಹತ್ಯೆಯಿಂದಾಗಿ ಆತ ಹೊಂದಿದ್ದ ಸೇವಕರು ಮತ್ತು ಎತ್ತುಗಳೆಲ್ಲ ಅವನಿಂದ ದೂರವಾಗುತ್ತವೆ. ಅವನ ಕೊಟ್ಟಿಗೆಗೆ ಸಿಡಿಲೆರಗುತ್ತದೆ. ಅದಕ್ಕೆಲ್ಲ ಜೋಬನ ನಿಸ್ಪೃಹ ಪ್ರತಿಕ್ರಿಯೆ ಎಂದರೆ "ದೇವರು ಕೊಟ್ಟವನು. ಅವನು ಕೊಟ್ಟದ್ದನ್ನು ಅವನೇ ಒಯ್ದನು ಕೃಪೆ ಮಾಡುವುದಕ್ಕೆ ದೇವರೆಂಬ ಹೆಸರು."

ಅನಂತರ ಸೈತಾನನು ಜೋಬನ ಆರೋಗ್ಯದ ಮೇಲೂ ಆಕ್ರಮಣ ನಡೆಸಲು ದೇವರ ಅನುಜ್ಞೆಯನ್ನು ಪಡೆಯುತ್ತಾನೆ. ಕಾರಣ ಜೋಬನ ದೇಹದ ಚರ್ಮ, ಪಾದದಿಂದ ಹಿಡಿದು ತಲೆಯ ತನಕ ಕೊಳೆಯಲಾರಂಭಿಸುವುದರ ಮೂಲಕ ಆತ ಸಹಿಸಲಸಾಧ್ಯವಾದ ನೋವಿನಿಂದ ಬಳಲುತ್ತಾನೆ. ಇದಾದ ಮೇಲೆ ತನ್ನ ಸಮಾಜದಿಂದ ಬಹಿಷ್ಕರಿಸಲ್ಪಟ್ಟವನಾಗಿ ನಗರದ ಹೊರಗೆ ಕುಷ್ಠರೋಗಿಗಳು

ಮತ್ತು ಇತರ ಬಹಿಷ್ಕೃತರೊಂದಿಗೆ ಕೊಳಚೆ ಪ್ರದೇಶದಲ್ಲಿ ಬದುಕಲು ಪ್ರಾರಂಭಿಸುತ್ತಾನೆ. ಆತ ಈಗ ಕೇವಲ ಮೂಳೆಯ ಹಂದರವಾಗುತ್ತಾನೆ. ಆತನ ಪತ್ನಿ ಸಹ ಆತನಿಗೆ ಹೀಗೆ ಸಲಹೆ ನೀಡುತ್ತಾಳೆ, "ದೇವರನ್ನು ದೂಷಿಸು ಮತ್ತು ಮರಣವನ್ನಪ್ಪು". ಆದರೆ ಜೋಬನೆಂದೂ ದೇವರನ್ನು ದೂಷಿಸುವುದಿಲ್ಲ.

ಅನಂತರವೇ ಆತನ ಬದುಕಿನ ನೈಜ ನಾಟಕ ರಂಗದ ಮೇಲೆ ಕಾಣಿಸಿಕೊಳ್ಳುತ್ತದೆ. ಎಲಿಫಾಜ್, ಬಿಲ್‌ದಾದ್ ಮತ್ತು ಜೋಫಾರ್ ಎಂಬ ಮೂವರು ಆತನ ಮಿತ್ರರು, ಆತನನ್ನು ಸಾಂತ್ವನಿಸಲು ಅಲ್ಲಿಗೆ ಬರುತ್ತಾರೆ. ಒಂದು ವಾರದ ಕಾಲ ಅವರು ಆತನೊಂದಿಗೆ ಮೌನವಾಗಿಯೇ ಕುಳಿತಿರುತ್ತಾರೆ. ಜೋಬನೇ ಮೊದಲು ಮಾತನ್ನು ಪ್ರಾರಂಭಿಸುತ್ತಾನೆ. ಅನಂತರ ಇವರ ಮಾತುಕತೆ ನಾಟಕೀಯ ತಿರುವನ್ನು ಪಡೆದುಕೊಳ್ಳುತ್ತದೆ.

ಆ ಮೂವರು ಗೆಳೆಯರೂ ಒಂದೇ ತೆರನಾದ ಪುರಾತನ ಪ್ರಪಂಚದಲ್ಲಿದ್ದು ಒಂದು ರೀತಿಯ ಪ್ರತೀಕಾರ ಮನೋಭಾವದಲ್ಲೂ ಇರುತ್ತಾರೆ. ಅವರು ಹೇಳುತ್ತಾರೆ "ನೀನು ಪಾಪಿ, ನೀನು ಸುಸ್ಪಷ್ಟವಾಗಿ ಪಾಪಕೃತ್ಯವನ್ನೆಸಗಿದ್ದೀಯಾ. ನೀನೊಬ್ಬ ಕೊಲೆಪಾತಕ." ಅವರ ದೃಷ್ಟಿಯಲ್ಲಿ ಜೋಬನು ಪಾಪಿಷ್ಠ. ಆದರೆ ಜೋಬನು ತನ್ನ ಆತ್ಮದ ಪಾವಿತ್ರ್ಯ ಅರಿತಿದ್ದು ತಾನೊಬ್ಬ ಮುಗ್ಧ ಎಂಬುದನ್ನು ಗಟ್ಟಿಯಾಗಿ ನಂಬಿಕೊಂಡಿರುತ್ತಾನೆ. ಆತ ತನ್ನೆಲ್ಲ ಕಷ್ಟಗಳಿಗೆ ಕಾರಣಗಳನ್ನು ಹುಡುಕಲು ಪ್ರಾರಂಭಿಸುತ್ತಾನೆ. ಆತನಿಗೆ ಏನೊಂದೂ ತೋಚುವುದಿಲ್ಲ. ದೇವರು ಮತ್ತು ಸೈತಾನರ ನಡುವೆ ನಡೆದ ಮಾತುಕತೆ ಇಲ್ಲಿ ತಿಳಿದಿರುವುದಿಲ್ಲ. ಸ್ವರ್ಗದಲ್ಲಿ ನಾಂದಿಯಾದ ಈತನ ಕಥೆ ಯಾವುದೇ ಫಲವನ್ನು ನೀಡದೆ ಧಾರ್ಮಿಕ ನಂಬುಗೆಯ ಕಡೆ ತಿರುಗುತ್ತದೆ.

ಸುಖವಿಲ್ಲದ ಸಮಾಧಾನ ಪಡಿಸುವವರು: ವಿಪರೀತ ಯಾತನೆಯನ್ನು ಅನುಭವಿಸುತ್ತಿರುವ ಜೋಬನು ರಾತ್ರಿಯ ಕುರಿತು ತನ್ನ ಕಲ್ಪನೆಯನ್ನೇ ದ್ವೇಷಿಸುತ್ತಾನೆ. ತಾನು ಹುಟ್ಟಿದ ದಿನವನ್ನೇ ಶಪಿಸುತ್ತಾನೆ. ಆತ ಸಾವನ್ನು ಬಯಸಲು ಪ್ರಾರಂಭಿಸುತ್ತಾನೆ. ಎಲಿಫಾಜ್ ಪ್ರಶ್ನಿಸುತ್ತಾನೆ. ಮುಗ್ಧರನ್ನು ಯಾರು ತೊಂದರೆಗೊಳಪಡಿಸುತ್ತಾರೆ? ಅವನೇ ಮುಂದುವರಿದು ಹೇಳುತ್ತಾನೆ. ಜೋಬನು ತಾನೆಸಗಿದ ಪಾಪಕೃತ್ಯಕ್ಕೆ ಪ್ರಾಯಶ್ಚಿತ್ತಕ್ಕೆ ಪಶ್ಚಾತ್ತಾಪ ಪಟ್ಟು ಅವುಗಳನ್ನು ದೇವರಿಗೆ ವರದಿಮಾಡಿಕೊಂಡ ಪಕ್ಷದಲ್ಲಿ ಪುನಃ ಸಿರಿವಂತನಾಗಬಹುದು. ದೇವರು ಪುನಃ ಮನಸ್ಸು ಮಾಡಿದರೆ ಈತ ಸಂತೋಷದಿಂದ ಇರಬಲ್ಲ". ಜೋಬನ ಕೃಶವಾದ ದೇಹದಲ್ಲಿ ಸಶಕ್ತವಾದ ಆತ್ಮವಿಶ್ವಾಸ ತುಂಬಿದ್ದು ಆತ 'ಅಂತಹ

ಸಲಹೆಯನ್ನು ಖಡಾಖಂಡಿತವಾಗಿ ತಿರಸ್ಕರಿಸುತ್ತಾನೆ.

ತಕ್ಷಣ ಮಾತು ಕಾವೇರುತ್ತದೆ. "ಜೋಬನು ಅನ್ಯಾಯವನ್ನು ಎಸಗಿದವನಾಗಿರಲೇಬೇಕು" ಎಂದು ಬಿಲ್ಡಾಡ್ ಹೇಳುತ್ತಾನೆ. ಆತನೇ ಮುಂದುವರಿದು "ದೇವರೆದುರು ತಪ್ಪನ್ನು ಒಪ್ಪಿಕೋ; ನೀನು ಒಂದೊಮ್ಮೆ ಸರಳ ಮತ್ತು ಪ್ರಾಮಾಣಿಕನಾಗಿದ್ದಲ್ಲಿ ದೇವರು ಖಂಡಿತವಾಗಿ ನಿನ್ನನ್ನು ರಕ್ಷಿಸುತ್ತಾನೆ.... ತಿಳಿದಿರು. ದೇವರು ಖಂಡಿತವಾಗಿ ಅಪರಾಧ ರಹಿತರಾದವನ್ನು ಎಂದಿಗೂ ತಿರಸ್ಕರಿಸುವುದಿಲ್ಲ."ಆದರೆ ಈ ಮಾತಿಗೆ ಉತ್ತರವಾಗಿ ಜೋಬನು ಸರ್ವಶಕ್ತನಾದ ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾನೆ."

ಈ ನಾಲ್ವರು ನಡೆಸಿದ ಮಾತುಕತೆ ಯಾವುದೇ ತೆರನಾದ ತೂಕವುಳ್ಳದ್ದಾಗಿ ಕಾಣುವುದಿಲ್ಲ. ಒಟ್ಟಾರೆ ಇದು ದೇವರು ತನ್ನ ಸಂಗಾತಿಗಳೊಂದಿಗೆ ನಡೆಸಿದ ಚರ್ಚೆಗಿಂತ ಹೆಚ್ಚು ಭಿನ್ನವಾದದ್ದಾಗಿರುವುದಿಲ್ಲ. "ತಲೆ ಬಾಗು ಮತ್ತು ಸಿರಿವಂತನಾಗು; ತಲೆ ಬಾಗದಿರು ಮತ್ತು ತೊಂದರೆಯನ್ನು ಅನುಭವಿಸು" ಜೋಬನು ಸಹ ಈ ತತ್ವವನ್ನು ಮೈಗೂಡಿಸಿಕೊಂಡವನು. ಇದೊಂದೇ ಇವನ ಮತ್ತು ಇವನ ಸಂಗಾತಿಗಳ ನಡುವೆ ಇದ್ದ ಸಾಮಾನ್ಯ ಅಂಶ. ಆದರೆ ನೈಜವಾಗಿ ಈ ಸೂತ್ರ ಜೋಬನಿಗೆ ಅನ್ವಯವಾಗುವುದೇ ಇಲ್ಲ.

ಯಾರು ದುಷ್ಟ ಶಕ್ತಿಗಳಿಂದ ದೂರವಾಗಿರುತ್ತಾರೋ ಅವರೂ ಸಹ ವ್ಯಥೆ ಮತ್ತು ಸಂಕಷ್ಟಗಳಿಗೆ ಒಳಗಾಗುತ್ತಾರೆ, ಹಾಗಾದರೆ ದೇವರು ಯಾವಾಗಲೂ ನ್ಯಾಯ ಪಕ್ಷಪಾತಿಯೇ? ಆತ ಜಗನ್ನಿಯಾಮಕನು ಆತ ಅಪರಾಧರಹಿತ ಮತ್ತು ಅನ್ಯಾಯಿಗಳಿಬ್ಬರನ್ನೂ ನಾಶಮಾಡುತ್ತಾನಲ್ಲವೇ?

ಜೋಬನನ್ನು ಕಾಣಲು ಬಂದವರು ತಮ್ಮ ಕಿವಿಗಳನ್ನೇ ನಂಬಲಾರದವರಾಗುತ್ತಾರೆ. ಜೋಬನು ದೇವರ ನಿಷ್ಪಕ್ಷಪಾತ ದೃಷ್ಟಿಯನ್ನೇ ಶಂಕಿಸುತ್ತಾನೆ! ದೇವ ದೂಷಣೆ! ಅವರಲ್ಲಿ ಎಲ್ಲರಿಗಿಂತ ಕಿರಿಯವನಾದ ಜೋಫಾರ್‌ನು ಜೋಬನನ್ನು ಹೀಗೆ ಹೀಗಳೆಯುತ್ತಾನೆ. " ಆತ (ಜೋಬ) ಮಾತಿನ ಮಲ್ಲ ಮತ್ತು ಸುಳ್ಳುಗಾರ; ಆತ ತನಗೆ ತಾನೇ ದೇವರ ಕಣ್ಣಲ್ಲಿ ಪ್ರಾಮಾಣಿಕನೆಂದುಕೊಳ್ಳುತ್ತಾನೆ. ಆದರೆ ವಾಸ್ತವಿಕವಾಗಿ ಆತ ಅಪರಾಧಿ, ಅವನಿಗೆ ದೊರೆತ ಶಿಕ್ಷೆ ನಿಜಕ್ಕೂ ಅವನಿಗೆ ದೊರೆಯಬೇಕಾದದ್ದಕ್ಕೆ ಹೋಲಿಸಿದರೆ ಬಲು ಕಡಿಮೆ!"

ಈ ಹೊತ್ತಿಗೆ ಜೋಬನ ಮಾತುಗಳಲ್ಲಿಡಗಿದ್ದ ಸಹನೆ ಕಟ್ಟೆಯೊಡೆಯುತ್ತದೆ. ಅವನು ತನ್ನ ಆಕ್ಕ ಗೆಳೆಯರೆಡೆಗೆ ತಿರುಗಿ ಕಹಿಯಾಗಿ ಹೇಳುತ್ತಾನೆ. "ನೀವೆಲ್ಲ ಅಪವಾದರಹಿತರೆಂಬುದರಲ್ಲಿ ಸಂಶಯವೇ ಇಲ್ಲ. ಜ್ಞಾನ ಎನ್ನುವುದು

ನಿನ್ನೊಂದಿಗೇ ಸಾಯುತ್ತದೆ. ಆದರೆ ನೀವದನ್ನು ಹೊಂದಿರಬೇಕು" ಎನ್ನುತ್ತಾನೆ. ಅನಂತರ ಮುಂದುವರೆದು, "ಆದರೆ ನಾನು ನಿಮ್ಮಷ್ಟೇ ಉತ್ತಮವಾಗಿ ತಿಳಿದು ಕೊಂಡಿದ್ದೇನೆ. ನಾನು ನಿಮಗಿಂತ ಕೀಳಾಗಿ ಇಲ್ಲ....ನೀವೆಲ್ಲ ತೊಂದರೆ ಕೊಡು ವುದರ ಮೂಲಕ ಸಮಾಧಾನ ಪಡಿಸುವವರು....ನೀವೆಷ್ಟು ಕಾಲ ನನ್ನನ್ನು ಹಿಂಸಿಸಬಲ್ಲಿರಿ ಮತ್ತು ನಿಮ್ಮ ಮಾತುಗಳ ಮೂಲಕ ಛಿದ್ರಗೊಳಿಸಬಲ್ಲಿರಿ?"

ಅವರಲ್ಲೆಲ್ಲ ಹೆಚ್ಚು ವಯಸ್ಸಾದ ಎಲಿಫಾಜನು, ಜೋಬನ ತಪ್ಪುಗಳನ್ನು ಪಟ್ಟಿಮಾಡುವುದರಲ್ಲೇ ಒಂದು ಬಗೆಯ ಖುಷಿಯನ್ನು ಅನುಭವಿಸುತ್ತಾನೆ. ಇದಕ್ಕೆ ಜೋಬನು ಸರಳವಾಗಿ ಹೇಳುತ್ತಾನೆ "ನಾನು ಬಡತನದಿಂದ ಹಾಹಾಕಾರ ಮಾಡುತ್ತಿರುವವರಿಗೆ ಮತ್ತು ತಂದೆ-ತಾಯಿ ಇಲ್ಲದವರಿಗೆ ಸಹಾಯಮಾಡಿದೆ ....ನಾನು ಕಣ್ಣಿಲ್ಲದವರಿಗೆ ಕಣ್ಣಾದೆ, ಕುಂಟರಿಗೆ ಕಾಲಾದೆ....ನಾನು ದುರ್ಬಲ ರಿಗೆ ತಂದೆಯಾಗಿದ್ದೆ."

ಜೋಬನ ಮನಸ್ಸು ಸ್ವಚ್ಛವಾಗಿಯೇ ಇರುತ್ತದೆ. "ಒಂದೊಮ್ಮೆ ತಾನು ಉತ್ತು-ಬಿತ್ತಿದ ನೆಲ ನ್ಯಾಯವಾಗಿ ತನ್ನದಾಗಿಲ್ಲವಾಗಿದ್ದರೆ ಮತ್ತು ಅದರಲ್ಲಿ ಬೆಳೆದ ಬೆಳೆಯನ್ನು ಯಾರಿಗೂ ನೀಡದೆ ಅನುಭವಿಸಿದ್ದರೆ ಅಥವಾ ಅದರ ನಿಜವಾದ ಮಾಲಿಕನಿಗೆ ಅನ್ಯಾಯವೆಸಗಿದ್ದರೆ, ಅಲ್ಲಿ ಗೋಧಿಯ ಬದಲು ಮುಳ್ಳು-ಕಳ್ಳಿಗಳೇ ಬೆಳೆಯಲಿ. ಬಾರ್ಲಿಗೆ ಬದಲಾಗಿ ಕಳೆಯೇ ಹುಟ್ಟಿಕೊಳ್ಳಲಿ! ಎಂದು ಹೆದರಿಕೆ ಹುಟ್ಟಿಸುವ ಪ್ರತಿಜ್ಞೆಗೈದು ಜೋಬನು ಮೌನಿಯಾಗುತ್ತಾನೆ.

ಈ ರೀತಿಯಲ್ಲಿ ಮಾತುಗಳ ಚಕಮಕಿ ಹೊತ್ತಿರುವಾಗ, ಅಲ್ಲದೆ ಅನೇಕ ಆಸಕ್ತರು ಬಂದು ಸೇರುತ್ತಾರೆ—ಅಲೆಮಾರಿಗಳು, ಭಿಕ್ಷುಕರು, ನೀರು ಸಾಗಿಸು ವವರು, ಒಂಟೆ ಸವಾರರು ಇತ್ಯಾದಿ. ಪ್ರೇಕ್ಷಕರ ನಡುವಿದ್ದ ಒಬ್ಬ ದುರಹಂಕಾರಿ ಹುಡುಗ, ಎಲಿಹು ಈಗ ಮುಂದೆ ಬರುತ್ತಾನೆ ಮತ್ತು ಅಲ್ಲಿ ನೆರೆದಿದ್ದವರಿಗೆ ಸರಿಯಾಗಿ ಹೇಳುತ್ತಾನೆ "ಇಲ್ಲಿ ಸೇರಿದ ನೀವಾರೂ ಜೋಬನ ಮನಸ್ಸನ್ನು ಬದಲಿಸಲಾರಿರಿ" ಅನಂತರ ಎಲಿಹುವೇ ಮುಂದುವರೆದು ಜೋಬನ ಮೇಲೆ ಇನ್ನಷ್ಟು ಅಪವಾದಗಳನ್ನು ಹೇರುತ್ತಾನೆ. "ಈತ ತನ್ನ ತಪ್ಪಿಗೆ ತನ್ನ ಹಠಮಾರಿ ತನ ಮತ್ತು ಪ್ರತಿಭಟನೆಯನ್ನು ಸೇರಿಸಿದ್ದಾನೆ....ಮತ್ತು ದೇವರ ದೂಷಣೆ ಯನ್ನು ಈ ಮೂಲಕ ಹೆಚ್ಚಿಸಿದ್ದಾನೆ."

ಆ ದಿನ ಅಂತ್ಯಗೊಂಡಿತು. ಒಂದು ಮಾರುತ ಬೀಸಿತು. ಅವನನ್ನು ಭೇಟಿ ಮಾಡಲು ಬಂದವರು ಮತ್ತು ಅಲ್ಲಿ ಪ್ರೇಕ್ಷಕರಾಗಿ ಸೇರಿದವರು ಅಲ್ಲಿಂದ ಚದುರಲು ಪ್ರಾರಂಭಿಸುತ್ತಾರೆ. ಇಂತಹ ಶಾಂತ ಸ್ಥಿತಿಯಲ್ಲಿಯೇ ಜೋಬನಿಂದ

ನಿರೀಕ್ಷಿಸಲ್ಪಡದಿದ್ದ ಘಟನೆ ಸಂಭವಿಸಿತು. ಸುಂಟರಗಾಳಿಯಿಂದ ಮುಕ್ತವಾಗಿ ಜೋಬನನ್ನು ಕುರಿತು ಭಗವಂತ ಅತ್ಯಂತ ಉಜ್ವಲವಾದ ಕಾವ್ಯ ವಾಚನದಂತೆ ಹೀಗೆ ಹೇಳಿದ.

ಇದು ಜೋಬನು ಆಶಿಸಿದ್ದ ಸಮರ್ಥನೆಯಾಗಿರಲಿಲ್ಲ. ಅವನ ತಪ್ಪು–ಒಪ್ಪುಗಳ ಮೇಲೆ ಒಂದು ಮಾತನ್ನೂ ಹೇಳಲಿಲ್ಲ. ಬದಲಿಗೆ ಭಗವಂತನೇ ಜೋಬನಲ್ಲಿ ಈ ರೀತಿಯಾಗಿ ಪ್ರಶ್ನೆಗಳನ್ನು ಕೇಳುತ್ತಾನೆ. ಇದೇನು ಅರ್ಥವಿಲ್ಲದ ಶಬ್ದಗಳ ಸಮಾಲೋಚನೆ, ಜ್ಞಾನವಿಲ್ಲದ್ದಲ್ಲವೇ? ನೀ ನನಗೆ ಉತ್ತರಿಸು. ಈ ಭೂಮಿಗೆ ಅಡಿಗಲ್ಲನ್ನು ಹಾಕಿದಾಗ ನೀನು ಎಲ್ಲಿದ್ದೆ? ಬೆಳಗಿನ ನಕ್ಷತ್ರಗಳು ಒಟ್ಟಾಗಿ ಒಂದು ಸರಪಳಿಯಂತಾದಾಗ ಮತ್ತು ದೇವರ ಎಲ್ಲಿ ಮಕ್ಕಳೂ ಹರ್ಷದಿಂದ ಕೇಕೆಹಾಕುತ್ತಿರುವಾಗ ಆ ಜಡಿಗೆ ಈ ಕಲ್ಲನ್ನು ಹಾಕಿದವರು ಯಾರು?" ನೀನು ಈ ಭೂಮಿಯ ವ್ಯಾಪ್ತಿಯನ್ನು ನೋಡಿದ್ದೀಯಾ? ನಿನಗೆ ಇದೆಲ್ಲ ಗೊತ್ತಿದ್ದರೆ ತಿಳಿಸು.

ಹೀಗೆ ಸೃಷ್ಟಿಕರ್ತೃನ ಸಂವಾದ ನಡೆದ ತರುವಾಯ ಜೋಬನು ತನಗೊದಗಿದ ಕಷ್ಟಗಳಿಗೆ ಕಾರಣವನ್ನು ಕೊಡಲಿಲ್ಲ. ಆದರೆ ಅದರ ಬದಲಾಗಿ, ಇದರಿಂದ ಆತನಿಗೆ ತನ್ನ ಆತ್ಮ ಪರಿಶೋಧನೆಮಾಡಿಕೊಳ್ಳಲು ಸಾಧ್ಯವಾಯಿತು ಮತ್ತು ಆ ಕಾರಣದಿಂದ ಸೃಷ್ಟಿಕರ್ತನ ಅಗಣ್ಯವಾದ ಶಕ್ತಿಯನ್ನು ಅರಿಯುವಂತವನಾಗುತ್ತಾನೆ. ತಮ್ಮ ಬದುಕಿನ ನೌಕೆ ನುಚ್ಚುನೂರಾದ ಅನೇಕ ಪ್ರಮಾಣಿಕವಾಗಿ ಬೈಬಲ್ ಓದುವವರು ಕೇಳಬಹುದಾದ ಸರಳ ಪ್ರಶ್ನೆ "ಯಾಕೆ ಜೋಬನು ಸಂಕಷ್ಟಕ್ಕೊಳಗಾದನು?" ಎಂಬುದಕ್ಕೆ ಸಮರ್ಥನೆಯ ಅನುಪಸ್ಥಿತಿಯಲ್ಲಿ ಮಾತ್ರ ನಾವು ಸತ್ಯವನ್ನು ಗ್ರಹಿಸಬಹುದು. ಅದನ್ನು ತಿಳಿಸುವುದರ ಮೂಲಕವೇ ಈ ಪುಸ್ತಕ, ಮನುಷ್ಯನ ಧಾರ್ಮಿಕ ಭಾವನೆಯ ಬೆಳವಣಿಗೆಯನ್ನು ಗುರುತಿಸುವುದರಲ್ಲಿ ಒಂದು ಬಾಂದುಕಲ್ಲು. ಜೋಬನಿಗೆ ಇದು ಅರ್ಥವಾಯಿತು. ದೇವರು ನಮ್ಮೆಲ್ಲ ತಪ್ಪು–ಒಪ್ಪುಗಳ ಲೆಕ್ಕ ಇಡಬೇಕೆಂದು ಬಯಸುವುದಾಗಲೀ ಅನಂತರ ಅದನ್ನು ವಿವರಿಸುವಂತೆ ಕೇಳಿಕೊಳ್ಳುವುದಾಗಲೀ ಸರಿಯಲ್ಲ. ಆ ಕುರಿತು ನಮ್ಮ ಮತ್ತು ದೇವರ ಮಧ್ಯೆ ಯಾವುದೇ ಒಡಂಬಡಿಕೆ ನಡೆದಿಲ್ಲ. ಆತನ ಜ್ಞಾನಕ್ಕೆ ಆಳವೆಂಬುದೇ ಇಲ್ಲ ಮತ್ತು ಆತನ ನಿರ್ಣಯಗಳು ನಮ್ಮೆಲ್ಲರ ಸಂಕಲ್ಪಕ್ಕೆ ಮೀರದ್ದು.

ಅವನಿಂದಲೇ ಉಸಿರನ್ನು ಪಡೆಯುವ ಎಲ್ಲ ಜೋಬರೂ ಹೇಳಬಹುದಾದ್ದೆಂದರೆ "ನಾನು ಲೆಕ್ಕಕ್ಕಿಲ್ಲದವನು; ನಾನೇನು ಉತ್ತರ ನೀಡಬಲ್ಲೆ? ನಾನು ಉಸುರಿದ್ದೆಲ್ಲ

ನನಗೇ ಅರ್ಥವಾಗದ್ದು; ಈ ವಸ್ತುಗಳೆಲ್ಲ ನನಗೇ ಅಪರಿಚಿತವಾದವು ಮತ್ತು ಆಶ್ಚರ್ಯಕರವಾದವುಗಳು ನಾನು ಕೇಳಿದ್ದೆಲ್ಲ ನನಗೇ ಅರ್ಥವಾಗದವು; ಆದರೆ ನನ್ನ ಕಣ್ಣುಗಳು ಈಗ ನಿನ್ನನ್ನೇ (ಭಗವಂತ) ನೋಡುತ್ತಿವೆ. ನಾನು ನನ್ನನ್ನೇ ಕಡೆಗಣಿಸುತ್ತೇನೆ ಮತ್ತು ಈ ಧೂಳು ಮತ್ತು ಬೂದಿಯಲ್ಲಿ ಬಿದ್ದು ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತೇನೆ.

ಭಗವಂತನು ಜೋಬನಲ್ಲಿ ಜ್ಞಾನದೀವಟಿಕೆಯನ್ನು ಬೆಳಗಿಸುತ್ತಾನೆ. ಅದರಿಂದ ಅತ ತನ್ನ ಕತ್ತಲ ಸಾಮ್ರಾಜ್ಯದಿಂದ ದೂರಾಗಿ ಬೆಳಕನ್ನು ನೋಡುವಂತಾಗುತ್ತದೆ. "ನೀನು ಧೈರ್ಯಶಾಲಿಯಾಗಿ, ಟೊಂಕ ಕಟ್ಟಿ ನಿಲ್ಲು!" ದೇವರು ಪ್ರಯತ್ನಶೀಲನಾದವನಿಗೆ ಮತ್ತು ಅತನ ಸಮ್ಮುಖದಲ್ಲಿ ಗೌರವದಿಂದ, ಧೈರ್ಯದಿಂದ ಎದ್ದು ನಿಲ್ಲುವವನನ್ನು ಪ್ರೀತಿಸುತ್ತಾನೆ. ನಾಟಕ ಇಲ್ಲಿಗೆ ಮುಗಿಯುತ್ತದೆ."

ಈ ಜೋಬನ ಕುರಿತಾದ ಕಥೆ ಸರ್ವಕಾಲಕ್ಕೂ ಅನ್ವಯಿಸಬಹುದಾದಂತಹದ್ದು. ಎಲ್ಲಿಂದ ಹೊರಗೆ ಹೊರಟಿತ್ತೋ ಅಲ್ಲೇ ಉಳಿಯಲು, ಕ್ರೈಸ್ತಧರ್ಮದಲ್ಲಿ ಇದು ಉಳಿದಿದೆ. ಪ್ರತೀಕಾರದ ಭಾವನೆಯ ಕಾನೂನನ್ನಿದು ಮಿದುಗೊಳಿಸುತ್ತದೆ. ಸಂಕಷ್ಟದಿಂದ ಪಡೆಯಬಹುದಾದ ಉದಾತ್ತತೆಯನ್ನು ಘೋಷಿಸುತ್ತದೆ. ಜೊತೆಗೆ ನಮ್ಮ ಮತ್ತು ಭಗವಂತನ ನಡುವಿನ ಬಾಂಧವ್ಯವನ್ನು ಬಿಗಿಗೊಳಿಸುತ್ತದೆ. ಇಹ-ಪರಗಳೆರಡಕ್ಕೂ ಸಾರ್ಥಕತೆಯನ್ನು ನೀಡುತ್ತೆ. "ಅನ್ವೇಷಿಸು ಅದರಿಂದ ನೀನು ಫಲ ಕಾಣುತ್ತೀಯಾ. ಬಡಿ, ಅಂದಾಗ ಮಾತ್ರ ಇದರ ಬಾಗಿಲು ನಿನ್ನೆಡೆಗೆ ತೆರೆದುಕೊಳ್ಳುತ್ತದೆ."

ಈ ಕಥೆಯ ಕೊನೆಯ ವಚನಗಳ ಸುಲಲಿತವಾದ ಗದ್ಯ ನಮ್ಮನ್ನು ಪ್ರಾರಂಭದ ಗಂಧರ್ವಲೋಕಕ್ಕೆ ಕರೆದೊಯ್ಯುತ್ತದೆ. ಜೋಬನ ಗೆಳೆಯರು ಮತ್ತು ಸಂಬಂಧಿಕರು ಮರಳಿ ಬರುತ್ತಾರೆ. ದೇವರು ತನ್ನ ಈ ಸೇವಕನಿಗೆ ಅತ ಮೊದಲು ಹೊಂದಿದ್ದಕ್ಕೆ ದುಪ್ಪಟ್ಟನ್ನು ದಯಪಾಲಿಸುತ್ತಾನೆ. ೧೪,೦೦೦ ಕುರಿ; ೬,೦೦೦ ಒಂಟೆ; ೧,೦೦೦ ಜೋಡಿ ಎತ್ತುಗಳು ಮತ್ತು ೧,೦೦೦ ಹೆಣ್ಣು ಕತ್ತೆಗಳು.

ಜೋಬನು ಏಳು ಜನ ಗಂಡು ಮಕ್ಕಳನ್ನು ಮತ್ತು ಮೂವರು ಹೆಣ್ಣುಮಕ್ಕಳನ್ನು ಹೊಂದುತ್ತಾನೆ. ಅವರೆಲ್ಲ ಆ ಪ್ರದೇಶದಲ್ಲೇ ಅತ್ಯಂತ ಸ್ಫುರದ್ರೂಪಿಗಳಾಗುತ್ತಾರೆ. ಭಗವಂತ ಜೋಬನನ್ನು ಆಶೀರ್ವದಿಸುತ್ತಾನೆ. ಜೋಬನು ತನ್ನ ಬದುಕನ್ನು ಸಂಪೂರ್ಣವಾಗಿ ಅನುಭವಿಸಿ ತನ್ನ ೧೪೦ ನೆಯ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸುತ್ತಾನೆ.

ರವೀಂದ್ರ ಭಟ್ಟ ಕುಳಿಬೀಡು

ಬಿ. ಪಿ.–ಒಂದು ಶಾಪ

ತಮಗೆ ಅಧಿಕ ರಕ್ತದ ಒತ್ತಡವಿದೆಯೆಂದೇ ಭಾರತದಲ್ಲಿ ಅನೇಕರಿಗೆ ತಿಳಿದಿಲ್ಲ. ಇದರಿಂದ ವಿವಿಧ ಬಗೆಯ ದುಷ್ಪರಿಣಾಮಗಳುಂಟಾಗಲು ಸಾಧ್ಯ. ರಕ್ತದ ಒತ್ತಡವನ್ನು ಆಗಾಗ ಪರೀಕ್ಷಿಸಿ ಸೂಕ್ತ ಚಿಕಿತ್ಸೆಯ ಮೂಲಕ ಮುಂಬರುವ ಅಪಾಯಗಳಿಂದ ಪಾರಾಗುವ ಮಾರ್ಗವನ್ನು ಇಲ್ಲಿ ಸೂಚಿಸಲಾಗಿದೆ.

ಅವರೊಂದು ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್. ವಯಸ್ಸು ೪೫ ವರ್ಷ. ಮಧ್ಯಾಹ್ನದ ಭರ್ಜರಿ ಊಟ ಮುಗಿಸಿ ವಿಶ್ರಾಂತಿ ಪಡೆಯುತ್ತಿದ್ದರು. ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡಿತು. 'ಗ್ಯಾಸ್' ತೊಂದರೆಯಿರಬಹುದೆಂದು ಭಾವಿಸಿದ ಅವರು ಅಂಥ ಪ್ರಸಂಗಗಳಲ್ಲಿ ತಾವು ಮಾಮೂಲಾಗಿ ಬಳಸುವ ಎರಡು ಮಾತ್ರೆಗಳನ್ನು ನುಂಗಿದರು. ಆದರೂ ಎದೆನೋವು ಕಡಮೆಯಾಗಲಿಲ್ಲ. ಹೆಚ್ಚುತ್ತಲೇ ಹೋಗಿ ಕ್ರಮೇಣ ಎಡಭುಜ-ತೋಳುಗಳಿಗೂ ಬೆನ್ನಿಗೂ ವ್ಯಾಪಿಸಿತು. ವೈದ್ಯರನ್ನು ಕರೆದುತರುವ ವೇಳೆಗೆ ಅವರಿಗೆ ಹೃದಯಾಘಾತವಾಗಿತ್ತು.

ಇನ್ನೊಬ್ಬ ಉದ್ಯಮಿ–ವಯಸ್ಸು ೫೩ ವರ್ಷ. ತಮ್ಮ ಹೊಸದೊಂದು ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯುವ ಸಲುವಾಗಿ ನವದೆಹಲಿಗೆ ಹೋಗಬೇಕಾಗಿತ್ತು. ವಿಮಾನ ಸಮಯಕ್ಕೆ ಸರಿಯಾಗಿ ಹೊರಡುವ ಲಕ್ಷಣ ಇರಲಿಲ್ಲ. ಅಸಹನೆಯಿಂದ ಕಾಯುತ್ತ ಕುಳಿತಿದ್ದಾಗ, ಇದ್ದಕ್ಕಿದ್ದಂತೆ ಅವರ ತಲೆ ಎಷ್ಟು ಜೋರಾಗಿ ನೋಯತೊಡಗಿತೆಂದರೆ ಕುಳಿತಿರಲೂ ಸಾಧ್ಯವಾಗದೆ ಅವರು ಚೀರಿ ಪ್ರಜ್ಞೆ ತಪ್ಪಿ ಕೆಳಗುರುಳಿಬಿಟ್ಟರು. ಅವರ ದೇಹದ ಬಲಭಾಗಕ್ಕೆ ಪಾರ್ಶ್ವವಾಯು ಹೊಡೆದಿತ್ತು.

ಇವರಿಬ್ಬರಿಗೂ ಚಿಕಿತ್ಸೆ ನೀಡಿದ್ದ ಮುಂಬಯಿಯ ಖ್ಯಾತ ವೈದ್ಯರಾದ ಡಾ|| ಆರ್. ಎಚ್. ದಸ್ತೂರ್ ಅವರು "ಅಧಿಕ ರಕ್ತದ ಒತ್ತಡದಿಂದ ಬಳಲುತ್ತಿದ್ದೇವೆ ಎಂಬುದೇ ಇವರಲ್ಲಿ ಯಾರಿಗೂ ತಿಳಿದಿರಲಿಲ್ಲ" ಎನ್ನುತ್ತಾರೆ. ಎಂದಾದರೂ ಒಂದು ಬಾರಿ ತೀರ ಸರಳವಾದ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಂಡಿದ್ದರೂ ದೈಹಿಕ ಪರಿಸ್ಥಿತಿಯನ್ನೂ ಅರಿತು, ನಿಯಂತ್ರಿತ ಚಿಕಿತ್ಸೆ, ಪಥ್ಯ

೧೯೮೩ ನೆಯ ಜನವರಿ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಹೈಪರ್‌ಟೆನ್‌ಷನ್–ದಿ ಸೈಲೆಂಟ್ ಕಿಲ್ಲರ್' ಎಂಬ ಲೇಖನದ ಸಂಗ್ರಹಾನುವಾದ.

ಹಾಗೂ ನಿರ್ದಿಷ್ಟ ಜೀವನ ವಿಧಾನಗಳನ್ನು ಅನುಸರಿಸುವುದರ ಮೂಲಕ ಅಪಾಯದಿಂದ ಪಾರಾಗಬಹುದಾಗಿತ್ತು ಎಂದು ಡಾ ದಸ್ತೂರ್ ಅಭಿಪ್ರಾಯ ಪಡುತ್ತಾರೆ.

ಭಾರತದಲ್ಲಿ ಜನರು ಒಂದಲ್ಲ ಒಂದು ಬಗೆಯ ದೈಹಿಕ ನ್ಯೂನತೆ ಮತ್ತು ಅಕಾಲ ಮರಣಗಳಿಗೆ ತುತ್ತಾಗುವುದಕ್ಕೆ ಇರುವ ಪ್ರಮುಖ ಕಾರಣಗಳಲ್ಲಿ ಅತಿ ಉದ್ವೇಗ ಅಥವಾ ಅಧಿಕ ರಕ್ತದ ಒತ್ತಡವೂ ಒಂದಾಗಿದೆ. ರಕ್ತಪರಿಚಲನ ವ್ಯವಸ್ಥೆಗೆ ಸಂಬಂಧಿಸಿದಂತೆ ನಮ್ಮಲ್ಲಿ ಅನೇಕರಿಗೆ ತಿಳಿಯದೆ ಇರುವ ಅಂಶ ವೊಂದೆಂದರೆ ಸುಮಾರು ೬೦ ದಶಲಕ್ಷದಷ್ಟು ಭಾರತೀಯರು ಇಂದು ಅನಾರೋಗ್ಯ ಪೀಡಿತರಾಗಬೇಕಾದ ಸಂದರ್ಭ ಬಂದಿದೆ. ಇದೇ ಅಧಿಕ ರಕ್ತದ ಒತ್ತಡವಾಗಿದ್ದು, ಯುಕ್ತವಾದ ಚಿಕಿತ್ಸೆ ನೀಡದೆ ಹೋದ ಪಕ್ಷದಲ್ಲಿ, ಹೃದಯಾಘಾತ, ಪಾರ್ಶ್ವವಾಯು, ಮೂತ್ರಜನಕಾಂಗ ರೋಗ, ಕುರುಡುತನ ಹಾಗೂ ಕೆಲವು ಸಲ ಸಾವಿಗೂ ಇದು ಕಾರಣವಾಗಬಹುದು.

ನಮಗೆ ತಿಳಿದಿರುವಂತೆ, ಅಕಾಲ ಮರಣಕ್ಕೆ ಕಾರಣವಾಗುವ ಕಾಯಿಲೆಗಳಲ್ಲಿ ಅತಿ ಉದ್ವೇಗ ಅಥವಾ ಅಧಿಕ ರಕ್ತದ ಒತ್ತಡವನ್ನು ನಿಯಂತ್ರಿಸುವುದು ಅತ್ಯಂತ ಸುಲಭ. ಆದರೆ ವಿಧಿಯ ಆಣಕವೋ ಎಂಬಂತೆ, ಅಧಿಕ ರಕ್ತದ ಒತ್ತಡದ ಮಾರಕ ದುಷ್ಪರಿಣಾಮಗಳ ಬಗ್ಗೆ ಜನರಿಗಿರುವ ಸಾಮಾನ್ಯ ಅಜ್ಞಾನ ಈ ಸಮಸ್ಯೆಯನ್ನು ಇನ್ನಷ್ಟು ಗಂಭೀರವನ್ನಾಗಿ ಮಾಡಿದೆ. ಉದಾಹರಣೆಗೆ, ಮುಂಬಯಿಯ 'ನ್ಯಾಷನಲ್ ಸೊಸೈಟಿ ಫಾರ್ ಪ್ರಿವೆನ್‌ಷನ್ ಆಫ್ ಹಾರ್ಟ್ ಡಿಸೀಸ್ ಅಂಡ್ ರಿ-ಹೆಬಿಲಿಟೇಷನ್'ನ ಅಧ್ಯಕ್ಷರಾಗಿರುವ ಡಾ| ಜಯ್‌ಶೇಖರ್ ಝಾವೇರಿ ಅವರು ೧೯೭೮ ರಲ್ಲಿ ಮಾಡಿದ ತಮ್ಮ ಸರ್ವೇಕ್ಷಣೆಯಲ್ಲಿ ೧೦,೦೦೦ ನೌಕರರ ರಕ್ತದ ಒತ್ತಡವನ್ನು ಪರೀಕ್ಷಿಸಿ, ಇವರಲ್ಲಿ ೧೫೮೦ ಮಂದಿ, ಎಂದರೆ ಸುಮಾರು ಶೇ| ೧೫.೮ರಷ್ಟು ಜನರು, ಅಧಿಕ ರಕ್ತದ-ಒತ್ತಡದ ತೊಂದರೆಗೀಡಾಗಿ ಬಳಲುತ್ತಿರುವುದನ್ನು ಕಂಡುಹಿಡಿದಿದ್ದಾರೆ. ಇವರಲ್ಲಿ ಅನೇಕರಿಗೆ ತಮಗೆ ಅಧಿಕ ರಕ್ತದ ಒತ್ತಡವುಂಟೆಂಬುದೇ ತಿಳಿದಿರಲಿಲ್ಲ. ತಿಳಿದಿದ್ದವರಲ್ಲಿಯೂ ಬಹುಮಂದಿ ಅದನ್ನು ನಿರ್ಲಕ್ಷಿಸಿದ್ದರು.

ರಕ್ತದ ಒತ್ತಡವೆಂದರೇನು? ನಮ್ಮ ಹೃದಯ ಪ್ರತಿ ನಿಮಿಷಕ್ಕೆ ಸುಮಾರು ೭೨ ಬಾರಿ, ಎಂದರೆ ದಿನಕ್ಕೆ ೧೦೦,೦೦೦ಕ್ಕೂ ಹೆಚ್ಚು ಸಲ ಬಡಿಯುತ್ತದೆ. ಹೀಗೆ ಪ್ರತಿಯೊಂದು ಬಾರಿ ಬಡಿಯುವಾಗಲೂ ಸುಮಾರು ಅರ್ಧ ಬಟ್ಟಲಿನಲ್ಲಿ ರಕ್ತವನ್ನು ಹೃದಯ ರಕ್ತನಾಳಗಳಿಗೆ 'ಪಂಪ್' ಮಾಡುತ್ತದೆ. ಈ ರಕ್ತ ದೇಹ

ದಲ್ಲಿರುವ ೧೨೦,೦೦೦ ರಕ್ತನಾಳಗಳಲ್ಲಿ ಸಂಚರಿಸಿ ಕೊನೆಗೆ ಅಭಿದಮನಿಗಳ ಮೂಲಕ ಹೃದಯಕ್ಕೆ ಹಿಂದಿರುಗುತ್ತದೆ. ಈ ನಿರಂತರ ರಕ್ತಪರಿಚಲನೆಯ ಹಿಂದಿರುವ ಚಾಲಕ ಶಕ್ತಿಯೇ ರಕ್ತದ ಒತ್ತಡ; ಇನ್ನಷ್ಟು ಸ್ಪಷ್ಟವಾಗಿ ಹೇಳು ವುದಾದರೆ, 'ಪಂಪ್' ಮಾಡಲಾದ ರಕ್ತವು ರಕ್ತನಾಳಗಳ ಭಿತ್ತಿಗಳ ಮೇಲೆ ಉಂಟುಮಾಡುವ ಪರಿಣಾಮವೇ ರಕ್ತದ ಒತ್ತಡ.

ಹೃದಯವು ಅಲೆಅಲೆಗಳಲ್ಲಿ ರಕ್ತವನ್ನು 'ಪಂಪ್' ಮಾಡುತ್ತದೆ. ಆದ್ದರಿಂದ ಹೃದಯದ ಪ್ರತಿಯೊಂದು ಬಡಿತದ ಅವಧಿಯಲ್ಲಿಯೂ ರಕ್ತದ ಒತ್ತಡ ಬೇರೆ ಬೇರೆಯಾಗಿರುತ್ತದೆ. ಹೃದಯ ಸಂಕೋಚನಗೊಂಡಾಗ ರಕ್ತದ ಒತ್ತಡ ಅಧಿಕ ವಾಗಿಯೂ ವ್ಯಾಕೋಚನಗೊಂಡಾಗ ಕಡಿಮೆಯಾಗಿಯೂ ಇರುತ್ತದೆ. ಬೇರೆ ಬೇರೆ ಜನರ ರಕ್ತದ ಒತ್ತಡ ಬೇರೆಬೇರೆಯಾಗಿರುತ್ತದೆ; ಅಲ್ಲದೆ ಒಬ್ಬನೇ ವ್ಯಕ್ತಿಯ ರಕ್ತದ ಒತ್ತಡ ಕೂಡ ಬೇರೆಬೇರೆ ಸಮಯಗಳಲ್ಲಿ ಬೇರೆ ಬೇರೆ ಯಾಗಿರಲು ಸಾಧ್ಯ. ಉದಾಹರಣೆಗೆ, ನಿದ್ರೆ ಮಾಡುತ್ತಿರುವಾಗ ಕಡಮೆಯಾಗಿ ರುವ ರಕ್ತದ ಒತ್ತಡ ಕೆಲಸ ಮಾಡುತ್ತಿರುವಾಗ ಹೆಚ್ಚಾಗುತ್ತದೆ; ಭಾವೋದ್ವೇಗವುಂಟಾದಾಗ ಸಾಮಾನ್ಯವಾಗಿಯೇ ರಕ್ತದ ಒತ್ತಡ ಹೆಚ್ಚಾಗಿರು ತ್ತದೆ. ಉದಾಹರಣೆಗೆ, ಕೋಪಗೊಂಡಾಗ ರಕ್ತದ ಒತ್ತಡ ಅತ್ಯಧಿಕವಾಗಿರು ತ್ತದೆ. ರಕ್ತದ ಒತ್ತಡದಲ್ಲಿನ ಈ ಬದಲಾವಣೆಗಳು ತಾವಾಗಿ ಆಗುತ್ತವೆ; ವ್ಯಕ್ತಿಗೆ ಈ ಬಗ್ಗೆ ಯಾವ ಅರಿವೂ ಉಂಟಾಗುವುದಿಲ್ಲ.

ಸಾಮಾನ್ಯವಾಗಿ ವಯಸ್ಕನ ರಕ್ತದ ಒತ್ತಡ ೧೧೦/೬೦ ರಿಂದ ೧೨೦/೮೦ ರ ವರೆಗೆ ಇರುತ್ತದೆ. (ಇವುಗಳಲ್ಲಿ ಮೊದಲನೆಯ ಅಂಕೆ, ಹೃದಯ ಸಂಕೋಚನಗೊಂಡ ಕಾಲದ ಗರಿಷ್ಠ ಒತ್ತಡವನ್ನೂ ಎರಡನೆಯ ಅಂಕೆ, ಹೃದಯ ವ್ಯಾಕೋಚನಗೊಂಡ ಕಾಲದ ಕನಿಷ್ಠ ಒತ್ತಡವನ್ನೂ ಸೂಚಿಸು ತ್ತದೆ.) ಒತ್ತಡ ೧೪೦/೯೦ ನ್ನು ಮೀರಿದಾಗ ಮಾತ್ರ ಅಷ್ಟೇ ಹೆಚ್ಚಾಗಿ ಉಳಿ ದಾಗ, ವ್ಯಕ್ತಿ ನಿಜವಾಗಿಯೂ ಅಧಿಕ ರಕ್ತದ ಒತ್ತಡದಿಂದ ಬಳಲುತ್ತಿದ್ದಾನೆ ಎನ್ನಬಹುದು. ವ್ಯಕ್ತಿಗೆ ವಯಸ್ಸಾಗುತ್ತ ಹೋದಂತೆ, ಹೃದಯ ಸಂಕೋಚನ ಗೊಂಡ ಅವಧಿಯ ರಕ್ತದ ಒತ್ತಡ ಹೆಚ್ಚಾಗುತ್ತ ಹೋಗುತ್ತದೆ. ರಕ್ತನಾಳಗಳು ಸಂಕುಚಿತಗೊಂಡು ತಮ್ಮ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುವುದೇ ಇದಕ್ಕೆ ಕಾರಣ. ಆದರೆ ಗಂಭೀರವಾದ ದೈಹಿಕ ತೊಂದರೆಗಳಿಗೆ ದಾರಿ ಮಾಡಿಕೊಡು ವುದು ಹೃದಯ ವ್ಯಾಕೋಚನಗೊಂಡ ಅವಧಿಯಲ್ಲಿನ ರಕ್ತದ ಒತ್ತಡವೇ ಆಗಿದೆ. ಹೃದಯ ವ್ಯಾಕೋಚನಗೊಂಡ ಅವಧಿಯ ರಕ್ತದ ಒತ್ತಡವನ್ನಾಧರಿಸಿ,

ರಕ್ತದ ಒತ್ತಡವನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ:

೧) ೯೦ ಹಾಗೂ ೧೧೦ ರ ನಡುವೆ ಇದ್ದರೆ-ಸೌಮ್ಯ;

೨) ೧೧೦ ಹಾಗೂ ೧೩೦ ರ ನಡುವೆ ಇದ್ದರೆ ಸಾಧಾರಣ;

೩) ೧೩೦ ಕ್ಕಿಂತ ಹೆಚ್ಚಾಗಿದ್ದರೆ-ತೀವ್ರ.

"ರಕ್ತದ ಒತ್ತಡ ಹೆಚ್ಚಿದಷ್ಟು ಎದೆಯ ತುಯ್ತ ಹೆಚ್ಚಾಗುತ್ತದೆ ಮತ್ತು ದೇಹದ ಪ್ರಮುಖ ಅವಯವಗಳ ಮೇಲೆ ಈ ಒತ್ತಡ ಹೆಚ್ಚು ಮಾರಕವಾದ ಪರಿಣಾಮಗಳನ್ನು ಬೀರುತ್ತದೆ" ಎನ್ನುತ್ತಾರೆ ಡಾ|| ಮಸ್ತೂರ್.

ರಕ್ತನಾಳಗಳಲ್ಲಿ ಅಧಿಕವಾಗಿರುವ ರಕ್ತದ ಒತ್ತಡದಿಂದಾಗಿ, ಹೃದಯ ಹೆಚ್ಚು ಜೋರಾಗಿ-ಹೆಚ್ಚು ರಭಸದಿಂದ--ರಕ್ತವನ್ನು 'ಪಂಪ್' ಮಾಡಬೇಕಾದ ಅನಿವಾರ್ಯಪರಿಸ್ಥಿತಿ ಬಂದೊದಗುತ್ತದೆ. ಹೀಗೆ ಹೆಚ್ಚು ಪ್ರಯಾಸದಿಂದ ಕೆಲಸ ನಿಭಾಯಿಸುವ ಹೃದಯ ಬಹಳ ಬೇಗ ದಣಿದು ಕ್ರಮೇಣ ತನ್ನ ಪ್ರತಿ ಬಡಿತದ ಕಾಲದಲ್ಲಿಯೂ ಅದು 'ಪಂಪ್' ಮಾಡುವ ರಕ್ತದ ಪ್ರಮಾಣ ಕಡಮೆಯಾಗ ತೊಡಗುತ್ತದೆ. ಇದರ ಪರಿಣಾಮವಾಗಿ ಮೂತ್ರಪಿಂಡಗಳು ಸಾಕಷ್ಟು ಮೂತ್ರವನ್ನು ವಿಸರ್ಜಿಸುವ ತಮ್ಮ ಶಕ್ತಿಯನ್ನು ಕಳೆದುಕೊಳ್ಳಬಹುದು. ಹೀಗೆ ವಿಸರ್ಜನೆಯಾಗದೆ ದೇಹದಲ್ಲಿ ಉಳಿದ ಮೂತ್ರ ಮತ್ತು ಅಂತಹ ಇತರ ಕೆಲವು ವಿಷವಸ್ತುಗಳು ರಕ್ತದೊಡನೆ ಸೇರಿ 'ಮೂತ್ರ ರಕ್ತ ವಿಕಾರ' ಎಂಬ ಒಂದು ಸಂಕೀರ್ಣ ಸಮಸ್ಯೆಗೆ ಎಡೆಮಾಡಿಕೊಡಬಹುದು.

ಈ ತೊಂದರೆಯಷ್ಟೇ ಅಲ್ಲದೆ, ಅಧಿಕ ರಕ್ತದ ಒತ್ತಡದಿಂದ ರಕ್ತನಾಳ ಭಿತ್ತಿಗಳ ಒಳಭಾಗ ಮಾರ್ದವತೆಯನ್ನು ಕಳೆದುಕೊಳ್ಳಬಹುದು ಮತ್ತು ಇದರ ಫಲಿತಾಂಶವಾಗಿ ಅಲ್ಲಿ ಮೇದೋವಸ್ತುಗಳು ಸಂಚಯಗೊಳ್ಳಬಹುದು. ಇದರಿಂದ ರಕ್ತನಾಳ ಭಿತ್ತಿಗಳು ದಪ್ಪನಾಗಿ ರಕ್ತದ, ಸರಾಗವಾದ ಪರಿಚಲನೆಗೆ ಅಡಚಣೆಯುಂಟಾಗುತ್ತದೆ ಮತ್ತು ರಕ್ತ ಹೆಪ್ಪುಗಟ್ಟುತ್ತದೆ. ರಕ್ತ ಹೆಪ್ಪುಗಟ್ಟುವುದರಿಂದ ರಕ್ತದ ಸರಬರಾಜು ಒಮ್ಮೆಲೇ ನಿಂತು, ಹೃದಯಾಘಾತ, ಪಾರ್ಶ್ವವಾಯು ಅಥವಾ ಮೂತ್ರಜನನಾಂಗಗಳಿಗೆ ಸಂಬಂಧಿಸಿದ ತೊಂದರೆಗಳು ಉಂಟಾಗುತ್ತವೆ. ಸಾಧಾರಣ ರಕ್ತ ಒತ್ತಡವಿರುವವರಿಗಿಂತ ಐದರಷ್ಟು ಜಾಸ್ತಿ ಸಂದರ್ಭಗಳಲ್ಲಿ ಅಧಿಕ ರಕ್ತದ ಒತ್ತಡವಿರುವವರು ಪಾರ್ಶ್ವವಾಯುವಿಗೆ ಬಲಿಯಾಗುತ್ತಾರೆ. ರಕ್ತದ ಒತ್ತಡ ಅಪಾಯಕರ ಹಂತವನ್ನು, ಎಂದರೆ ೨೪೦/೧೩೦ ನ್ನು ತಲುಪಿದಾಗ ರಕ್ತ ಹಾಗೂ ಪ್ಲಾಸ್ಮಗಳು ಕಣ್ಣಿನ ಅಕ್ಷಿಪಟದಿಂದ ಜಿನುಗತೊಡಗಬಹುದು. ಇದರಿಂದ ಅರೆ ಕುರುಡು ಅಥವಾ ಪೂರ್ಣ ಕುರುಡೂ ಸಂಭವಿಸಬಹುದು.

ಅಧಿಕ ರಕ್ತದ ಒತ್ತಡದಲ್ಲಿ ಎರಡು ವಿಧ, ಹೆಚ್ಚೇನೂ ಉಗ್ರವಲ್ಲದ ಒಂದನೆಯ ಬಗೆಯ ಸಾಮಾನ್ಯ ರಕ್ತದ ಒತ್ತಡಕ್ಕೆ ಇರುವ ಕಾರಣಗಳು ಜೈವಿಕವಾದವು. ಉದಾಹರಣೆಗೆ, ಮೂತ್ರಜನಕಾಂಗಗಳಿಗೆ ಸಂಬಂಧಿಸಿದ ರೋಗಗಳು, ಮಿದುಳು ಹಾಗೂ ಥೈರಾಯಿಡ್-ಅಡ್ರಿನಲ್ ಗ್ರಂಥಿಗಳ ಟ್ಯೂಮರ್, ಮಹಾಪಧಮನಿ ಕಿರಿದಗಲವಾಗುವುದು ಇತ್ಯಾದಿ. ಕಿರಿಯ ವಯಸ್ಸಿನವರಲ್ಲಿ ಇದು ಸಾಮಾನ್ಯ. ಸಾಮಾನ್ಯ ಶಸ್ತ್ರಚಿಕಿತ್ಸೆಯಿಂದ ಇಂಥ ರಕ್ತದ ಒತ್ತಡವನ್ನು ಸಾಧಾರಣ ಹಂತಕ್ಕೆ ತರಲು ಸಾಧ್ಯ.

ಹೆಚ್ಚು ಉಗ್ರವಾದ ಎರಡನೆಯ ಬಗೆಯ ರಕ್ತದ ಒತ್ತಡ ಅತ್ಯಂತ ಹಾನಿಕರವಾಗಿದ್ದು ಪರಿಣಾಮಗಳು ಅತ್ಯಂತ ಗಂಭೀರವಾಗುವವರೆಗೆ ಇದು ತನ್ನ ಸ್ಪಷ್ಟ ಸಂಕೇತಗಳನ್ನು ತೋರಿಸುವುದಿಲ್ಲ. ಆದ್ದರಿಂದಲೇ ಇದನ್ನು 'ಸದ್ದಿಲ್ಲದೆ ಕೊಲ್ಲುವ ಕಾಯಿಲೆ' ಎಂದು ಕರೆಯಬಹುದು. ಉಗ್ರ ರಕ್ತದ ಒತ್ತಡದ ಸಾಮಾನ್ಯ ಚಿಹ್ನೆ ತಲೆನೋವು ಎಂಬುದು ಜನರ ನಂಬಿಕೆ, ಆದರೆ ಇದು ಸುಳ್ಳು. ಸ್ಥೂಲಕಾಯತ್ವ, ಸಿಹಿಮೂತ್ರರೋಗ, ಅಧಿಕ ಪ್ರಮಾಣದ ಉಪ್ಪಿನ ಸೇವನೆ, ಧೂಮಪಾನ ಮತ್ತು ಭಾವಾತ್ಮಕ ಒತ್ತಡಗಳಿಂದ ರಕ್ತದ ಒತ್ತಡ ಮಾರಕ ಹಂತವನ್ನು ತಲುಪುತ್ತದೆ. ತಂದೆ–ತಾಯಿಗಳಿಗೆ ಅಥವಾ ಅಜ್ಜ-ಅಜ್ಜಿಯರಿಗೆ ಅಧಿಕ ರಕ್ತದ ಒತ್ತಡವಿದ್ದರೆ, ಆ ಕುಟುಂಬದಲ್ಲಿ ಜನಿಸುವ ಮಕ್ಕಳಿಗೂ ರಕ್ತದ ಒತ್ತಡ ಅಧಿಕವಾಗುವ ಸಂದರ್ಭವುಂಟು. ಅಧಿಕ ರಕ್ತದ ಒತ್ತಡವಿರುವ ತಂದೆತಾಯಿಗಳ ಮಕ್ಕಳು ಇತರರ ಮಕ್ಕಳಿಗಿಂತ ಎಂಟು–ಹತ್ತು ವರ್ಷಗಳಷ್ಟು ಮೊದಲೇ ಅಧಿಕ ರಕ್ತದ ಒತ್ತಡದ ತೊಂದರೆಗೆ ಒಳಗಾಗುತ್ತಾರೆ ಎನ್ನಲಾಗಿದೆ. ಅಧಿಕ ರಕ್ತದ ಒತ್ತಡವಿರುವವರು ಹೃದಯಾಘಾತಕ್ಕೆ ಬಲಿಯಾಗಲು ಧೂಮಪಾನವೂ ಒಂದು ಕಾರಣವಾಗಿದೆ. ಸಿಗರೇಟನ್ನು ಸೇದಿದ ಅನಂತರದ ೧೫ ನಿಮಿಷಗಳ ಅವಧಿಯಲ್ಲಿ ರಕ್ತದ ಒತ್ತಡ ೧೫ ರಿಂದ ೨೦ ಪಾಯಿಂಟ್‌ಗಳಷ್ಟು ಹೆಚ್ಚುವ ಸಾಧ್ಯತೆಯಿದೆ.

ಹೀಗೆ ಉಗ್ರವಾದ ಈ ಅಧಿಕ ರಕ್ತದ ಒತ್ತಡ ಯಾವ ಸ್ಪಷ್ಟ ಚಿಹ್ನೆಗಳನ್ನು ತೋರಿಸದೆ ಇರುವುದರಿಂದಾಗಿ, ಇಂತಹ ರಕ್ತದ ಒತ್ತಡವಿರುವವರು ಸಾಮಾನ್ಯವಾಗಿ ಔಷಧಗಳನ್ನು ಸೇವಿಸಲು ಒಪ್ಪುವುದಿಲ್ಲ. ರಕ್ತದ ಒತ್ತಡ ಸೌಮ್ಯವೇ ಆಗಿದ್ದರೂ, ವೈದ್ಯಚಿಕಿತ್ಸೆ ಪಡೆಯಬೇಕು ಎನ್ನುತ್ತಾರೆ ಡಾ. ದಸ್ತೂರ್, ಇದೇ ಅಭಿಪ್ರಾಯವನ್ನು ಡಾ. ಜಯ್‌ಶೇಖರ್ ಝಾವೇರಿ ಅವರೂ ವ್ಯಕ್ತಪಡಿಸುತ್ತಾರೆ. "ನಿಮಗೆ ಅಧಿಕ ರಕ್ತದ ಒತ್ತಡವಿದ್ದೂ ಔಷಧ ಸೇವಿಸಲು ಒಪ್ಪದೆ

ಹೋದಿರೆಂದರೆ, ನೀವು ನಿಮ್ಮ ಆಯುಷ್ಯವನ್ನು ೨೦ ವರ್ಷಗಳಷ್ಟು ಕಡಮೆ ಮಾಡಿಕೊಂಡಂತೆಯೇ" ಎಂದು ಅವರು ಎಚ್ಚರಿಕೆ ನೀಡುತ್ತಾರೆ. ರಕ್ತದ ಒತ್ತಡದ ತೊಂದರೆ ಜೀವಮಾನವಿಡೀ ಇರುವುದಾದ್ದರಿಂದ ವೈದ್ಯಕೀಯ ಚಿಕಿತ್ಸೆಯಿಂದಲೂ, ರಕ್ತದ ಒತ್ತಡ ಮತ್ತು ಹೃದಯವನ್ನು ನಿಯತವಾಗಿ ಪರೀಕ್ಷಿಸಿಕೊಳ್ಳುವುದರ ಮೂಲಕವೂ ರಕ್ತದ ಒತ್ತಡವನ್ನು ನಿಯಂತ್ರಿಸಿಕೊಳ್ಳುವುದು ಅತ್ಯಗತ್ಯ.

ಅಧಿಕ ರಕ್ತದ ಒತ್ತಡದ ಅಪಾಯದಿಂದ ಪಾರಾಗಲು ನೀವು ಅನುಸರಿಸಬಹುದಾದ ಕ್ರಮಗಳು ಹೀಗಿವೆ:

೧) ಯುಕ್ತವಾದ ಆಹಾರ ಸೇವನೆ (ಪಥ್ಯ) ಮತ್ತು ನಿಯತ ವ್ಯಾಯಾಮಗಳಿಂದ ನಿಮ್ಮ ದೇಹದ ತೂಕವನ್ನು ನಿಯಂತ್ರಿಸಿಕೊಳ್ಳಿ.

೨) ಉಪ್ಪು ಹಾಗೂ ಕೊಬ್ಬು ಬೆಳೆಯಲು ಕಾರಣವಾಗಬಹುದಾದ ಆಹಾರಗಳ ಸೇವನೆಯನ್ನು ಮಿತಗೊಳಿಸಿ.

೩) ಮೂತ್ರ ವಿಸರ್ಜಿಸುವಾಗ ಉರಿ-ನೋವು ಕಾಣಿಸಿಕೊಳ್ಳುವುದು, ಮೂತ್ರ ದುರ್ವಾಸನಾಯುಕ್ತವಾಗುವುದು, ಅಥವಾ ದಪ್ಪವಾಗುವುದು-ಇವೇ ಮುಂತಾದ, ಮೂತ್ರಕ್ಕೆ ಸಂಬಂಧಿಸಿದ ದೋಷಗಳು ಗಮನಕ್ಕೆ ಬಂದ ತತ್ಕ್ಷಣ, ವೈದ್ಯರನ್ನು ನೋಡಿ, ಸಮಾಲೋಚಿಸಿ, ಅವರ ಸಲಹೆ ಪಡೆಯಿರಿ.

೪) ವರ್ಷಕ್ಕೊಮ್ಮೆ—ಅಥವಾ ನಿಮ್ಮ ಕುಟುಂಬದಲ್ಲಿ ಹಿರಿಯರಿಗೆ ಅಧಿಕ ರಕ್ತದ ಒತ್ತಡವಿದ್ದಲ್ಲಿ ಆರು ತಿಂಗಳಿಗೊಮ್ಮೆ--ತಪ್ಪದೆ ನಿಮ್ಮ ರಕ್ತದ ಒತ್ತಡವನ್ನು ಪರೀಕ್ಷೆ ಮಾಡಿಕೊಳ್ಳಿ.

೫) ಹೆಚ್ಚು ಪ್ರಯಾಸವಾಗುವಂತಹ ಕೆಲಸಗಳನ್ನು ಮಾಡಬೇಡಿ.

ನೆನಪಿರಲಿ—ಸೌಮ್ಯ ರಕ್ತದ ಒತ್ತಡವಿರುವವರಲ್ಲಿ ಅನೇಕರಿಗೆ ಯಾವ ಚಿಕಿತ್ಸೆಯೂ ಅಗತ್ಯವಾಗಿರುವುದಿಲ್ಲ. ಅಧಿಕ ರಕ್ತದ ಒತ್ತಡದ ಎಲ್ಲ ಪ್ರಸಂಗಗಳು ಮಾರಕವಾದ ಗಂಭೀರ ಅಥವಾ ಸಂಕೀರ್ಣ ಸಮಸ್ಯೆಗಳಿಗೆ ಎಡೆಮಾಡಿಕೊಡುವುದೂ ಇಲ್ಲ. ಬಾಲ್ಯದಿಂದಲೇ ಮಕ್ಕಳಿಗೆ ಉತ್ತಮ ಆರೋಗ್ಯ—ಅಭ್ಯಾಸಗಳನ್ನು ಕಲಿಸಿದ ಪಕ್ಷದಲ್ಲಿ ಅವರು ಅಧಿಕ ರಕ್ತದ ಒತ್ತಡದ ತೊಂದರೆಗೆ ಒಳಗಾಗುವ ಸಂದರ್ಭಗಳು ಕಡಿಮೆಯಾಗುತ್ತವೆ. ಆದ್ದರಿಂದ ರಕ್ತದ ಒತ್ತಡಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ತಿಳಿದುಕೊಳ್ಳಿ ಮತ್ತು ಕೂಡಲೇ ನಿಮ್ಮ ಕುಟುಂಬ ವೈದ್ಯರಿಂದ ಒಮ್ಮೆ ನಿಮ್ಮ ರಕ್ತದ ಒತ್ತಡದ ಪರೀಕ್ಷೆ ಮಾಡಿಸಿಕೊಳ್ಳಿ.

ಶಂಸ ಐತಾಳ

ಪುಸ್ತಕ ವಿಮರ್ಶೆ

ಯೋಗದೀಪಿಕಾ: ಲೋಕವಿಖ್ಯಾತ ಯೋಗವಿದ್ಯಾಪ್ರಾಧ್ಯಾಪಕರಾದ ಶ್ರೀ ಬಿ. ಕೆ. ಎಸ್. ಐಯ್ಯಂಗಾರ್ಯರ "Light on Yoga" ಎಂಬ ಆಂಗ್ಲ ಗ್ರಂಥದ ಕನ್ನಡಾನುವಾದ.

ಅನುವಾದಕರು: ಪ್ರೊ॥ ಬಿ. ಭೀಮಸೇನರಾವ್ ಎಂ.ಎಸ್‌ಸಿ., ವ್ಯವಸಾಯಿಕ ರಸಾಯನಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಪ್ರಥಮ ಪ್ರಕಾಶಕರು: ಬ್ರಹ್ಮವಾದಿನ್ ಪಬ್ಲಿಕೇಷನ್ಸ್, ೧೯೬೦, ೨೦೦೦ ಪ್ರತಿಗಳು.

ದ್ವಿತೀಯ ಪ್ರಕಾಶಕರು: ವಿವೇಕಾನಂದ ಕೇಂದ್ರ ಪ್ರಕಾಶನ, ಸಿಂಗರಾಚಾರಿ ರಸ್ತೆ, ಟ್ರಿಪ್ಲಿಕೇನ್, ಮದ್ರಾಸು ೫. ೧೯೮೦, ೨೦೦೦ ಪ್ರತಿಗಳು., ಪುಟಗಳು: ೨೯೮+x- ಚಿತ್ರ ಪುಟಗಳು ೯೬, ಚಿತ್ರಗಳ ಸಂಖ್ಯೆ ೬೦೨, ಬೆಲೆ: ಅರವತ್ತು ರೂಪಾಯಿ.

ಶ್ರೀಮನ್ಮಹಾರಾಜರವರ ಕಾಲದಲ್ಲಿ ಮೈಸೂರು ಅರಮನೆಯಲ್ಲಿ ಯೋಗಾಚಾರ್ಯರಾಗಿದ್ದ ವಿದ್ವಾನ್ ಟಿ. ಕೃಷ್ಣಮಾಚಾರ್ಯರ ಶಿಷ್ಯರೇ "Light on Yoga"ದ ಗ್ರಂಥಕರ್ತರಾದ ಶ್ರೀ ಬಿ.ಕೆ.ಎಸ್. ಐಯ್ಯಂಗಾರ್ ರವರು. ಯೋಗಾಶಾಸ್ತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಇವರದು. ಇಂಗ್ಲೆಂಡಿನಲ್ಲಿ ತಮ್ಮ ಯೋಗವಿದ್ಯೆಯನ್ನು ಪ್ರದರ್ಶಿಸಿದ್ದೇ ಅಲ್ಲದೆ ಅದರ ಪ್ರಚಾರಕ್ಕಾಗಿ ಮೇಲ್ಕಂಡ ಯೋಗಗ್ರಂಥವನ್ನು ಆಂಗ್ಲೇಯರ ನೆರವಿನಿಂದಲೇ ಇಂಗ್ಲಿಷ್‌ನಲ್ಲಿ ರಚಿಸಿದರು. ಈ ಗ್ರಂಥವನ್ನು ಜಾರ್ಜ್ ಅಲೆನ್ ಮತ್ತು ಅನ್ವಿನ್ ಲಿಮಿಟೆಡ್, ಲಂಡನ್ ಇನರು ಮೊದಲಿಗೆ ಪ್ರಕಟಿಸಿದರು. ಈ ಗ್ರಂಥವು ಯೂರೋಪ್ ಖಂಡದ ಇತರ ಭಾಗಗಳಲ್ಲಿ ಹರಡಿ ಅವರ ಮೆಚ್ಚುಗೆಗೆ ಪಾತ್ರವಾಗಿ ಆಯಾ ಭಾಗದ ಭಾಷೆಗಳಲ್ಲಿಯೂ ಸಹ ಬೆಳಕಿಗೆ ಬಂದಿತು. ಈ ಗ್ರಂಥವು ಅನೇಕ ವಿಜ್ಞಾನಿಗಳ ಮತ್ತು ಪಂಡಿತರ ಮನ್ನಣೆಯನ್ನು ಪಡೆಯಿತು. ನಂತರ ಫ್ರೆಂಚ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ಪ್ರಕಟಣೆ ಪಡೆಯಿತು.

ಶ್ರೀಯುತ ಅಯ್ಯಂಗಾರ್ಯರು ಮೈಸೂರಿನವರು: ಅಲ್ಲದೆ ಉದ್ದಾಮ ಕರ್ಮಯೋಗಿಗಳು. ಕ್ರಿ.ಶ. ೧೯೩೬ರಲ್ಲಿ ತಮ್ಮ ಗುರುಗಳೊಡನೆ ಯೋಗಾಸನ ಪ್ರದರ್ಶನಕ್ಕಾಗಿ ಧಾರವಾಡಕ್ಕೆ ಹೋಗಿ ಅಲ್ಲಿ ಬಂದು ಯೋಗವಿದ್ಯಾಶಾಲೆಯನ್ನು ಪ್ರಾರಂಭಿಸಿದರು. ಕ್ರಿ.ಶ. ೧೯೩೭ರಲ್ಲಿ ಯೋಗ ವಿದ್ಯಾಶಾಲೆಯನ್ನು ಸ್ಥಾಪಿಸಲು ಪುಣೆಯಿಂದ ಆಹ್ವಾನ ಬಂದದ್ದರಿಂದ ಅಲ್ಲಿಗೆ ಹೋಗಿ ಶಾಲೆಯನ್ನು ಪ್ರಾರಂಭಿಸಿದರು. ಕ್ರಿ.ಶ. ೧೯೫೨ರಲ್ಲಿ ಲೋಕ ವಿಖ್ಯಾತ ಯೆಹೂದಿ ಮೆನೂಹಿನ್ ರವರ ಪರಿಚಯ ದೊರೆತು ಪಾಶ್ಚಾತ್ಯ ದೇಶಗಳಿಗೂ ಹೋಗಿ ಬಂದರು. ಯೋಗಶಾಸ್ತ್ರದ ಅತಿಶ್ರೇಷ್ಠ ಬೋಧಕರಲ್ಲಿ ಅಯ್ಯಂಗಾರ್ಯರು ಒಬ್ಬರು. ಬೆಲ್ಜಿಯಂನ ಮಹಾಮಾತೆ, ಯೆಹೂದಿ ಮೆನೂಹಿನ್, ಶ್ರೀ ಜೆ. ಕೃಷ್ಣಮೂರ್ತಿ, ಕ್ಲಿಫರ್

ಕರ್ಜನ್ ಮತ್ತು ಶ್ರೀ ಜಯಪ್ರಕಾಶ್ ನಾರಾಯಣ್ ಇವರುಗಳು ಶ್ರೀ ಅಯ್ಯಂಗಾರ್ಯರ ಶಿಷ್ಯರಲ್ಲಿ ಅಗ್ರಗಣ್ಯರು. ಈಗ ಶ್ರೀಯುತರು ಪೂನಾದಲ್ಲಿನ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಯೋಗಾಸನ ತರಗತಿಗಳನ್ನು ನಡೆಸುತ್ತಿರುವುದಲ್ಲದೆ, ಲಂಡನ್, ನ್ಯೂಯಾರ್ಕ್, ವಾಷಿಂಗ್‌ಟನ್, ಬ್ರೆಸಿಲ್, ಪ್ಯಾರಿಸ್, ಬರ್ನ್ ಇವೇ ಮೊದಲಾದ ಜಗತ್ಪ್ರಸಿದ್ಧವಾದ ನಗರಗಳಲ್ಲಿ ಯೋಗಾಸನಗಳ ಅಭ್ಯಾಸಕ್ರಮವನ್ನು ಬೋಧಿಸಿರುತ್ತಾರೆ.

"Light on Yoga" ಗ್ರಂಥದ ಕನ್ನಡಾನುವಾದವೇ "ಯೋಗದೀಪಿಕಾ" ಗ್ರಂಥರಚನೆಗಿಂತಲೂ ಅದರ ಅನುವಾದ ಕಠಿಣವೆಂಬುದು ಸುವೇದ್ಯ. ಅದರಲ್ಲೂ ದರ್ಶನ ಗ್ರಂಥವೆಂದಮೇಲೆ ಮತ್ತೂ ಕಠಿಣ. ಇಂತಹ ಕಠಿಣವಾದ ಕಾರ್ಯದಲ್ಲಿ ಪ್ರೊಫೆಸರ್ ಬಿ. ಭೀಮಸೇನರಾವ್‌ರವರು ಜಯಶೀಲರಾಗಿದ್ದಾರೆ. ಭಾರತೀಯ ದರ್ಶನ ಗ್ರಂಥವೊಂದನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸುವಲ್ಲಿ ಅನುವಾದಕರಿಗೆ ಪಾರಿಭಾಷಿಕ ಪದಗಳ ಕೊರತೆ ಕಂಡುಬಂದಿಲ್ಲ.

ಪ್ರಸ್ತುತ ಪುಸ್ತಕದಲ್ಲಿ ಮೂರು ಭಾಗಗಳಿದ್ದು ಮೊದಲನೇ ಭಾಗದಲ್ಲಿ ಯೋಗದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನಿತ್ತಿದ್ದಾರೆ. ಹಠಯೋಗ ಹಾಗೂ ರಾಜಯೋಗಗಳು ಬೇರೆ ಬೇರೆ ಎಂಬ ಅಪಸ್ಮೃತಿಗೆ ಒಳಗಾಗಿರುವ ಅಂಶವನ್ನು ಖಂಡಿಸಿ ಇವೆರಡೂ ಮೋಕ್ಷ-ಸಾಧನೆಯಲ್ಲಿ ಪರಸ್ಪರ ಪೂರಕವೆಂದಿದ್ದಾರೆ. ಪಾತಂಜಲಯೋಗದರ್ಶನದಲ್ಲಿ ಉಕ್ತವಾಗಿರುವ ಚಿತ್ತವೃತ್ತಿಗಳನ್ನು ನಿರೂಪಿಸಿ, ಚಿತ್ತವಿಕ್ಷೋಭಗಳನ್ನು ಪಟ್ಟಿಮಾಡಿ ಗುರುಶಿಷ್ಯರ ಸಂಬಂಧವು ಆಧ್ಯಾತ್ಮಿಕ ವಿದ್ಯೆಯಲ್ಲಿ ಹೇಗಿರಬೇಕೆಂಬುದನ್ನು ನಿರೂಪಿಸಿದ್ದಾರೆ. ನಂತರ ಅಷ್ಟಾಂಗ ಯೋಗದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಗಳೆಂಬ ಅಷ್ಟಸೋಪಾನಗಳನ್ನು ವರ್ಣಿಸುವಲ್ಲಿ ಕೆಲವೆಡೆಗಳಲ್ಲಿ ಭಗವದ್ಗೀತೆಯ ಹಾಗೂ ಹಠಯೋಗದ ಶ್ಲೋಕಗಳನ್ನು ಉದ್ಧರಿಸಿದ್ದಾರೆ.

ಎರಡನೇ ಭಾಗದಲ್ಲಿ ಯೋಗಾಸನಗಳು, ಬಂಧ, ಕ್ರಿಯೆ ಮತ್ತು ಮುದ್ರೆಗಳ ವಿಷಯವಾಗಿ ತಿಳಿಸಿದ್ದಾರೆ. ಗ್ರಂಥದಲ್ಲಿ ಇದೇ ಅತಿ ಪ್ರಧಾನವಾದ ಭಾಗ. ಯೋಗಾಭ್ಯಾಸಿಗಳಿಗೆ ಸೂಚನೆ ಮುನ್ನೆಚ್ಚರಿಕೆ, ಅಭ್ಯಾಸಕ್ರಮ ಮತ್ತು ಪ್ರತಿಯೊಂದು ಆಸನದಿಂದ ಆಗುವ ಪರಿಣಾಮವನ್ನು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಯೋಗಾಭ್ಯಾಸಿಗೆ ಇರಬೇಕಾದ ಮುಖ್ಯ ಗುಣಗಳು, ಆಹಾರ ನಿಯಮ, ಅಭ್ಯಾಸಕ್ಕೆ ತಕ್ಕಕಾಲ, ಸ್ಥಳಸನ್ನಿವೇಶ, ಶ್ವಾಸೋಚ್ಛ್ವಾಸ ಕ್ರಮಗಳನ್ನು ಮೊದಲಲ್ಲಿ ತಿಳಿಸಿರುವುದು ಅಭ್ಯಾಸಿಗಳಿಗೆ ಬಹು ಉಪಯುಕ್ತವಾಗಿದೆ.

ನೇತ್ರರೊತ್ತಡ, ಕಿವಿಯಲ್ಲಿ ಸೋರುವಿಕೆ, ಅಕ್ಷಿಪಟದ ಸ್ಥಾನಪಲ್ಲಟ ಇವೇ ಮುಂತಾದ ರೋಗವಿರುವವರು ಹೇಗೆ ಅಭ್ಯಾಸವನ್ನು ಮಾಡಬೇಕೆಂಬುದನ್ನು ಸರಳವಾಗಿ ತಿಳಿಸಿದ್ದಾರೆ. ಸ್ತ್ರೀಯರು ಬಹಿಷ್ಠೆಯರಾದಾಗ, ಗರ್ಭಿಣಿಯರಾದಾಗ, ಪ್ರಸವಿಸಿದ ನಂತರ, ಹೇಗೆ ಆಸನಾಭ್ಯಾಸಕ್ಕೆ ತೊಡಗಬೇಕೆಂಬ ಸಂಕ್ಷಿಪ್ತ ಮಾಹಿತಿಯಿದೆ.

ಆಸನಗಳ ಜೋಡಣೆಯಲ್ಲಿ ವ್ಯವಸ್ಥೆಯಿದೆ. ಸುಲಭವಾದ ಆಸನದಿಂದ ಪ್ರಾರಂಭಿಸಿ ಕ್ಲಿಷ್ಟ ಹಾಗೂ ಕ್ಲಿಷ್ಟತಮ ಆಸನಗಳಿಗೆ ಹೋಗಿದ್ದಾರೆ. ಪ್ರತಿ ಆಸನದ ಗುರುತ್ವವನ್ನು ಸೂಚಿಸಲು ಆ ಆಸನ ಸಂಖ್ಯೆಯ ಮೇಲೆ ನಕ್ಷತ್ರದ ಗುರುತನ್ನು ಕೊಟ್ಟಿದ್ದಾರೆ. ಈ ಸಂಖ್ಯೆಯ ಬೆಲೆಯು ಆಸನದ ಗುರುತ್ವಕ್ಕೆ ಅನುಲೋಮಾನುಪಾತದಲ್ಲಿದೆ. ಅಂದರೆ ಸಂಖ್ಯೆಯ ಬೆಲೆ ಕಡಿಮೆಯಾದಷ್ಟು ಅವುಗಳ ಅಭ್ಯಾಸ ಅಷ್ಟು ಸುಲಭವೆಂದೂ ಅವುಗಳ ಬೆಲೆ ಹೆಚ್ಚಿದಷ್ಟೂ ಆಸನಗಳ ಅಭ್ಯಾಸ ಅಷ್ಟು ಕಷ್ಟವೆಂದೂ ತಿಳಿಯಬೇಕು. ಇಂತಹ ಸಂಖ್ಯೆ ಒಂದರಿಂದ ಪ್ರಾರಂಭವಾಗಿ ಅರವತ್ತರವರೆಗಿದೆ. ಕಠಿಣತೆಯಲ್ಲಿ 'ತಾಡಾಸನ'ವು ಒಂದನೆಯದಾದರೆ 'ತ್ರ್ಯಂಗಮುಖೋತ್ತಾನಾಸನ'ವು ಅರವತ್ತನೆಯದು. ಇವೆರಡರ ಮಧ್ಯೆ ಇತರ ಆಸನಗಳಿವೆ. ಒಂದೇ ಗುರುತ್ವದ ಅನೇಕ ಆಸನಗಳಿವೆ.

ಪ್ರತಿಯೊಂದು ಆಸನದ ಅಭ್ಯಾಸ ಕ್ರಮ ಮತ್ತು ಪರಿಣಾಮಗಳನ್ನು ಹೇಳುವುದರ ಜತೆಗೆ ಆ ಆಸನದ ಆವಿರ್ಭಾವದ ಬಗ್ಗೆಯೂ ಸೂಕ್ತ ಮಾಹಿತಿ ನೀಡಿದ್ದಾರೆ. ಅಭ್ಯಾಸ ಕ್ರಮವನ್ನು ವಿನ್ಯಾಸಗಳಿಗೆ ಅನುಸಾರವಾಗಿ ಒಂದೊಂದು ಹಂತಕ್ಕೆ ಒಂದೊಂದು ಸಂಖ್ಯೆಯನ್ನು ಕೊಟ್ಟು ವಿವರಿಸಿರುವುದು ಅಭ್ಯಾಸಿಗೆ ತುಂಬಾ ಅನುಕೂಲವಾಗಿದೆ. ಇದರ ಜತೆಗೆ ಪೂರಕ-ಕುಂಭಕ-ರೇಚಕಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಮಾಡಬೇಕೆಂಬುದನ್ನೂ ಮತ್ತು ಒಂದು ಆಸನದ ಪೂರ್ಣಸ್ಥಿತಿಯಲ್ಲಿ ಎಷ್ಟು ವೇಳೆ ಇರಬೇಕೆಂಬುದನ್ನೂ ತಿಳಿಸಿರುವುದು ಆಸನಾಭ್ಯಾಸಿಗಳಿಗೆ ಅತ್ಯಂತ ಉಪಯುಕ್ತವಾಗಿದೆ.

ಪ್ರತಿಯೊಂದು ಆಸನಕ್ಕೂ ಅದರ ವಿವಿಧ ವಿನ್ಯಾಸಗಳಿಗೂ ಗ್ರಂಥಕರ್ತರೇ ಚಿತ್ರಗಳನ್ನು ಇತ್ತಿದ್ದಾರೆ. ಆಸನದ ಅಗತ್ಯಕ್ಕನುಗುಣವಾಗಿ ಕೆಲವು ಆಸನಗಳಿಗೆ ಹಿನ್ನೋಟ ಮತ್ತು ಮುನ್ನೋಟ ಹಾಗೂ ಪಾರ್ಶ್ವನೋಟದ ಚಿತ್ರಗಳಿವೆ. ಇವು ಅಭ್ಯಾಸಿಗಳಿಗೆ ಮಾರ್ಗದರ್ಶನವೀಯುತ್ತವೆ. ಚಿತ್ರಗಳು ಸ್ಫುಟವಾಗಿ ಸುಂದರವಾಗಿವೆ. ಆದರೆ ಈ ಚಿತ್ರಗಳು ಗ್ರಂಥದ ಕೊನೆಯಲ್ಲಿ ಒಂದಾದಮೇಲೊಂದರಂತೆ ಮುದ್ರಿತವಾಗಿವೆ. ಆಸನದ ಅಭ್ಯಾಸದ ವಿವರಣೆಯೇ ಒಂದು ಕಡೆಯಿದ್ದು ಚಿತ್ರಗಳೇ ಇನ್ನೊಂದು ಕಡೆ ಇರುವುದು ಅಭ್ಯಾಸದ ದೃಷ್ಟಿಯಿಂದ ಸಮರ್ಪಕವಾಗಿಲ್ಲ. ಅಭ್ಯಾಸಿಯು ವಿವರಣೆಯಲ್ಲಿ ನೀಡಿದ ಚಿತ್ರ ನೋಡಬೇಕಾದರೆ ಹಾಳೆ

ತಿರುವುತ್ತಿರಬೇಕು. ಇದರ ಬದಲು ಆಯಾ ಆಸನದ ಪಕ್ಕದಲ್ಲೇ ಆಯಾ ಆಸನಗಳ ಚಿತ್ರ ಇದ್ದಿದ್ದರೆ ಅಭ್ಯಾಸಿಗಳಿಗೆ ಹೆಚ್ಚು ಅನುಕೂಲವಾಗುತ್ತಿತ್ತು. ಬಹುಶಃ ಚಿತ್ರಕ್ಕೆ ಉಪಯೋಗಿಸಿರುವ ಕಾಗದ ಬೇರೆ ಯಾದುದರಿಂದ ಈ ಕೊರತೆ ತಲೆದೋರಿರಬೇಕು. ಹೇಗಾದರೂ ಮಾಡಿ ಈ ನ್ಯೂನತೆಯನ್ನು ಪ್ರಕಾಶಕರು ಸರಿಪಡಿಸಿದ್ದಿದ್ದರೆ ಅಭ್ಯಾಸಿಗಳಿಗೆ ಹೆಚ್ಚು ಪ್ರಯೋಜನವಾಗುತ್ತಿತ್ತು.

ಗ್ರಂಥದ ಮೂರನೇ ಭಾಗದಲ್ಲಿ ಪ್ರಾಣಾಯಾಮದ ಬಗ್ಗೆ ತಿಳಿಸಿದ್ದಾರೆ. ಹಠಯೋಗದಲ್ಲಿ ಬಹು ಮುಖ್ಯವಾದ ಹಂತಗಳೆಂದರೆ 'ಆಸನ' ಮತ್ತು ಪ್ರಾಣಾಯಾಮ. ಲೇಖಕರು 'ಹಠಯೋಗಿ'ಗಳಾದುದರಿಂದ ಇವುಗಳಿಗೆ ಪ್ರಾಶಸ್ತ್ಯ ದೊರೆತಿರುವುದು ಸಹಜವಾಗಿಯೇ ಇದೆ. ಆಸನದ ನಂತರವೇ ಪ್ರಾಣಾಯಾಮದ ಅಭ್ಯಾಸವೆಂಬುದನ್ನು ಬಹುಸ್ಪಷ್ಟವಾಗಿ ನಿರೂಪಿಸಿದ್ದಾರೆ. ಪ್ರಾಣಾಯಾಮದ ಅಭ್ಯಾಸವನ್ನು ದಕ್ಷಗುರುವಿನ ಸಮ್ಮುಖದಲ್ಲಿ ಮಾಡಬೇಕೆಂಬ ಎಚ್ಚರಿಕೆಯನ್ನು ಕೊಟ್ಟಿರುವುದು ಬಹಳ ಸೂಕ್ತವಾಗಿದೆ.

"ಅಯುಕ್ತ ಪ್ರಾಣಾಯಾಮೇನ ಸರ್ವರೋಗ ಸಮುದ್ಭವಃ"

ಎಂಬ ವಾಕ್ಯಾರ್ಥವನ್ನು ತಿಳಿಯಾಗಿ ನಿರೂಪಿಸಿದ್ದಾರೆ.

'ಪ್ರಾಣಾಯಾಮ' ಎಂದರೆ ಏನೆಂಬುದನ್ನು ವಿವರಿಸಿ ಅದರ ಅಭ್ಯಾಸಕ್ಕೆ ತಕ್ಕಸ್ಥಳ, ಕಾಲ, ಭಾವ, ಭಂಗಿ ಹಾಗೂ ವಿನ್ಯಾಸಗಳನ್ನು ನಲವತ್ತೇಳು ಪ್ಯಾರಾಗಳಲ್ಲಿ ವಿವರವಾಗಿ ನಿರೂಪಿಸಿದ್ದಾರೆ. ಇದರಿಂದ ಅಭ್ಯಾಸಿಗಳಿಗೆ ತುಂಬಾ ಅನುಕೂಲವಾಗಿದೆ. ಪ್ರಾಣಾಯಾಮದಿಂದ ಕೇವಲ ದೇಹಸ್ವಾಸ್ಥ್ಯವೇ ಅಲ್ಲದೆ ಆತ್ಮಸಾಕ್ಷಾತ್ಕಾರವೂ ಆಗುತ್ತದೆಂಬುದನ್ನು ತಿಳಿಸಿದ್ದಾರೆ.

ನಂತರ ಬಂಧಗಳು, ನಾಡಿಗಳು ಮತ್ತು ಚಕ್ರಗಳ ಬಗ್ಗೆ ತಿಳಿಸಿದ್ದಾರೆ. ಪ್ರಾಣಾಯಾಮದ ಅಭ್ಯಾಸಿಗೆ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಹಾಗೂ ಸಹಸ್ರಾರು ಚಕ್ರಗಳ ಮಾಹಿತಿಯು ಅತ್ಯಗತ್ಯ. ಜಾಲಂಧರ ಬಂಧ, ಮೂಲಬಂಧ ಮತ್ತು ಉಡ್ಡೀಯಾನ ಬಂಧಗಳ ಅಗತ್ಯವೇನೆಂಬುದನ್ನು ವಿವರಿಸಿದ್ದಾರೆ. ಪ್ರಾಣಾಯಾಮದಿಂದ ಷಟ್ಚಕ್ರಗಳ ಉದ್ದೀಪನೆಯಾಗುತ್ತದೆಂಬುದನ್ನು ತಿಳಿಸಿದ್ದಾರೆ.

ಇಷ್ಟು ವಿಷಯ ಹೇಳಿದ ನಂತರ ಪ್ರಾಣಾಯಾಮದ ಅಭ್ಯಾಸಕ್ರಮ ಮತ್ತು ಅದರ ಪರಿಣಾಮಗಳನ್ನು ಒಂದೊಂದಾಗಿ ವಿವರಿಸಿದ್ದಾರೆ. ಒಟ್ಟು ಹದಿನಾಲ್ಕು ಪ್ರಾಣಾಯಾಮಗಳನ್ನು ಮಾತ್ರ ಹೇಳಿದ್ದಾರೆ.

ಗ್ರಂಥದ ಕೊನೆಯಲ್ಲಿ ಎರಡು ಪರಿಶಿಷ್ಟಗಳನ್ನು ಸೇರಿಸಿರುವುದು ಈ ಗ್ರಂಥದ ಒಂದು ವೈಶಿಷ್ಟ್ಯ. ಪರಿಶಿಷ್ಟ-Iರಲ್ಲಿ ಆಸನಗಳನ್ನು (ಅ) ಹಗುರ (ಆ) ಮಧ್ಯಮ

ಮತ್ತು (ಇ) ಕ್ಲಿಷ್ಟ ಅಥವಾ ಮುಂದುವರಿದ ಎಂದು ಮೂರು ಭಾಗಗಳಾಗಿ ವಿಂಗಡಿಸಿ, ಅವುಗಳನ್ನು ಯಾವ ಕ್ರಮವಲ್ಲಿ ಅಭ್ಯಸಿಸಬೇಕು, ಒಂದೊಂದೂ ಆಸನದಲ್ಲಿ ಪರಿಣತಿಯನ್ನು ಪಡೆಯಲು ಎಷ್ಟು ದಿವಸ ಅಭ್ಯಾಸ ಮಾಡಬೇಕು ಎಂಬ ವಿಷಯವನ್ನು ವಿವರಿಸಿದ್ದಾರೆ. ಒಂದೊಂದು ವಾರಕ್ಕೂ (ಏಳು ದಿನ) ಇಂತಿಷ್ಟು ಆಸನಗಳು ಎಂದು ವಿಭಜಿಸಿ ಮೊದಲನೇ ವಾರದಿಂದ ಹಿಡಿದು ಮುನ್ನೂರನೇ ವಾರದವರೆಗೆ ಅಭ್ಯಾಸಮಾಡಬೇಕೆಂದಿದ್ದಾರೆ. ಇದರ ರೀತ್ಯಾ ಈ ಗ್ರಂಥದಲ್ಲಿರುವ ಒಟ್ಟು ಇನ್ನೂರು ಆಸನಗಳಲ್ಲಿ ಪರಿಣತಿ ಪಡೆಯಲು ಸುಮಾರು ಆರುವರ್ಷ ಕಾಲ ಬೇಕು. ಇಷ್ಟೇ ಅಲ್ಲದೆ ವಾರದ ಮೊದಲನೇ ದಿನದಿಂದ ಹಿಡಿದು ಏಳನೇ ದಿನದವರೆಗೆ ಯಾವ ಯಾವ ಆಸನಗಳನ್ನು ಎಂದೆಂದು ಅಭ್ಯಾಸ ಮಾಡಬೇಕು ಎಂಬುದನ್ನು ತಿಳಿಸಿರುವುದು ಅಭ್ಯಾಸಿಗಳಿಗೆ ತುಂಬಾ ಉಪಯುಕ್ತವಾಗಿದೆ.

ಪರಿಶಿಷ್ಟ-II ರಲ್ಲಿ ವಿವಿಧ ರೋಗಗಳು ಮತ್ತು ಅವುಗಳನ್ನು ಗುಣಪಡಿಸುವ ಎಲ್ಲ ಆಸನಗಳನ್ನೂ ಪಟ್ಟಿಮಾಡಿದ್ದಾರೆ. ಯೋಗ ಚಿಕಿತ್ಸಕರಿಗೆ ಈ ಪರಿಶಿಷ್ಟ ಅತ್ಯಂತ ಉಪಯುಕ್ತವಾಗಿದೆ. ಈ ಪರಿಶಿಷ್ಟವು ಗ್ರಂಥಕರ್ತರ ಸ್ವಾನುಭವದಿಂದ ಹೊರಹೊಮ್ಮಿರುವುದರಿಂದ ಇದಕ್ಕೆ ತುಂಬಾ ಮಹತ್ವವಿದೆ. ಆಸನಗಳನ್ನು ನುರಿತ ಶಿಕ್ಷಕರ ನೇತೃತ್ವದಲ್ಲಿ ತನ್ನ ಶಕ್ತಿಗೆ ಮತ್ತು ದೇಹರಚನೆಗೆ ತಕ್ಕಂತೆ ಅಭ್ಯಸಿಸಬೇಕೆಂದು ಹೇಳಿರುವುದು ಗಮನಾರ್ಹವಾದ ವಿಷಯ. ಇಂದಿನ ಯುವಕರು ಕೇವಲ ಪುಸ್ತಕಾವಲೋಕನದಿಂದ ಯೋಗಾಭ್ಯಾಸಮಾಡಿ ಅನೇಕ ತೊಂದರೆಗಳಿಗೆ ಗುರಿಯಾಗುತ್ತಿದ್ದಾರೆ. ಅಂತಹವರಿಗೆ ಈ ಎಚ್ಚರಿಕೆಯ ಮಾತು ಅತ್ಯಗತ್ಯ.

ಯೋಗಾಭ್ಯಾಸದಿಂದ ಎಂತಹ ಹಳೆಯ ಭಯಂಕರ ರೋಗವಾದರೂ ಗುಣವಾಗುತ್ತದೆಂಬ ನಂಬಿಕೆಯು ಗ್ರಂಥಕರ್ತರಿಗಿದೆ; ಇದು ನಿಜವೂ ಹೌದು, ಉದಾಹರಿಸುವುದಾದರೆ ಗೂರಲು, ನೆತ್ತರೊತ್ತಡ, ಸ್ಮರಣಶೂನ್ಯತೆ, ಮಲಬದ್ಧತೆ, ಅಪಸ್ಮಾರ, ಸಂಧಿವಾತ, ಹೃದಯರೋಗ, ತಲೆಶೂಲೆ, ಅಂಡವಾಯು, ನಪುಂಸಕತ್ವ, ನಿರ್ನಿದ್ರತೆ, ಸ್ತ್ರೀರೋಗಗಳು, ಪೋಲಿಯೋ, ಪಾರ್ಶ್ವವಾಯು, ಮೂಲವ್ಯಾಧಿ, ಲೈಂಗಿಕ ರೋಗಗಳು, ಬಂಜೆತನ, ರಾಜಯಕ್ಷ್ಮವೇ ಮೊದಲಾದ ರೋಗಗಳು ಯೋಗಾಭ್ಯಾಸದಿಂದ ನಿವಾರಣೆಯಾಗುತ್ತದೆಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ಯೋಗಾಭ್ಯಾಸದಲ್ಲಿ ಆಸಕ್ತರಾದವರಿಗೆ ಈ ಪುಸ್ತಕವು ಗುರುವಿನ ಸ್ಥಾನದಲ್ಲಿ ನಿಲ್ಲುತ್ತದೆಂದು ನಿಸ್ಸಂದೇಹವಾಗಿ ಹೇಳಬಹುದು.

ಯೋಗಾಚಾರ್ಯ ಕೆ. ಕೇಶವಮೂರ್ತಿ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6 | LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

Edited by R. Boraiah, Printed by H. G. Ramaswamy Iyengar Manager, Karnataka State Adult Education Council Press and Published by Karnataka State Adult Education Council Mysore city (India)